
ಕಲ್ಯಾಣ ಕಿರಣ

ಬೆಲೆ ರೂ. ೩

ಫೆಬ್ರವರಿ ೧೯೯೪



Digitalized by e-Sahithya Documentation Forum
Sponsored by Sarayu Foundation Trust

ಕಲ್ಯಾಣ ಕಿರಣ

ಮಾಸ ಪತ್ರಿಕೆ, ಫೆಬ್ರುವರಿ-1994, ಬಿಡಿ ಸಂಚಿಕೆ 3-00 ರೂ.

ಸಂಪುಟ : 22 ಸಂಚಿಕೆ : 9 ಬಸವ ಶಕೆ : 888,
ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300-00

ಕಿರಣಗನ್ನಡಿ

ಮುಖಪುಟ : ಸಮುದಾಯ ಪ್ರಾರ್ಥನೆ ಮಾಡುವ ಶರಣ ಗಣಕ್ಕೆ ಬಸವಣ್ಣನವರ ಅಭಯ ಆಶೀರ್ವಾದ.

ಹೊದ್ದಿಕೆಯ 4 ನೇ ಪುಟ : ಏಳನೆಯ ಶರಣ ಮೇಳವನ್ನು ಉದ್ಘಾಟಿಸು-ತ್ತಿರುವ ಶರಣೆ. ಬಸವರಾಜೇಶ್ವರಿ ಕೇಂದ್ರ ಸಚಿವೆ.

ಬೆಂಗಳೂರು ವಿಳಾಸ : ಕಲ್ಯಾಣ ಕಿರಣ ಮಾಸ ಪತ್ರಿಕೆ, ಬಸವ ಮಂಟಪ, 2035, 2ನೇ ಬ್ಲಾಕ್, 20 ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-10. ದೂರವಾಣಿ : 3325335

ಹೃದಯದ ಆಶಯ

ಬಸವ ಭಾನುವೆ ನಿನ್ನ ಕಿರಣವದು ಪಸರಿಸಲಿ
ಯಶದಿಂದ ಚದುರಿಸಲಿ ಈ ಇಳೆಯ ಕತ್ತಲೆಯ ॥ ಪ ॥

ವಿಶ್ವಧರ್ಮದ ಕಾಂತಿ ಸುತ್ತಲೂ ಹಬ್ಬಿಸಲಿ
ವಿಶ್ವಶಾಂತಿಯ ಪ್ರಣವ ನಾದವಂ ಕೇಳಿಸಲಿ ॥ ಅ.ಪ ॥

ವಚನ ವಾಙ್ಮಯ ಗಂಗೆ ದೀನರಂ ಮೀಯಿಸಲಿ
ಮುಸುಕಿರುವ ಮೌಢ್ಯತೆಯ ಕಶ್ಮಲವ ತೊಳೆಯಲಿ
ಕ್ರಾಂತಿ ವೀರನೆ ನಿನ್ನ ಜಾಗೃತಿಯ ಖಡ್ಗವು
ಭ್ರಾಂತಿ ಭೀತಿಗಳನ್ನು ಕತ್ತರಿಸಿ ಚೆಲ್ಲಲಿ ॥ ೧॥

'ದಯವೆ ಧರ್ಮದ ಮೂಲ' ಎಂಬ ನುಡಿ ಬೇಕೆಮಗೆ
'ಕಾಯಕವೇ ಕೈಲಾಸ' ಮಂತ್ರವಾಗಲಿ ಇಳೆಗೆ
ಮರ್ತ್ಯಲೋಕದ ಈ ಕರ್ತನಾ ಕಮ್ಮಟದಿ
ಸತ್ಯಮಯ ಬದುಕಿನಿಂ ಸಲುವ ನಾಣ್ಯವಿದಾಗೆ ॥ ೨॥

ಮನುಜ ಕಲ್ಪಿತ ಜಾತಿ ಹೆರೆ ತೊಲಗಿ ಹೋಗಲಿ
ವಿಶ್ವಮಾನವ ಪ್ರೀತಿ ಹೊನಲಾಗಿ ಹರಿಯಲಿ
ಐಹಿಕದ ಬಾಳಿದು ದೇವನನ್ನೊಲಿಸಲಿ
ಬಸವಗುರು ನಿನ್ನಯ ಕರುಣೆ ಕಾಪಾಡಲಿ ॥ ೩॥

— ಜಗದ್ಗುರು ಮಾತೆ ಮಹಾದೇವಿ

ಶರಣ ಮೇಳದ ಯಶಸ್ಸು

ಧನ್ಯವಾದಗಳು

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ಬಸವಕ್ರಾಂತಿ ದಿನದ ಅಂಗವಾಗಿ ಜನವರಿ ೧೨ ರಿಂದ ೧೫ರ ವರೆಗೆ ಏಳನೆಯ ಶರಣ ಮೇಳವು ನಡೆಯಿತಷ್ಟೆ. ಹಿಂದಿನ ಎಲ್ಲ ಶರಣ ಮೇಳಗಳನ್ನು ಎಲ್ಲ ದೃಷ್ಟಿಯಿಂದಲೂ ಮೀರಿಸಿತು. ಅಕ್ಟೋಬರ್ ೨೭ ರಂದು, ನಾನು ಭೀಕರವಾದ ಕಾರಿನ ಅಪಘಾತಕ್ಕೆ ಒಳಗಾದಾಗ, ಭಯಂಕರ ಏಟಾಗಿ ಪ್ರಾಣಾಪಾಯದಿಂದ ಪಾರಾದರೂ ಸಿದ್ಧತೆಯ ಸಮಯ ಅದಾದ್ದರಿಂದ ಅಪಾರ ಕಳವಳ ಆರಂಭವಾಯಿತು. ಶರಣ ಮೇಳದ ಒಳಗೆ ಚೇತರಿಸಿಕೊಂಡು ನಾನು ಕಾರ್ಯಕ್ರಮದಲ್ಲಿ ಭಾಗವಹಿಸಬಲ್ಲೆನೆ ? ಎಂಬುದು ಒಂದು ಆತಂಕವಾದರೆ, ಏನಾದರೂ ಬರೆಯಲು ಕಣ್ಣು ತೆರೆಯುತ್ತಲೇ ಕಣ್ಣುಗಳು ಬಾತುಕೊಂಡು ನೋಯುತ್ತಿದ್ದವು. ವೈದ್ಯರು ಬರೆಯದಿರಲು, ಓದದಿರಲು ಸೂಚಿಸುತ್ತಿದ್ದರು, ಒತ್ತಾಯಿಸುತ್ತಿದ್ದರು. ಎಲ್ಲ ಕಡೆಗೂ ಸಹಸ್ರಾರು ಪತ್ರಗಳನ್ನು ಬರೆದು, ದೇಣಿಗೆ ಕೇಳುವ, ದೇಣಿಗೆ ಸಂಗ್ರಹಿಸುವ ಸಮಯವದು. ವರ್ಷದಿಂದ ವರ್ಷಕ್ಕೆ

Digitalized by e-Sahithya Documentation Forum
Sponsored by Sarayu Foundation Trust

ಆಗಮಿಸುವ ಶರಣ ಬಂಧುಗಳ ಸಂಖ್ಯೆ ಹೆಚ್ಚಾಗುತ್ತಿರುವುದೂ ಎಲ್ಲರಿಗೂ ಶ್ರುತವಿರುವ ಸಂಗತಿ ತಾನೆ ?

ನಮ್ಮ ಶರಣ ಬಂಧುಗಳು ಈ ದಿಶೆಯಲ್ಲಿ ತಮ್ಮ ಕರ್ತವ್ಯಪ್ರಜ್ಞೆಯ ಜಾಗೃತಿ ತಾಳಿದರು. ಈ ಸಲ ಅವರ ಭಾರ ಹಿರಿದಾಯಿತು ಎಂದರಿತು ಅವರವರೇ ಕಾರ್ಯೋನ್ಮುಖರಾದರು. ತನು - ಮನ - ಧನ - ಅಭಿಮಾನ - ಸಮಯ - ಆರೋಗ್ಯ ಎಲ್ಲವನ್ನೂ ಸಮರ್ಪಿಸಿ ದುಡಿದು ಶರಣ ಮೇಳವನ್ನು ಯಶಸ್ವಿಗೊಳಿಸಿದರು. (ಒಂದು ಊರಿನ ಮಠಕ್ಕೆ ನಮ್ಮ ಶರಣ ಮೇಳ ಉತ್ಸವ ಸಮಿತಿಯ ಶರಣರು ಹೋದಾಗ ಆ ಊರಿನ ಮಠಾಧಿಪತಿಗಳು ಈ ಶರಣ ಮೇಳ ಎಷ್ಟು ದಿನ ನಡೆಯುತ್ತೆ ನೋಡಿರಿ. ಎಂದು ದ್ವೇಷದಿಂದ ಮಾತನಾಡಿದರಂತೆ. ಬಹುಶಃ ಅಂತಹವರಿಗೆ ಉತ್ತರಿಸಲೆಂದೇ ಬಸವಗುರುವು ಈ ಸಲದ ಶರಣಮೇಳವನ್ನು ಅತ್ಯಂತ ಯಶಸ್ವಿಗೊಳಿಸಿರಬೇಕು. ಇದರಿಂದ ಎಲ್ಲ ಶರಣ ಬಂಧುಗಳು ತಮ್ಮ ಕರ್ತವ್ಯವನ್ನು ತಾವು ನಿರ್ವಹಿಸಿದರೆ ಶರಣ ಮೇಳ ಅಬಾಧಿತವಾಗಿ ನಡೆಯುತ್ತದೆ ಎಂಬುದನ್ನು ಏಳನೆಯ ಶರಣಮೇಳ ಪ್ರತ್ಯಕ್ಷ ಮಾಡಿ ತೋರಿಸಿದೆ).

ಹಲವಾರು ಸಂಘ-ಸಂಸ್ಥೆಗಳು, ಮಠಾಧೀಶರು ಆ ದಿನಾಂಕಗಳಲ್ಲೇ ಹೊಸಹೊಸ ಕಾರ್ಯಕ್ರಮಗಳನ್ನು ಯೋಜಿಸಿ ಜನರ ಚಿತ್ತವನ್ನು ಬೇರೆ ಕಡೆ ತಿರುಗಿಸಬೇಕು ಎಂದರೂ, ಶರಣಮೇಳದ ಶ್ರೋತೃಗಳ ಸಂಖ್ಯೆ ಹಿರಿದಾದುದು ಒಂದು ವಿಶೇಷ. ಶರಣರ ಸಂಖ್ಯೆ ವಿಪರೀತ ಹಿರಿದಾದರೂ ಕಾರ್ಯಕರ್ತರು ಶ್ರಮಿಸಿದ ಬಗೆ ಅಪೂರ್ವವಾದುದು. ಜನಪ್ರವಾಹ ಅಗಾಧವಾಗಿ ಧಾವಿಸಿದರೂ ಒಂದಿಷ್ಟೂ ಎದೆಗುಂದದೆ ತಕ್ಷಣವೇ ಹೆಚ್ಚು ಹೆಚ್ಚು ಕೌಂಟರುಗಳನ್ನು ತೆರೆದು, ತಾವು ತಾವೇ ಸೇವಾ ವ್ಯವಸ್ಥೆಯನ್ನು ಕಾರ್ಯಕರ್ತರು ಕ್ರಮಗೊಳಿಸಿದ್ದಾರೆ. ನಮಗಂತೂ ಸೂಚನೆ ನೀಡಲು, ಹೇಳಲು-ಕೇಳಲು ಸಮಯವಿರದು. ನಂತರವೇ ಎಲ್ಲ ವರದಿ ಪ್ರಾಪ್ತವಾಗುವುದು. ಲಭ್ಯವಿರುವ ಹದಿನಾಲ್ಕೂವರೆ ಎಕರೆ ಜಾಗವೂ ಈ ಸಲ ಟೆಂಟುಗಳಿಂದ ತುಂಬಿ ಹೋಯಿತು. ಹೆಚ್ಚುವರಿ ಟೆಂಟ್ ಹಾಕಲು ಮುಂದಿನ ವರ್ಷಕ್ಕೆ ಜಾಗಕ್ಕೆ ಏನು ಮಾಡಬೇಕೆಂಬುದೇ ಚಿಂತೆಯಾಗಿದೆ.

ಹೀಗೆ ಯಾವುದೊಂದು ಕೊರತೆಯೂ ಆಗದಂತೆ ತನು-ಮನ-ಧನಗಳಿಂದ ದುಡಿದ ಎಲ್ಲ ಶರಣರಿಗೂ ಧನ್ಯವಾದಗಳನ್ನು ಅರ್ಪಿಸದೆ ಇರೆನು.

ಗುರು ಬಸವಣ್ಣನಿಗೆ

ಸಂಗಮೇಶ್ವರ ದೇವಾಲಯದವರು, ಶಾಸಕ ಶ್ರೀ ಕಾಶಪ್ಪನವರು ಹಠದ ಮೇಲೆ ಪಂಚಾಚಾರ್ಯರನ್ನು ಕರೆಸುವ ಯೋಜನೆ ರೂಪಿಸಿದಾಗ ಮನಸ್ಸು ಆರಂಭದಲ್ಲಿ ಖಿನ್ನವಾಯಿತು. "ಏಕಪ್ಪಾ, ಬಸವಣ್ಣಾ. ಹೀಗೇಕೆ ಅವರಿಗೆ ದುಷ್ಟ ಪ್ರೇರಣೆ ನೀಡುವೆ. ಸರಾಗವಾಗಿ ಶರಣಮೇಳ ನಡೆಯುವುದು ನಿನಗಿಷ್ಟವಿಲ್ಲವೆ ?" ಎಂದು ಬಸವಗುರುವಿನ ಭಾವಚಿತ್ರವನ್ನು ನಿಟ್ಟಿಸುವಾಗ ಬಸವಗುರುವು ಮುಗುಳ್ನಕ್ಕಂತಾಯಿತು ತಕ್ಷಣವೇ ಒಂದು ವಚನವು ಸ್ಮೃತಿ ಪಟಲದ ಮೇಲೆ ಹಾಯಿತು.

"ನಿಮ್ಮ ಭಕ್ತಿಯ ಘನವ ನೀವೇ ಮೆರೆಯಲೆಂದು
ಪರವಾದಿ ಬಿಜ್ಜಳನ ತಂದೊಡ್ಡಿ
ಎನ್ನನ್ನು ಅವನೊಡನೆ ಹೋರಿ......"

"ಓಹೋ... ಬಸವಣ್ಣನಿಗೆ ತನ್ನ ಪುಣ್ಯದ ಲೀಲೆಯನ್ನು ಮೆರೆಸಿಕೊಳ್ಳುವ ಹಂಬಲವೋ.... ಇದು ಲೀಲೆಯೇ ಇರಬೇಕು !" ಎಂದು ಅಂದೇ ಸಂಕಲ್ಪ ಮಾಡಿದೆ. 'ಆ ಗುಂಪಿನವರು ಏನೇ ಕೆರಳಿಸ ಬಂದರೂ ನಾವು ಶಾಂತರಾಗಿ, ಸುಸಂಸ್ಕೃತ'ರಾಗಿ ವರ್ತಿಸಬೇಕು. ಅವರು ಏನಾದರೂ ಮೆರೆದುಕೊಂಡು ಹೋಗಲಿ....

ನಿಜ, ನಮ್ಮ ಊಹೆ ದಿಟವಾಯಿತು. ಅಬ್ಬರದ ಜಾಹಿರಾತುಗಳು ದಿನಪತ್ರಿಕೆಗಳಲ್ಲಿ ವಿಜೃಂಭಿಸಿದವು. ಆದರೂ ಅವರ ಪಲ್ಲಕ್ಕಿ ಉತ್ಸವಕ್ಕೆ ಸ್ವಯಂ ಪ್ರೇರಿತರಾಗಿ ಬಂದ ಜನರ ಸಂಖ್ಯೆ ನೋಡಿದರೆ, ಪಂಚಚಾರ್ಯರ ಪ್ರಭಾವ ಸಮಾಜದ ಮೇಲೆ ಎಷ್ಟಿದೆ ಎಂಬುದು ಮನವರಿಕೆಯಾಯಿತು. ಬಸವಗುರುವಿನ ಭಾವಚಿತ್ರದ ಕೆಳಗೆ ಹಾಯುವುದಿಲ್ಲ ಎಂದು ಕಮಾನನ್ನು, ಭಾವಚಿತ್ರವನ್ನು ಕೆಡವಿಸಿದ್ದಂತೂ ಇನ್ನಷ್ಟು ಅವರನ್ನು ಕೆಳಗಿಳಿಸಿತು. ಅವರು ಸಕಾಲದಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ವಿವೇಕಿಗಳಲ್ಲ ಎಂಬುದು ಸಾಬೀತಾಯಿತು. ಕಾಶಪ್ಪನವರು ಅಧಿಕಾರ ಮದಾಂಧರಾಗಿ ಕ್ರೂರ ನರ್ತನೆಗೆ ಪ್ರಯತ್ನಿಸಿದ್ದರೂ, ಪಂಚಾಚಾರ್ಯರು 'ನಾವೇನು ಬಸವ ವಿರೋಧಿಗಳಲ್ಲ. ಶಾಸಕರೇ ಹಾಗೆ ಮಾಡಬೇಡಿರಿ' ಎಂದಿದ್ದರೆ ಪ್ರಸ್ತುತ ಸಮಾಜದಲ್ಲಿ ಬಹುಸಂಖ್ಯಾತರಾದ ಬಸವ ಭಕ್ತರ ಭಕ್ತಿ-ಗೌರವಗಳನ್ನು ಅವರು ಸಹಜವಾಗಿ ಪಡೆಯುತ್ತಿದ್ದರು. ಪಾಪ, ಆ ಅದೃಷ್ಟ ಅವರಿಗಿಲ್ಲ. ಜನರ ಭಕ್ತಿ-ಗೌರವ ಅತ್ತಲಿರಲಿ ಸಹಾನುಭೂತಿ ಸಹ ಕಳೆದುಕೊಂಡರು. ಬಹುಶಃ ಇದು ಬಸವಣ್ಣನವರ ಯೋಜನೆ ಇರಬೇಕೇನೊ ! ಏಕೆಂದರೆ ಬಸವ ತತ್ತ್ವಕ್ಕೆ ವಿರುದ್ಧವಾದ ಆಚರಣೆಗಳನ್ನೇ ನಖಶಿಖಾಂತವಾಗಿ ತುಂಬಿಕೊಂಡು ನಾವು ಬಸವಣ್ಣನವರ ಅನುಯಾಯಿಗಳೇ ಎಂದು ಹೇಳುತ್ತಿದ್ದರಿಂದ ಬಸವಣ್ಣನವರಿಗೂ ಸಾಕಷ್ಟು ಬೇಸರ ಉಂಟಾಗಿ, ಇವರ ಕಪಟ ಭಕ್ತಿ-ಅಭಿಮಾನಗಳನ್ನು ಬೈಲಿಗೆಳೆಯಲು ಈ ಯೋಜನೆ ರೂಪಿಸಿರಬಹುದು.

ಬೆಂಗಳೂರಿನ ಓರ್ವ ಗಣ್ಯರ ಮುಂದೆ, ಅಪಘಾತವಾದಾಗ ನೋಡಲು ಬಂದಾಗ, ನಾನು ಹೇಳಿದ್ದೆ. ಆಗ ಅವರು ಹೇಳಿದ್ದರು, "ಇದು ಅನುಚಿತ. ನಾನು ದೇವಸ್ಥಾನದವರಿಗೆ ಮತ್ತೂ ಶಾಸಕರಿಗೆ ಪತ್ರ ಬರೆಯುವೆ. ಇನ್ನಿತರ ಸಮಯದಲ್ಲಿ ಏನಾದರೂ ಮಾಡಿಕೊಳ್ಳಲಿ. ಶರಣಮೇಳದ ಸಮಯದಲ್ಲಿ ಇಂಥ ಸ್ಪರ್ಧೆ ಏಕೆ? ಇಷ್ಟಕ್ಕೂ ಮಿಕ್ಕಿ ಮಾಡಿಕೊಂಡರೆ ಮಾಡಿಕೊಳ್ಳಲಿ. ತಾವು ಅದರ ಬಗ್ಗೆ ಬಹಳ ಆಲೋಚಿಸಬೇಡಿರಿ. ಹಿಂದೆ ಡಾ. ಜಚನಿ ಅವರಿಗೆ ಆದಂತೆ ಇವರಿಗೂ ಮುಖಭಂಗವಾಗಬೇಕೆಂದೇ ಇದ್ದರೆ ಯಾರು ತಪ್ಪಿಸಬಲ್ಲರು ?"

ಅವರ ಬಾಯಿಂದ ಈ ಮಾತು ಬರುತ್ತಲೇ ನನಗೆ ಆಶ್ಚರ್ಯವಾಯಿತು. ಏಕೆಂದರೆ ಅವರು ಅತ್ಯಂತ ಸಾತ್ವಿಕರು, ನಿಜ ಶರಣರು, ಹಿಮಾಲಯ ಪರ್ವತದಷ್ಟು ಶೀತಲ, ಸಿಟ್ಟು-ದ್ವೇಷ ಇಲ್ಲದ ಶುದ್ಧ ಮನಸ್ಕರು. 'ಇವರದು ಪ್ರಸಾದ ವಾಣಿಯೇ ಇರಬೇಕು, ನೋಡೋಣ.' ಎಂದುಕೊಂಡೆ. ಅದು ಹಾಗೆಯೇ ನಡೆಯಿತು. ಬಸವಣ್ಣನ ಪವಿತ್ರ ಐಕ್ಯಭೂಮಿಯಲ್ಲಿ ಅಡ್ಡಪಲ್ಲಕ್ಕಿಯವರು ತಮ್ಮ ಆಡಂಬರ-ಜನಪ್ರಿಯತೆ-ಶಕ್ತಿ ಪ್ರದರ್ಶನ ಮಾಡಬಂದು ಇನ್ನಷ್ಟೂ ಕೀರ್ತಿಪತನಗೊಳಿಸಿಕೊಂಡುದು ಸೋಜಿಗದ ಲೀಲೆಯೇ ಸರಿ.

Digitalized by e-Sahithya Documentation Forum
Sponsored by Sarayu Foundation Trust

ಹರಿಹರ ಕವಿ ಹೇಳುವಂತೆ,

"ಬಸವನ ರಕ್ಷೆಯೇ ರಕ್ಷೆ ಲೋಕದೊಳ್
ಬಸವನ ಶಿಕ್ಷೆಯೇ ಶಿಕ್ಷೆ" ಎಂಬುದು ಪರಮ ಸತ್ಯ.

ಇನ್ನೊಬ್ಬ ಕವಿ ಹೇಳುವಂತೆ,

ನಂಬುವವರ ಎದೆಯೊಳಗೆ ಇಂಬು ನೀನೇ ಬಸವಲಿಂಗ
ನಂಬಿಗಿಲ್ಲದವರ ಎದೆಯೊಳಂಬು ನೀನೇ ಬಸವಲಿಂಗ

ನೈಸರ್ಗಿಕ ಪವಾಡ

ಸಿಂಗಿರಾಜನ ಕಾವ್ಯದಲ್ಲಿ ಗುರುಬಸವಣ್ಣನವರು, ಸೂರ್ಯನನ್ನು ತಡೆದು ನಿಲ್ಲಿಸಿದ ಒಂದು ಪವಾಡ ವರ್ಣಿತವಾಗಿದೆ. ನಾವು ಊಹಿಸಿದ್ದು ಹೀಗೆ, "ಕೊಂಡೆಯ ಮಂಚಣ್ಣಾದಿಗಳು ಭಂಡಾರ ದುರುಪಯೋಗ ಆರೋಪ ಕೊಟ್ಟಾಗ ಹಗಲು ರಾತ್ರಿಯ ಪರಿವೆ ಇಲ್ಲದೆ ಬಿಜ್ಜಳನಿಗೆ ಲೆಕ್ಕ ತೋರಿಸಿ ಬಸವಣ್ಣನವರು ತಮ್ಮ ಪ್ರಾಮಾಣಿಕತೆ ತೋರಿಸಿಕೊಂಡರು."

ಆದರೆ ಈಗ ಮಾತ್ರ ಎರಡು ಪವಾಡಗಳು ಎಲ್ಲರ ಅನುಭವಕ್ಕೆ ಬಂದವು. ಶರಣಮೇಳಕ್ಕೆ ಮೊದಲು ಗದಗುಟ್ಟುವ ಚಳಿ, ಶೀತಲಗಾಳಿ ಭಯಪಡಿಸಿದ್ದವು. ಎರಡು ಮೂರು ದಿನ ಮೊದಲು ಚಳಿ ಇಳಿದು ಬೆಚ್ಚನೆಯ ಉಲ್ಲಾಸಕರ ವಾತಾವರಣ ಹರಡಿತು. ಹದಿನೇಳನೆ ತಾರೀಖಿನ ನಂತರ ಪುನಃ ಚಳಿ ಆರಂಭವಾಯಿತು. ನಿಸರ್ಗವನ್ನು ದೈವೀಶಕ್ತಿ ನಿಯಂತ್ರಿಸಬಹುದೆ ? ಎಂದೆನಿಸಿತು.

೧೪-೧-೧೯೯೪ಳ ರಾತ್ರಿ ಮಕ್ಕಳ ಕಾರ್ಯಕ್ರಮ ನಡೆದಿತ್ತು. ಜನರು ತುಂಬಾ ಆನಂದಭರಿತರಾಗಿದ್ದರು. ನಾಲ್ಕಾರು ಮಳೆಹನಿಗಳು ಪಟಪಟನೆ ಉದುರಿದವಂತೆ. ನನ್ನ ಗಮನಕ್ಕೆ ಬರಲಿಲ್ಲ. ಕೆಲವರು ಮನಸ್ಸಿನಲ್ಲಿ ಆತಂಕಪಟ್ಟುಕೊಂಡರಂತೆ. ೧೬.೧.೧೯೯೪ಳ ರಂದು ರಾತ್ರಿ ರಭಸದ ಮಳೆ ಹೊಡೆಯಿತು. ವಿದ್ಯುತ್ ಸಂಪರ್ಕ ನಿಂತಿತು. ನೀರು ಹರಿದು ಎಲ್ಲೆಡೆ ಕೆಸರೋ ಕೆಸರು. "ಅಬ್ಬಬ್ಬಾ, ಈ ಮಳೆ ೧೨ ರಿಂದ ೧೫ ತಾರೀಖಿನ ಅವಧಿಯಲ್ಲಿ ಬಂದಿದ್ದರೆ ಏನು ಮಾಡಬೇಕಿತ್ತು. ಊಹಿಸಲು ಸಾಧ್ಯವಿಲ್ಲ ! ಮಲಗಲು ಇರಲಿ, ಕುಳಿತುಕೊಳ್ಳಲು ಸಹ ಜಾಗ ಒದಗಿಸಲು ಸಾಧ್ಯವಿರಲಿಲ್ಲ" ಎಂದು ಉದ್ಗರಿಸಿದಾಗ ಕೆಲವರು ಹೇಳಿದರು, ೧೪.೧.೯೪ಳ ರಂದು ರಾತ್ರಿ ಇಳಕಲ್-ಹುನಗುಂದಗಳಲ್ಲಿ ಭಾರಿ ಮಳೆ. ಜಮೀನುಗಳಲ್ಲಿ ನೀರು ಹರಿದಿದೆ. ಇಲ್ಲಿ ಳ ಹನಿ ಉದುರಿದವು; ಆದರೆ ಮಳೆ ಬೀಳಲಿಲ್ಲ. ಎಂದರು. ಆಗ ಅಚ್ಚರಿಯೋ ಅಚ್ಚರಿ.

"ಬಸವಗುರುವು ತಮ್ಮ ಮಕ್ಕಳ ಕಾಳಜಿಯನ್ನು ಎಷ್ಟು ಚೆನ್ನಾಗಿ ಮಾಡುತ್ತಾರಲ್ಲ ! ನಮ್ಮ ಕೆಲಸಕ್ಕಿಂತಲೂ ಅವರ ಸಂಕಲ್ಪವೇ ಅದ್ಭುತವಾಗಿ ಕಾರ್ಯಮಾಡುವುದಲ್ಲ !"

ಇಂಥ ಗುರುವಿಗೆ ಅನಂತ ಧನ್ಯವಾದ ಅರ್ಪಿಸೋಣ. ನಮಗೆ ಎಂಥಾ ಪುಣ್ಯದ ಅವಕಾಶ ದೊರೆತಿದೆಯಲ್ಲಾ. ಅವರ ಸಂದೇಶ ವಾಹಕರನ್ನಾಗಿ ನಮ್ಮನ್ನು ಆರಿಸಿಕೊಂಡಿದ್ದಾರಲ್ಲ ಎಂದು ಹೆಮ್ಮೆಪಡೋಣ, ಇನ್ನಷ್ಟು, ಮತ್ತಷ್ಟು ಭಕ್ತಿ-ಶ್ರದ್ಧೆ-ನಿಷ್ಠೆಗಳನ್ನು ಮೈಗೂಡಿಸಿಕೊಂಡು ನೀವು-ನಾವೆಲ್ಲ ದುಡಿಯೋಣ.

— ಜಗದ್ಗುರು ಮಾತೆ ಮಹಾದೇವಿ

ಶರಣ ಸಂಸ್ಕೃತಿ ಎತ್ತಿ ಹಿಡಿದ ಶರಣ ಬಂಧುಗಳಿಗೆ ಅಭಿನಂದನೆ

ಶರಣಮೇಳಕ್ಕೆ ಮುನ್ನ ಎಲ್ಲೆಡೆಯಲ್ಲೂ ಕುತೂಹಲ, ಕಾತುರ, ಗರಿಬಿಚ್ಚಿದ್ದವು. ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಎಲ್ಲಿ ಬಸವ ಭಕ್ತರನ್ನು ಕೆರಳಿಸಿ ಘರ್ಷಣೆಗೆ ಇಳಿಸುವುದೋ ಎಂದು ಎಲ್ಲರೂ ಗಮನಿಸುತ್ತಿದ್ದರು. ಬೆಂಗಳೂರಿಗೆ ಫೋನ್ ಮಾಡಿದರು, "ನಾವು ೧೧ನೆಯ ತಾರೀಖು ಬೆಳಿಗ್ಗೆ ಅಥವಾ ರಾತ್ರಿ ಹೊರಟು ಬರುತ್ತಿದ್ದೇವೆ, ೧೦ ನೆಯ ತಾರೀಖು ಅವರ ಕಾರ್ಯಕ್ರಮವಿದೆ ಏನಾದರೂ ಘರ್ಷಣೆ ಆಗುತ್ತಿದ್ದರೆ...." ಫೋನಿನಲ್ಲಿ ಕೇಳಿದರು. ನಾನು ಊಹಿಸಿದೆ, "ಘರ್ಷಣೆ ಆಗುತ್ತಿದ್ದರೆ ಬರುವ ಕಾರ್ಯಕ್ರಮ ರದ್ದುಮಾಡುತ್ತೇವೆ" ಎನ್ನಬಹುದು ಎಂದು ಅವರು ಅಂದರು.

"ಮೊದಲೇ ಬಂದು ಬಿಡುತ್ತೇನೆ...." ನನಗೆ ಪುಳಕಿತಭಾವ ಮೂಡಿತು.

"ಇಲ್ಲ.... ನೀವೇನೂ ಚಿಂತೆ ಮಾಡಬೇಡಿ. ಅವರಾಗಿ ಗಲಾಟೆಗೆ ಯತ್ನಿಸಿದರೂ ನಾವು ಶಾಂತರಾಗಿ ವರ್ತಿಸುತ್ತೇವೆ. ನಮ್ಮವರು ಸುಸಂಸ್ಕೃತರು. ನೀವು ಹಾಕಿಕೊಂಡ ಕಾರ್ಯಕ್ರಮದಂತೆಯೇ ಬನ್ನಿರಿ." ಎಂದು ಹೇಳಿದೆ.

ಡಿಸೆಂಬರ್ ೧೦ ರಂದು ಎಲ್ಲರನ್ನೂ ಸೈರನ್ ಕೂಗಿಸಿ ಮಹಾಮನೆ ಮುಂಭಾಗಕ್ಕೆ ಸೇರಿಸಿ ಪ್ರಾರ್ಥನೆ ಮಾಡಿಸಲಾರಂಭಿಸಿದ್ದೆ. ಕೂಡಲ ಸಂಗಮವು ಲೋಕಕ್ಕೆ ಶಾಂತಿ ಸಂದೇಶವನ್ನು ಬೀರಬೇಕೇ ವಿನಾ ಅಯೋಧ್ಯೆಯಂತೆ ಗಲಾಟೆಯಿಂದ ಜನರ ಗಮನ ಸೆಳೆಯುವುದು ಬೇಡ ಎಂಬುದೇ ನನ್ನ ಸಂಕಲ್ಪವಾಗಿತ್ತು. (ಕಾಶಪ್ಪನವರು ಅಯೋಧ್ಯೆಯಂತೆ ವಿವಾದಾಸ್ಪದವಾಗಿ ಮಾಡೇ ತೀರುತ್ತೇನೆ ಎಂದು ಊರ ಹಿರಿಯರ ಮುಂದೆ ಹೇಳಿಕೊಂಡಿದ್ದರು) ಹೀಗಾಗಿ ಶಾಂತಿಯಿಂದ ನಾವು ನಮ್ಮವರು ವರ್ತಿಸುವ ಹೊಣೆಗಾರಿಕೆ ನಮ್ಮದೇ ಇತ್ತು.

ಕಣ್ಣುಮುಚ್ಚಿಕೊಂಡು ಪ್ರಾರ್ಥನೆ ಮಾಡಿಸುವಾಗ ಅಸಂಖ್ಯಾತ ಕಾರ್ಯಕರ್ತರ ಮಧ್ಯದಿಂದ ಎದ್ದು ಸುಮಾರು ೫೦-೬೦ ಜನ ಯುವಕರು ಕಮಾನಿನ ಬಳಿ ಹೋಗಿದ್ದರಂತೆ; ಪುಣ್ಯಕ್ಕೆ ಅವರು ತಮ್ಮನ್ನು ತಾವು ನಿಯಂತ್ರಿಸಿಕೊಂಡು, ಕಮಾನು ಮತ್ತು ಬಸವ ಭಾವಚಿತ್ರವನ್ನೂ ಶಾಸಕರು ಕೆಡವಿಸಿದಾಗ ಕೆರಳಿ ವರ್ತಿಸಿಲ್ಲ. ತಮ್ಮ ತಾಪ-ದುಃಖಗಳನ್ನು ನಿಯಂತ್ರಿಸಿಕೊಂಡು ಶಾಂತರಾಗಿ ಇದ್ದು ನಮ್ಮ ಮಾತನ್ನು ಉಳಿಸಿಕೊಟ್ಟಿದ್ದಾರೆ.

ನಂತರ, ಡಿವೈಎಸ್‌ಪಿ ಮುಂತಾದವರು ಭಾವಚಿತ್ರವನ್ನು ಕೆಡವಿಸಿದ ವರ್ತಮಾನ ತಿಳಿದು ಬಂದು ವಿಷಾದ ವ್ಯಕ್ತಪಡಿಸಿದರು. ಆಗ ನಮ್ಮವರು ವರ್ತಿಸಿದ ಬಗ್ಗೆ ಅಭಿನಂದನೆ ಸಲ್ಲಿಸಿದರು, ಸ್ವಯಂ ಸೇವಕರನ್ನು ಮೆಚ್ಚಿಕೊಂಡರು. ಆಗ ನಾನು ಪೊಲೀಸ್ ಅಧಿಕಾರಿಗಳಿಗೆ ಒಂದು ವಿಷಯ ತಿಳಿಸಿದೆ. "೧೪-೧-೯೪ಳ ರಂದು ಬೆಳಿಗ್ಗೆ ಮಹಾಮನೆಯಿಂದ ಪಥಸಂಚಲನ ಮತ್ತು ಪಾದಯಾತ್ರೆಯಲ್ಲಿ ನದಿಯ ಸಂಗಮದಲ್ಲಿರುವ ಐಕ್ಯಮಂಟಪಕ್ಕೆ ಹೋಗಿ ಶ್ರೀ ಬಸವಣ್ಣನವರ ದಿವ್ಯ ಸಮಾಧಿಯ ದರ್ಶನ ಪಡೆದು ಅಲ್ಲಿಂದ ವಚನ ಸಾಹಿತ್ಯ, ಧ್ವಜ ಮುಂತಾದುವನ್ನು ಹೊತ್ತು ಶರಣರು

Digitalized by e-Sahithya Documentation Forum
Sponsored by Sarayu Foundation Trust

ಸಭಾ ಮಂಟಪಕ್ಕೆ ಸಾಗಿ ಬಂದು ಸಮುದಾಯ ಪ್ರಾರ್ಥನೆ ಮಾಡುವರು. ಈ ಸಮೂಹದಲ್ಲಿ ಹೆಣ್ಣುಮಕ್ಕಳು, ಸಣ್ಣಮಕ್ಕಳು ವಯಸ್ಕರು ಎಲ್ಲ ಇರುವರು ಆದ್ದರಿಂದ ಸರಿಯಾಗಿ ನೀವು ಅಲ್ಲಿ ಶಾಂತಿಪಾಲನೆ ಮಾಡಬೇಕು.'' ಎಂದು ಡಿ.ವೈ.ಎಪ್.ಪಿ, ಸರ್ಕಲ್ ಇನ್ಸ್ ಪೆಕ್ಟರ್ ಮತ್ತು ಪಿ.ಎಸ್.ಐ. ಮೂವರೂ ಅಲ್ಲಿದ್ದು, ''ನಿಮ್ಮ ಧಾರ್ಮಿಕ ವಿಧಿಯು ಚಾಚೂ ತಪ್ಪದೆ ನೆರವೇರಲಿ. ನಾವು ಸೂಕ್ತ ಬಂದೋಬಸ್ತು ಮಾಡುತ್ತೇವೆ.'' ಎಂದು ಮಾತುಕೊಟ್ಟರು.

೧೩ನೆಯ ತಾರೀಖು ರಾತ್ರಿ ಮರುದಿನ ಬೆಳಗಿನ ಕಾರ್ಯಕ್ರಮ ಕುರಿತು ಜನರಿಗೆ ತಿಳಿಸಬೇಕಿತ್ತು. ಅಷ್ಟರಲ್ಲಿ ಯಾರೋ ಸುದ್ದಿ ತಂದರು ಶಾಸಕ ಕಾಶಪ್ಪನವರು ೧೫೦ ದೊಣ್ಣೆಗಳನ್ನು ತರಿಸಿಕೊಟ್ಟಿದ್ದಾರೆಂದು, ವಿಶೇಷವಾಗಿ ಸುತ್ತಲಿನಿಂದ ಕೆಲವರನ್ನು ಕರೆಸಿದ್ದಾರೆಂದು ಬೆಳಿಗ್ಗೆ ಐಕ್ಯಮಂಟಪದ ದರ್ಶನಕ್ಕೆ ಶರಣರು ಹೋದಾಗ ಹಲ್ಲೆ ಮಾಡುವ ವಿಚಾರವನ್ನು ಅಂಥ ಜನರು ಹೊಂದಿದ್ದಾರೆಂದು ಯಾರೋ ಹೇಳಿದರು. ಈ ಗಾಳಿ ಮಾತುಗಳನ್ನು ನಂಬಬೇಕೋ ಬಿಡಬೇಕೋ ತಿಳಿಯದಾಯಿತು. ''ಶಾಸಕರು ಇಷ್ಟು ಕೆಳಮಟ್ಟಕ್ಕೆ ಇಳಿಯಲಿಕ್ಕಿಲ್ಲ, ಇದು ಯಾರೋ ಕಿಡಿಗೇಡಿಗಳು ಹಬ್ಬಿಸಿದ ವದಂತಿ ಇರಬಹುದು'' ಎಂದುಕೊಂಡೆ. ಇದೇನನ್ನೂ ಮೈಕಿನಲ್ಲಿ ಹೇಳದೆ, ಸಂಗಮಗ್ರಾಮದ ಮುಖಂಡರಾದ ಶರಣ ಜಿ.ಜಿ. ಪಾಟೀಲರನ್ನು ಕರೆದು ಮೆಲ್ಲನೆ ಹೇಳಿದೆ, ''ಇದೆಲ್ಲ ಸುಳ್ಳೋ-ಸತ್ಯವೋ ತಿಳಿದಿಲ್ಲ. ನೀವು ಹೋಗಿ ಪೋಲೀಸ್ ಅಧಿಕಾರಿಗಳನ್ನು ಕೇಳಿರಿ. ಅವರು ಸೂಕ್ತ ಬಂದೋಬಸ್ತು ಮಾಡಿದರೆ ನಮ್ಮ ಜನರು ಹೋಗಲಿ. ಇಲ್ಲದಿದ್ದರೆ ಅಗತ್ಯವಿಲ್ಲ'' ಪಾಟೀಲರು ಪೋಲೀಸ್ ಅಧಿಕಾರಿಗಳನ್ನು ಭೇಟಿಯಾಗಲು ಹೋದರು. ಈ ಯಾವ ಸಂಗತಿಯನ್ನೂ ನಾನು ಹೊರಗೆ ತೋರ್ಪಡಿಸದೆ ಮರುದಿನ ಬೆಳಗಿನ ಕಾರ್ಯಕ್ರಮ ಕುರಿತು ತಿಳಿಸಿದೆ. ಸಭೆ ಮುಗಿಯಿತು ನಂತರ ಪಾಟೀಲರು ಬಂದರು, ಪೋಲೀಸ್ ಅಧಿಕಾರಿಗಳು ಪೂರ್ಣಭರವಸೆ ನೀಡಿದ್ದರು.

ಆದರೆ, ರಾತ್ರಿ ೧೧ ಗಂಟೆಗೆ ಪ್ರಮುಖ ಕಾರ್ಯಕರ್ತರ ಸಭೆ ಕರೆದೆವು ಪೋಲೀಸ್ ಅಧಿಕಾರಿಗಳು ಭರವಸೆ ಕೊಟ್ಟುದೂ ತಿಳಿಸಿದೆವು. ಕಾರ್ಯಕರ್ತರ ಅಭಿಪ್ರಾಯ ಕೇಳಿದೆವು. ಬಹುಜನರು, ''ಮೊದಲ ಶರಣಮೇಳದಿಂದಲೂ ನಾವು ಅಲ್ಲಿಗೆ ಹೋಗುತ್ತೇವೆ. ನಮ್ಮ ನೇಮವದು ಏಕೆ ತಪ್ಪಿಸಬೇಕು ? ಅಲ್ಲಿಗೆ ಹೋಗಲೇಬೇಕು.'' ಎಂದರು. ಬೀದರದವರಂತೂ, ''ನಾವು ಹೋಗುವುದು ಬಿಟ್ಟರೆ ಹೇಡಿತನವಾಗುತ್ತದೆ. ಹೋಗಲೇಬೇಕು. ಐಕ್ಯ ಮಂಟಪ ಪೂಜಾರಿಗಳ ಟ್ರಸ್ಟ್ ಕಮಿಟಿಯ ಗುತ್ತಿಗೆ ಏನಲ್ಲ'' ಎಂದರು.

''ಪೋಲೀಸ್ ಅಧಿಕಾರಿಗಳು ಭರವಸೆ ಕೊಟ್ಟಿದ್ದಾರೆ. ನೀವೂ ಎಲ್ಲರೂ ಅಸಂಖ್ಯಾತರಿದ್ದೀರಿ. ಆದರೆ ವಯಸ್ಕರು, ಹೆಣ್ಣು ಮಕ್ಕಳು, ಸಣ್ಣ ಮಕ್ಕಳು ಇರುವ ಸಮುದಾಯ. ಯಾರಿಗೂ ಏನೂ ಆಗಬಾರದು ಎಂಬುದೇ ನಮ್ಮ ಅಪೇಕ್ಷೆ. ಪೂಜಾರಿಗಳು ಅಷ್ಟು ಕೆಳಮಟ್ಟದವರಲ್ಲ ಅಂದುಕೊಂಡಿದ್ದೇವೆ ಆದರೆ ಶರಣ ಮೇಳಕ್ಕೆ ಬಂದವರು ಅಷ್ಟೇ ಸಂತೋಷದಿಂದ ಹೋಗುವಂತೆ ಆಗಬೇಕು. ವದಂತಿಗಳನ್ನು ನಾವು ನಂಬಿಲ್ಲ. ಆದರೂ ಘರ್ಷಣೆಯಿಂದ ದೂರವಿರೋಣ. ನಮಗೆ ಪ್ರಾರ್ಥನೆ ಮುಖ್ಯವೇ

ವಿನಾ ಘರ್ಷಣೆಯಲ್ಲ....'' ಎಂದು ಶರಣರನ್ನು ಐಕ್ಯ ಮಂಟಪದ ಕಡೆಗೆ ಕಳಿಸದಿರಲು ನಿರ್ಧರಿಸಿದೆವು. ಮಹಾಮನೆಯಲ್ಲಿ ಧ್ವಜಾರೋಹಣ ಮಾಡಿ, ಇಲ್ಲಿಂದ ನೇರವಾಗಿ ಸಭಾ ಮಂಟಪಕ್ಕೆ ಹೋಗಿ ಎಂದು ತಿಳಿಸಲಾಯಿತು. ಆವೇಶದ ಹುಡುಗರು ಮಾತು ಮೀರಿ ಅತ್ತಹೋಗದಿರಲೆಂದು, ತಿರುವು ಇರುವಲ್ಲಿ ಹಿರಿಯರಾದ ಶರಣ. ಪುಟ್ಟರುದ್ರಪ್ಪನವರನ್ನು ಮತ್ತು ಶರಣ ಜಿ.ಜಿ. ಪಾಟೀಲರನ್ನು ನಿಲ್ಲಿಸಲಾಯಿತು.

ಪಥ ಸಂಚಲನ ಬಹಳ ಶಿಸ್ತು-ಶಾಂತಿ-ಭಕ್ತಿಗಳಿಂದ ಸಾಗಿತು ಸಮುದಾಯ ಪ್ರಾರ್ಥನೆ ಚೆನ್ನಾಗಿ ನೆರವೇರಿತು. ಬಸವ ಭಾವಚಿತ್ರವನ್ನು ಕೆಡವಿದರೂ ತೀವ್ರ ಪ್ರತಿಕ್ರಿಯೆ ತೋರಬಾರದೆಂದು ಹೇಳಿದ್ದಕ್ಕೆ ಬೆಲೆಕೊಟ್ಟು, ಶಾಂತವಾಗಿ ವರ್ತಿಸಿದ ಮತ್ತು ಐಕ್ಯ ಮಂಟಪದತ್ತ ಸಾಗದೆ ನೇರವಾಗಿ ಪ್ರಾರ್ಥನಾ ಸಭೆಗೆ ಹೋಗಬೇಕೆಂದು ಸೂಚಿಸಿದಾಗ ಉತ್ಸಾಹಕ್ಕೆ ಚ್ಯುತಿ ಬಂದರೂ, ಆದೇಶವನ್ನು ಪಾಲನೆ ಮಾಡಿದ ಶರಣರು ನಮ್ಮ ಮತ್ತು ಬಸವಗುರುವಿನ ಕೀರ್ತಿ ಕಾಪಾಡಿದ್ದಾರೆ, ಶರಣ ಸಂಸ್ಕೃತಿಯನ್ನು ಮೆರೆದಿದ್ದಾರೆ ಇವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

— ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣಮೇಳ, ಉತ್ಸವ ಸಮಿತಿ

ಪಂಚಪೀಠಾಧೀಶರ ಹಾಸ್ಯ ಪ್ರಹಸನ

ಬಸವ ಭಾವಚಿತ್ರಕ್ಕೆ ಅವಮಾನ

— ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ.

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ದಿ. ೧೦-೧-೧೯೯೪ ರಂದು ಒಂದು ದುರ್ಘಟನೆ ನಡೆಯಿತು, ಕಾಂಗ್ರೆಸ್ ಪಕ್ಷದ ಶಾಸಕ ಎಸ್.ಆರ್. ಕಾಶಪ್ಪನವರಿಂದ, ಪಂಚಾಚಾರ್ಯ ಸಂಪ್ರದಾಯದ ಪಂಚ ಪೀಠಾಧೀಶರ ಪ್ರಚೋದನೆಯಿಂದ ಅದು ನಡೆದುದು ಹೀಗೆ.

ಪ್ರತಿವರ್ಷದ ಜನವರಿ ೯ ರಂದು ಕೂಡಲ ಸಂಗಮದ ಮಹಾಮನೆ ಮಹಾಮಠದಲ್ಲಿ ಬೆಳಿಗ್ಗೆ ವಿಶೇಷಪೂಜೆ ನಡೆದು, ವಚನ ಪಠಣವು ಆರಂಭವಾಗುವುದು. ಶರಣಮೇಳ ಉತ್ಸವ ಸಮಿತಿಯು ಸ್ವಾಗತ ಕಮಾನುಗಳನ್ನು ಕಟ್ಟಿ, ಅದಕ್ಕೆ ಬಸವ ಧ್ವಜಗಳನ್ನು ಎರಡೂ ಕಡೆ ಹಾರಿಸಿ, ಮಧ್ಯದಲ್ಲಿ ಬಸವಗುರುವಿನ ಭಾವಚಿತ್ರವನ್ನು ಕಟ್ಟಿ ಶರಣಮೇಳದ ಬಟ್ಟೆ ಬ್ಯಾನರ್ಸ್ ಕಟ್ಟುವುದು.

ಈ ಸಲ ಶರಣಮೇಳಕ್ಕೆ ಸ್ಪರ್ಧೆ ಒಡ್ಡಲು ಸವಾಲು ಹಾಕಿ ಎಸ್.ಆರ್. ಕಾಶಪ್ಪನವರು - ಹುನಗುಂದ ಶಾಸಕರು, ಪಂಚಾಚಾರ್ಯ ಅಡ್ಡಪಲ್ಲಕ್ಕಿ ಇಟ್ಟಿದ್ದರು. ಮಧ್ಯಾಹ್ನ ೩ಕ್ಕೆ ಆರಂಭವಾಗಬೇಕಾಗಿದ್ದ ಪಲ್ಲಕ್ಕಿ ಪ್ರದರ್ಶನವು ಸಂಜೆ ೫ರ ಮೇಲೆ ಶುರು ವಾಯಿತು. ಏಕೆಂದರೆ ಜನರು ಪಲ್ಲಕ್ಕಿ ಪ್ರದರ್ಶನಕ್ಕೆ ಬರದೇ ಇದ್ದುದು ಶಾಸಕರು ಮುಖಭಂಗವಾಗುವಂತೆ ಮಾಡಿತ್ತು. ಅದಕ್ಕೆ ಮುನ್ನೆಚ್ಚರಿಕೆ ವಹಿಸಿ ಶಾಸಕರು, ಲಾರಿಗಳನ್ನು ಕೊಟ್ಟು ಕಳಿಸಿ ಬಾಡಿಗೆ ಭಂಟರನ್ನು ಹತ್ತಿರದ ಹಳ್ಳಿಗಳಿಂದ, ರಾಜಕೀಯ

Digitalized by e-Sahithya Documentation Forum
Sponsored by Sarayu Foundation Trust

ಸಭೆಗೆ ಹೊತ್ತು ತರುವಂತೆ ತಂದಿದ್ದರು. (ಈ ಬಾಡಿಗೆ ಭಂಟರು ಸಂಸ್ಕಾರ ರಹಿತರಾಗಿದ್ದುದೇ ಅಲ್ಲದೆ ಅತ್ತ ಪಲ್ಲಕ್ಕಿಯನ್ನು ಬಾಡಿಗೆ ಮಂದಿ ಹೊರುವಾಗ ಇತ್ತ ಪೆಂಡಾಲಿನಲ್ಲಿ ಕುಳಿತು ಬೀಡಿ-ಸಿಗರೇಟು ಸೇದುತ್ತ ವೀಡಿಯೋ ಫಿಲ್ಮ್ ನೋಡುತ್ತಲಿದ್ದರು.) ಪಲ್ಲಕ್ಕಿ ಹೊರುವವರು, ಡೊಳ್ಳು ಮತ್ತು ವಾದ್ಯಗಳವರನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಶಾಸಕರು ಕರೆತಂದುದರಿಂದ ಅಷ್ಟಿಷ್ಟು ಜನರು ಕಾಣುವಂತಾಗಿತ್ತು. ಶಾಸಕರ ಈ ದೂರಾಲೋಚನೆಯನ್ನು ಮೆಚ್ಚತಕ್ಕದ್ದೆ.

ಅಡ್ಡಪಲ್ಲಕ್ಕಿಗಳು ಹೋಗಲು ಕಮಾನು ಅಡ್ಡಿಯಾಗುವುದಾಗಿಯೂ ಅದನ್ನು ತೆಗೆಸಬೇಕೆಂದು ಪೋಲೀಸ್ ಮುಖ್ಯ ಪೇದೆಯೊಬ್ಬರು ಹೋಗಿ ಪೂಜ್ಯ ಮಾತಾಜಿಯವರನ್ನು ಕೇಳಿಕೊಂಡರು. ಪೂಜ್ಯ ಮಾತಾಜಿ ಹೇಳಿದರು, "ನಾವು ಪ್ರತಿವರ್ಷವೂ ಕಟ್ಟುವಂತೆ ಸ್ವಾಗತ ಕಮಾನು ಕಟ್ಟಿದ್ದೇವೆ. ಕೇವಲ ಕಮಾನಾದರೆ ತೆಗೆಯಬಹುದು. ೯ನೇ ತಾರೀಖು ಬೆಳಿಗ್ಗೆ ಪೂಜಾನಂತರ ಷಟ್‌ಸ್ಥಲ ಧ್ವಜಗಳನ್ನು ಧರ್ಮಗುರು ಬಸವಣ್ಣನವರ ಭಾವಚಿತ್ರವನ್ನು ಏರಿಸಲಾಗಿದೆ. ಒಂದು ವಾರದ ನಂತರ, ೧೬ನೆಯ ತಾರೀಖು ಬೆಳಿಗ್ಗೆ ಇಳಿಸಲಾಗುವುದು. ಅಲ್ಲಿಯವರೆಗೆ ಬಸವ ಭಕ್ತರಾರೂ ಬಸವಣ್ಣನವರ ಭಾವಚಿತ್ರ ಇಳಿಸಿ, ಧರ್ಮಗುರುವಿಗೆ ಅಪಮಾನ ಮಾಡುವ ಧೈರ್ಯ ಮಾಡರು. ಆದರಿಂದ ಕೇಡಾಗುತ್ತದೆ."

"ಕೆಲವರು ತೆಗೆಯಲು ಆಗ್ರಹಪಡಿಸುತ್ತಿದ್ದಾರೆ." ಪೋಲೀಸ್ ಪೇದೆ ಹೇಳಿದರು.

"ಖಾಕಿ ಯೂನಿಫಾರಂ ಹಾಕಿರುವ ಧೈರ್ಯದ ಬಲ ನಿಮಗಿದ್ದರೆ ನೀವು ತೆಗೆಯಬಹುದು. ಬಸವ ಭಕ್ತರಾರಿಗೂ ಧರ್ಮಗುರುವಿನ ಭಾವಚಿತ್ರಕ್ಕೆ ಅವಮಾನ ಮಾಡುವ ಧೈರ್ಯವಿಲ್ಲ." "ನಮಗೂ ಆ ಧಾರ್ಷ್ಟ್ಯವಿಲ್ಲ. ಅಂಥ ಪ್ರಮಾದ ಮಾಡೆವು ಆದರೆ ಆ ಗುಂಪಿನವರು ಏನಾದರೂ ಅನಾಹುತ ಮಾಡಿದರೆ ವಿನಾಕಾರಣ ಗಲಭೆಯಾಗುವುದು. ನಿಮ್ಮಲ್ಲಿ ಬಂದಿರುವ ಸ್ವಯಂ ಸೇವಕ ಕಾರ್ಯಕರ್ತರೇ ಬಹಳ ಜನರಿದ್ದಾರೆ. ಅವರು ಸಿಟ್ಟಿಗೆದ್ದು ವರ್ತಿಸಿದರೆ ?' ಪೋಲೀಸ್ ಮುಖ್ಯ ಪೇದೆಯ ಚಿಂತೆ. ಆಗ ಪೂಜ್ಯ ಮಾತಾಜಿ ಹೇಳಿದರು.

"ನಿಮಗೆ ಆ ಭಯವೋ ! ಅದನ್ನೇನೂ ಇಟ್ಟುಕೋಬೇಡಿ. ಸುಸಂಸ್ಕೃತರಾಗಿ ಸಭ್ಯರಾಗಿ ನಿಮ್ಮ ಶಾಸಕರು, ಪಂಚಾಚಾರ್ಯರು, ಅವರ ಭಕ್ತರ ಮುಂದೆ ಸಾಗಿದರೆ ಸರಿ; ಹಾಗಲ್ಲದೆ ಅಸಭ್ಯವಾಗಿ, ಅಸಂಸ್ಕೃತರಾಗಿ ವರ್ತಿಸಿ ಧರ್ಮಗುರು ಬಸವಣ್ಣನವರ ಭಾವಚಿತ್ರವನ್ನು ಕೆಡವಿದರೆ, ಆ ಪಾಪಕ್ಕೆ ತೀರ್ಪು ನೀಡುವ ಹೊಣೆಯನ್ನು ನಾವು ದೇವರಿಗೆ ಬಿಡುತ್ತೇವೆ. ಬಸವ ಶರಣರು ಸುಸಂಸ್ಕೃತರು, ಶಾಂತರು, ಸಂಸ್ಕಾರವಂತರು. ಅವರು ಶಾಂತವಾಗಿಯೇ ಇರಲು ನಾವು ತಿಳಿಸುತ್ತೇವೆ; ಅವರಿಂದ ಪ್ರಮಾಣ ಮಾಡಿಸಿಕೊಳ್ಳುತ್ತೇವೆ."

ಆಗ ಪೋಲೀಸರು ಹೋದರು. ನಮ್ಮ ಅಸಂಖ್ಯಾತ ಕಾರ್ಯಕರ್ತರನ್ನು ನಿಯಂತ್ರಿಸಲು ಪೂಜ್ಯ ಮಾತಾಜಿಯವರು ಎಲ್ಲರನ್ನೂ ಮಹಾಮನೆ ಬಳಿ ಸಮಾವೇಶವಾಗಲು ಹೇಳಿದರು. ಪ್ರಾರ್ಥನೆ ಮಾಡಿಸಲು ಆರಂಭಿಸಿದರು.

ಮಾನವಧರ್ಮಕ್ಕೆ ಜಯವಾಗಲಿ ಎಂದು ಜಯಘೋಷ ಮಾಡಿಸುವ ಪಂಚ ಆಚಾರ್ಯರುಗಳ ಪಲ್ಲಕ್ಕಿಗಳು ಅರ್ಚಕರ ಕಾಲನಿ ಬಳಿಯಿಂದ ಹೊರಟವು. ಶ್ರೀಮಂತ ಹೆಂಗೆಳೆಯರನ್ನು ನಾಚಿಸುವ ಬಂಗಾರ, ಮುತ್ತು, ವಜ್ರ, ಪೀತಾಂಬರಗಳ ಸ್ವಾಮಿಗಳ ಥಳಕು ಸರಳತೆ-ಸೌಮ್ಯತೆಗಳನ್ನು ಗಡಿಪಾರು ಮಾಡಿತ್ತು. ಬಾಲ ಸುಟ್ಟ ಬೆಕ್ಕಿನಂತೆ ಓಡಾಡುತ್ತಿದ್ದ ಶಾಸಕ ಕಾಶಪ್ಪನವರು ಮಹಾಮನೆ ಆವರಣದೊಳಕ್ಕೆ ನುಗ್ಗಿದರು ಪಾಪ ಅವರ ಹಿಂದೆ ಸರ್ಕಲ್ ಇನ್ಸ್ ಪೆಕ್ಟರ್ ಮತ್ತು ಪಿ.ಎಸ್.ಐ. ಅವರುಗಳೂ ಧಾವಿಸಿದರು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪ್ರಾರ್ಥನೆಯಲ್ಲಿ ತಲ್ಲೀನರಾಗಿದ್ದುದರಿಂದ ಭದ್ರಾವತಿಯ ಶರಣ ಷಡಕ್ಷರಪ್ಪ ಮತ್ತು ಶರಣ ಹೆಚ್.ಎಸ್. ಬಸವರಾಜು ಮುಂತಾದ ಶರಣರು ಕಾಶಪ್ಪನವರನ್ನು ದಾರಿಯಲ್ಲೇ ಮಾತನಾಡಿಸಿ, ಏನಾಗಬೇಕು ಎಂದು ಕೇಳಿದರು. "ಆ ಭಾವಚಿತ್ರ ತೆಗೆಯಬೇಕು, ಕಮಾನು ಕೀಳಬೇಕು." ಎಂದು ಶಾಸಕರು ಹೇಳಿದರು. "ಇದು ಬಹುದೊಡ್ಡ ಕಮಾನು ಪಲ್ಲಕ್ಕಿಗಳು ಸುಲಭವಾಗಿ ಹೋಗುತ್ತವೆ. ನಾವು ತೆಗೆಯಲು ಆಗುವುದಿಲ್ಲ ಎಂದು ಆಗಲೇ ಹೇಳಿಯಾಗಿದೆಯಲ್ಲವೆ ?'

ಪೋಲೀಸ್‌ಅಧಿಕಾರಿಗಳು ಅತ್ಯಂತ ಸೌಜನ್ಯದಿಂದ "ನಾವು ಅಳತೆ ನೋಡಿದ್ದೇವೆ. ದಾರ ಹಿಡಿದು ಪಲ್ಲಕ್ಕಿ ಅಳೆಯಲಾಗಿ, ಎರಡೂ ಕಡೆ ಎರಡೆರಡು ಅಡಿ ಸ್ಥಳಾವಕಾಶವಿದೆ. ಸುಮ್ಮನೇ ಸಮಸ್ಯೆ ಮಾಡಬೇಡಿರಿ." ಎಂದು ಹೇಳುತ್ತಲೇ ಶಾಸಕರಿಗೆ ಕೆಂಡಾಮಂಡಲ ಕೋಪ ಬಂದಿತು.

"ಇದೇ ಕಡೇ ಉತ್ತರವೋ ?' ಎಂದು ಷಡಕ್ಷರಪ್ಪನವರನ್ನೂ ಪುನಃ ಕೇಳಿದರು.

"ಅಹುದು .. ಒಂದೇ ಉತ್ತರ .."

"ನಡೀರೋ ... ಕೆಡವಿರೋ" ಎಂದು ರೋಷದಿಂದ ಮುಂದೆ ನಡೆದರು. ಬಾಡಿಗೆ ಗೂಂಡಾಗಳಿಂದ ಕಮಾನು ಕೆಡವಿಸುವಾಗ ಪೋಲೀಸ್ ಅಧಿಕಾರಿಗಳು ಕೈಮುಗಿದು, "ಬೇಡಿ ಸರ್ ಇದು ಸೂಕ್ತವಲ್ಲ. ಯಾವ ತೊಂದರೆ ಇಲ್ಲದೆ ಪಲ್ಲಕ್ಕಿ ಹೋಗುತ್ತದೆ –" ಎಂದರೆ, ಮದೋನ್ಮತ್ತರಾಗಿ ಶಾಸಕರು, "I am sitting M.L.A. ನಾನು ಹೇಳಿದಷ್ಟು ಕೇಳ್ರಿ.."ಎಂದು, ಅಧಿಕಾರಿಗಳಿಗೆ ಹೇಳಿ ತನ್ನ ಚೇಲಾಗಳಿಗೆ ಕೆಡವಲು ಆಜ್ಞೆ ಮಾಡಿದರಂತೆ.

ಪೋಲಿಸ್ ಅಧಿಕಾರಿಗಳಿಗೆ, ನೆರೆದ ಭಕ್ತರು ಎಲ್ಲರಿಗೂ ಬಸವ ಭಾವಚಿತ್ರ ಕೆಳಗೆ ಬೀಳುತ್ತಲೇ ಅಪಾರ ದುಃಖವಾಯಿತು. ನಮ್ಮ ಕಾರ್ಯಕರ್ತರ ರಕ್ತ ಕುದಿಯುತ್ತಿತ್ತು. ಆದರೆ ಪೂಜ್ಯ ಗುರೂಜಿ-ಮಾತಾಜಿಯವರು ನಮ್ಮಗಳನ್ನು ಪ್ರತಿಜ್ಞಾಬದ್ಧರನ್ನಾಗಿ ಮಾಡಿದ್ದು ನಮ್ಮನ್ನೂ ಬಂಧಿಸಿತ್ತು. "ನೀವಾರೂ ತಾಳ್ಮೆಗೆಡಬಾರದು. ಅವರು ಅಸಭ್ಯರಾಗಿ ವರ್ತಿಸಿ ಭಾವಚಿತ್ರವನ್ನು ಕೆಡವಿಸಿದರೆ ನೀವು ಶಾಂತವಾಗಿ ನೋಡಿರಿ. ಗಲಾಟೆಗೆ ಇಳಿಯಬೇಡಿ. ನಿಮ್ಮ ಹೃದಯದಲ್ಲಿ ಪ್ರತಿಷ್ಠಾಪನೆಗೊಂಡ ಬಸವಣ್ಣನನ್ನು ಕೆಡವಲು ಸಾಧ್ಯವೇ ?ನೀವು ಎಷ್ಟು ಸಭ್ಯರಾಗಿ-ಸುಸಂಸ್ಕೃತರಾಗಿ ವರ್ತಿಸುವಿರೋ ಅಷ್ಟೂ ಬಸವ ಗುರುವಿನ ಕೀರ್ತಿ ಹಿರಿದಾಗುವುದು. ಶರಣ ಮೇಳ ಇರುವುದೇ ಬಸವ ಕೀರ್ತಿಯನ್ನು ಮೆರೆಸಲಿಕ್ಕೆ ಆ ಅಲ್ಪ ನೋವನ್ನು ಸಹಿಸಿಕೊಂಡು ನಮ್ಮ ಮಾತನ್ನು

Digitalized by e-Sahithya Documentation Forum
Sponsored by Sarayu Foundation Trust

ಉಳಿಸಿಕೊಳ್ಳಬೇಕು. ಪೋಲೀಸ್ ಅಧಿಕಾರಿಗಳಿಗೆ ನಿಮ್ಮೆಲ್ಲರ ಪರವಾಗಿ ನಾವು ಮಾತುಕೊಟ್ಟಿದ್ದೇವೆ.''

ಈ ಮಾತುಗಳು ನಮ್ಮೆಲ್ಲ ಕಾರ್ಯಕರ್ತರಲ್ಲಿ ಅಣುರಣಿಸುತ್ತಿದ್ದವು. ನಾನು ಬುಕ್ ಸ್ಟಾಲ್ ಮೇಲೆ ನಿಂತು ಎಲ್ಲವನ್ನೂ ನೋಡುತ್ತಿದ್ದೆ. ಬಸವ ಭಾವಚಿತ್ರವು, ಕಮಾನು ಮುರಿದು ಕೆಳಗೆ ಬೀಳುತ್ತಲೇ ಅನೇಕ ಜನರ ಕಣ್ಣಲ್ಲಿ ನೀರು ಸುರಿದವು, ನಮ್ಮ ಜನರಲ್ಲಿ ಮಾತ್ರವಲ್ಲ ಮುಗ್ಧ ಭಕ್ತರಾಗಿ ಅಡ್ಡಪಲ್ಲಕ್ಕಿಯಲ್ಲಿ ಪಾಲ್ಗೊಳ್ಳಲು ಬಂದಿದ್ದವರಲ್ಲಿ ಸಹ. ಭಾವಚಿತ್ರವನ್ನು ಕೆಡವಿಸಿದ ಕಾಶಪ್ಪ ನನಗೆ ಮಹಾಭಾರತದ ದುಶ್ಯಾಸನನಂತೆಯೂ, ಪಲ್ಲಕ್ಕಿಗಳಲ್ಲಿ ಕುಳಿತು ಈ ಘಟನೆಯನ್ನು ಪ್ರಚೋದಕ ಶಕ್ತಿಗಳಾಗಿ, ನೋಡುತ್ತಿದ್ದ ಪೀಠಾಧೀಶರು ಶಕುನಿ, ದುರ್ಯೋಧನರಂತೆಯೂ ಕಂಡುಬಂದರು.

ಆಗೊಂದು ವಿಚಿತ್ರ ಘಟನೆ ನಡೆಯಿತು. ಮೆರವಣಿಗೆಯಲ್ಲಿ ಸಾಗಿದ್ದ ಮುಗ್ಧ ಭಕ್ತರು ತೀವ್ರ ಆಘಾತಕ್ಕೆ ಒಳಗಾದರು. ಕೆಲವರು ತಾವು ಧರಿಸಿದ ಪಂಚಾಚಾರ್ಯ ಉತ್ಸವದ ಬ್ಯಾಡ್ಜ್‌ಗಳನ್ನೇ ಕಿತ್ತೆಸೆದರು, ಕೆಲವರು ತಮ್ಮ ವಾಹನಗಳನ್ನು ಹತ್ತಿ ವಾಪಸ್ಸು ಹೋಗಿಯೇ ಬಿಟ್ಟರು. ಆರತಿ ಹಿಡಿದಿದ್ದ ಹೆಂಗಳೆಯರಲ್ಲಿ ಕೆಲವರು ಕಣ್ಣೀರು ಒರೆಸಿಕೊಳ್ಳುತ್ತ ಮೆರವಣಿಗೆಯಿಂದ ಸರಿದರು. ''ಇವರು ನಮ್ಮ ಧರ್ಮದ ಗುರುಗಳು ಎಂದು ಮುಗ್ಧಭಕ್ತಿಯಿಂದ ನಾವು ಬಂದಿದ್ದೆವು. ಇಂಥಾ ದುಷ್ಟತನ ಮಾಡುತ್ತಾರೆ ಎಂದು ನಂಬಿರಲಿಲ್ಲ. ಇವರ ತಲೆ ಮೇಲೆ ಕಾಗೆ-ಗೂಬೆ ಹಾರುವುದಿಲ್ಲವೋ ? ಬೂಟು ಕಾಲುಗಳ ಚಿತ್ರಗಳ ಕೆಳಗೆ ಇವರು ಹಾಯುವುದಿಲ್ಲವೊ ?''

ಬಗೆಬಗೆಯ ಉದ್ಗಾರಗಳನ್ನು ತೆಗೆಯುತ್ತ ಜನರು ಮಾತನಾಡತೊಡಗಿದರು. ಇವರ ಸಭೆ ಶುರುವಾದಾಗ ಕ್ಷೀಣಿಸಿದ್ದ ಜನಸಂಖ್ಯೆ ನೋಡಿದಾಗ, ಇವರ ಪ್ರಭಾವ ಸಮಾಜದ ಮೇಲೆ ಎಷ್ಟಿದೆ ಎಂಬುದು ಸ್ಪಷ್ಟವಾಗುತ್ತಿತ್ತು. ಜನರ ಮನಸ್ಸಿನ ಮೇಲಾದ ಗಾಯದ ಪರಿಣಾಮವೂ ತಿಳಿಯುತ್ತಿತ್ತು. ಶರಣ ಮೇಳದೊಡನೆ ಸ್ಪರ್ಧೆ ನಡೆಸಿ ಹಠತೊಟ್ಟು ಅಷ್ಟೇ ದೊಡ್ಡ ಪೆಂಡಾಲ್ ಹಾಕಿಸಿದ್ದ ಕಾಶಪ್ಪನವರ ಆಶಯದಂತೆ ಕಾಲುಭಾಗ ಪೆಂಡಾಲ್ ಸಹ ತುಂಬದೆ ಅವರ ಮುಖ ಕಪ್ಪಿಟ್ಟಿತ್ತು. ಆದರೆ ಪತ್ರಿಕಾ ವರದಿಗಾರರು ಮಾತ್ರ ಅಡ್ಡಪಲ್ಲಕ್ಕಿ ಉತ್ಸವದಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು ಎಂದು ಸತ್ಯದ ತಲೆಯ ಮೇಲೆ ಹೊಡೆದಂತೆ ಬರೆದು ಶಾಸಕ ಕಾಶಪ್ಪನವರ ಗೌರವವನ್ನು ಕಾಪಾಡಿದರು.

ಶಿವಾಚಾರ್ಯ ಸಮ್ಮೇಳನ

ಮರುದಿನ ಬೆಳಗ್ಗೆ (ದಿ.೧೧-೧-೧೯೯೪) ಶಿವಾಚಾರ್ಯ ಸಮ್ಮೇಳನ ಎಂದು ಪ್ರಚಾರ ಮಾಡಲಾಗಿದ್ದಿತು. ಬೆಳಗ್ಗೆ ೯ ಆಯಿತು, ೧೦ ಆಯಿತು, ೧೧ ಆದರೂ ಪೆಂಡಾಲಿನಲ್ಲಿ ಚಟುವಟಿಕೆಯೇ ಇಲ್ಲ. ಕನಿಷ್ಟ ೫ ಜನ ಶ್ರೋತೃಗಳೂ ಸೇರದಿದ್ದರೆ (ಪೆಂಡಾಲ್ ಗುತ್ತಿಗೆದಾರರು ಮತ್ತು ಎಲೆಕ್ಟ್ರಿಕ್ ಗುತ್ತಿಗೆದಾರರ ಕಡೆಯವರು ಕಾವಲಿಗೆ ಇರುತ್ತಿದ್ದುದರಿಂದ ಆ ಇಬ್ಬರು ಶ್ರೋತೃಗಳು ಕಾಯಂ ಆಗಿ ಇರುತ್ತಿದ್ದರು.) ಈ ಐದು ಮಹಾ ಆಚಾರ್ಯರು, ಏಳೆಂಟು ಜನ ಉಪಾಚಾರ್ಯರು ಯಾರಿಗೆ ಹಿತೋಪದೇಶ

ಮಾಡಬೇಕು ? ಹೀಗಾಗಿ ಶಿವಾಚಾರ್ಯ ಸಮ್ಮೇಳನ ನಡೆಯಲೇ ಇಲ್ಲ. ಮರುದಿನ ಸರ್ಕಾರಿ ಐ.ಬಿ.ಯ ಕೋಣೆಯಲ್ಲಿ ಗುಟ್ಟಾಗಿ ಐದು ಜನ ಆಚಾರ್ಯರು, ಶಾಸಕರು, ಪತ್ರಿಕೆಯ ಒಬ್ಬಿಬ್ಬರು ವರದಿಗಾರರ ಸಮ್ಮುಖದಲ್ಲಿ ಶಿವಾಚಾರ್ಯ ಸಮ್ಮೇಳನ (ಶ್ರೋತೃಗಳೇ ಇಲ್ಲದೆ) ನಡೆದು ನಿರ್ಣಯಗಳು ಪ್ರಕಟವಾದುವು. ೧೦-೧-೯೪ರಂದು ಅಡ್ಡಪಲ್ಲಕ್ಕಿ ಇಟ್ಟು ತಮ್ಮ ಜನಪ್ರಿಯತೆಯನ್ನು ಚೆನ್ನಾಗಿ ಪ್ರದರ್ಶಿಸಿಕೊಂಡ ಪೀಠಾಧೀಶರು ಮುಂದಿನ ವರ್ಷ ೧೪ನೇ ತಾರೀಖಿನಂದೇ ಬರುವುದಾಗಿ ಹೇಳಿಕೆ ಕೊಟ್ಟಿದ್ದಾರೆ. ನಿಜಕ್ಕೂ ಅವರ ಬುದ್ಧಿವಂತಿಕೆ ಮೆಚ್ಚಿಕೊಳ್ಳಬೇಕು. ತಮಗಾಗಿ ಜನರು ಬರದಿದ್ದಾಗ, ಶರಣಮೇಳಕ್ಕೆಂದು ಅತ್ಯಧಿಕ ಜನರು ಬರುವ ೧೪ನೇ ತಾರೀಖಿನಂದೇ ಆ ಜನರ ಮಧ್ಯೆ ಪಲ್ಲಕ್ಕಿ ಹಾಯಿಸಿಬಿಟ್ಟರೆ, ಇವರೆಲ್ಲ ನಮಗಾಗಿ ಬಂದರು ಎಂದು ಫೋಟೋ ತೆಗೆಸಿ, ಕೊಚ್ಚಿಕೊಳ್ಳಬಹುದಲ್ಲ !

ಸ್ವತಂತ್ರವಾಗಿ ರೇಣುಕ ಜಯಂತಿ ಮಾಡಿ, ವಿಚಾರಶೀಲರನ್ನು ಆಕರ್ಷಿಸಲಾಗದ ಪಂಚಾಚಾರ್ಯರ ಭಕ್ತರು, ಬಸವ ಜಯಂತಿ ಹೆಸರು ಹೇಳಿ ಜೊತೆಗೆ ರೇಣುಕರ ಯುಗಮಾನೋತ್ಸವ ಮಾಡುವ ಹವ್ಯಾಸದಂತೆ, ಪ್ರತ್ಯೇಕ ಸಮಯದಲ್ಲಿ ಕಾರ್ಯಕ್ರಮಮಾಡಿ ಜನರನ್ನೂ ಆಕರ್ಷಿಸಲಾರದ ಈ ಜನ ಶರಣ ಮೇಳದ ವಿಚಾರಶೀಲ ಜನಸಮೂಹದ ಮುಂದೆ ತಮ್ಮ ವೈಭವ ಪ್ರದರ್ಶನ ಮಾಡಲು ಹಾತೊರೆಯುವುದು ಅವಿವೇಕ ರಮಣೀಯ.

ಈ ಪ್ರಸಂಗಗಳನ್ನು ಗಮನಿಸಿದರೆ ನಮಗೆ ಅನ್ನಿಸುತ್ತದೆ ಬಹುಶಃ ೧೨ನೆಯ ಶತಮಾನದ ಕೊಂಡಿ ಮಂಚಣ್ಣನವರು ಈ ಪಂಚಪೀಠಾಧೀಶರ ರೂಪದಲ್ಲಿ ಅವತರಿಸಿ ಬಂದಿರಬಹುದು. ಈಗ ಬಸವ ತತ್ತ್ವದ ಕೀರ್ತಿ ದುಂದುಭಿ ಎಲ್ಲೆಡೆ ಮೊಳಗಲು ಆರಂಭಿಸಿರುವುದರಿಂದ, ವಿರೋಧಿಸಲೆಂದೇ ಈ ಆಧುನಿಕ ಮಂಚಣ್ಣನವರುಗಳ ಉದಯವಾಗಿರಬಹುದು ಎಂದು.

ಈ ದುರ್ಘಟನೆಯು ದಿ.೧೦ರಂದು ನಡೆಯಲಿಕ್ಕೆ ಕೇವಲ ೩-೪ ದಿವಸಗಳ ಮೊದಲು ಪಂಚಾಚಾರ್ಯರುಗಳು ತಾವು ಬಸವ ವಿರೋಧಿಗಳಲ್ಲವೆಂದು, ಬಸವ ತತ್ತ್ವವನ್ನು ಪ್ರಚಾರ ಮಾಡುವುದೇ ತಮ್ಮ ಗುರಿಯೆಂದು, ಕೆಲವು ಪಟ್ಟ ಭದ್ರ ಹಿತಾಸಕ್ತರು ತಾವು ಬಸವ ತತ್ತ್ವವಿರೋಧಿಗಳೆಂದು ಅಪಪ್ರಚಾರ ಮಾಡುವರೆಂದು ಬಡಬಡಿಸಿದ್ದರು. ಈ ಮಾತುಗಳನ್ನೂ ಪತ್ರಿಕಾಗೋಷ್ಠಿಯಲ್ಲಿ ಹೇಳಿರುವೆವೆಂಬುದನ್ನು ೩-೪ ದಿನಗಳಲ್ಲೇ ಮರೆತು ಬಸವ ಗುರುವಿನ ಭಾವಚಿತ್ರಕ್ಕೆ ಅವಮಾನ ಮಾಡಿದರು. ಅನುಯಾಯಿಗಳಾದವರು ಎಂದಾದರೂ ಅವಮಾನ ಮಾಡಿಯಾರೆ ? ಅಸಮಾನತೆ, ಆಡಂಬರ, ಅಮಾನವೀಯತೆ, ಅಧ್ಯತೆ, ಅಜ್ಞಾನಗಳಿಂದ ಕೂಡಿದ ಈ ಪಂಚಾಚಾರ್ಯರು ಸಮಾನತೆ, ಸರಳತೆ, ಮಾನವೀಯತೆ, ವಿವೇಕ, ಸುಜ್ಞಾನಗಳ ಪ್ರತಿನಿಧಿಯಾದ, ವಿಶ್ವಗುರು ಬಸವಣ್ಣನವರ ಹೆಸರನ್ನು ಬಾಯಿಂದ ಉಚ್ಚರಿಸಲೂ ಹಕ್ಕು ಇಲ್ಲದವರು. ಇವರುಗಳು ಬಸವ ಭಕ್ತರ ತಾಳ್ಮೆಯನ್ನು ಇನ್ನೂ ಪರೀಕ್ಷಿಸದೆ, ತಮ್ಮ ಪಾಡಿಗೆ ತಾವಿರುವುದು ಸೂಕ್ತ. ನಮ್ಮ ಸನ್ನಡತೆ-ಶಾಂತಿಯನ್ನು ಹೇಡಿತನವೆಂದು ಭಾವಿಸಿದರೆ ಸೂಕ್ತ ಪಾಠ ಕಲಿಸುವ ಪ್ರತಿಕ್ರಿಯೆಯನ್ನು ನಾವು ತೋರಿಸಬೇಕಾದೀತು.

Digitalized by e-Sahithya Documentation Forum
Sponsored by Sarayu Foundation Trust

ವಾರಸುದಾರರು ಯಾರು ?

— ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಕೂಡಲ ಸಂಗಮದ ಸಂಗಮೇಶ್ವರ ದೇವಾಲಯದ ಲಕ್ಷದೀಪೋತ್ಸವವನ್ನು ನಿಮಿತ್ತ ಮಾಡಿಕೊಂಡು ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಕಾರ್ಯಕ್ರಮವನ್ನು ದೇವಾಲಯದವರು, ಶಾಸಕರು ಕೂಡಿ ವ್ಯವಸ್ಥೆ ಮಾಡಿದರು. ಆಗ ಕಾಶಿಯ ಆಚಾರ್ಯರು ಮತ್ತು ರಂಭಾಪುರಿಯವರು ಹಲವಾರು ಪತ್ರಿಕಾಗೋಷ್ಠಿ ಕರೆದು ತಾವು ಬಸವಣ್ಣನವರ ವಿರೋಧಿಗಳಲ್ಲ ಎಂದು ಹೇಳಿಕೆ ನೀಡಿದರು. ಕೆಲವರು ಪಟ್ಟಭದ್ರ ಹಿತಾಸಕ್ತರು ತಮ್ಮನ್ನು ಬಸವ ವಿರೋಧಿಗಳೆಂದು ಅಪಪ್ರಚಾರ ಮಾಡಿ ತಪ್ಪು ಕಲ್ಪನೆ ಹುಟ್ಟಿಸುವರೆಂದು, ಇದಕ್ಕೆ ಕಿವಿಗೊಡದೆ ಬಸವ ಭಕ್ತರು ಹೆಚ್ಚಾಗಿ ಕಾರ್ಯಕ್ರಮಕ್ಕೆ ಆಗಮಿಸಬೇಕೆಂದು ಕೋರಿದರು. ತಾವು ಮಾಡುವುದು ಬಸವ ತತ್ತ್ವಪ್ರಚಾರವೇ ಎಂದು ಒತ್ತಿ ಒತ್ತಿ ಹೇಳಿದರು.

ಕೆಲವು ಜನರು ಮೊದಲಿನಿಂದಲೂ ಪಂಚಾಚಾರ್ಯರ ಗುಣ ಸ್ವಭಾವ ತಿಳಿದವರು, ಇದೇನೋ ಹುಲಿಯು ಅಹಿಂಸಾವ್ರತ ಸ್ವೀಕಾರ ಮಾಡಿರುವ(ನಾಟಕ)ತೆ ತೋರುತ್ತದೆ ಎಂದು ಭಾವಿಸಿದರು. ಕೆಲವರಾದರೂ ಈ ಮಾತಿನ ಮೋಡಿಗೆ ಒಳಗಾಗದಿರಲಿಲ್ಲ. ನಮ್ಮ ಆತ್ಮೀಯರು ಬಸವ ತತ್ತ್ವ ಚಿಂತಕರೂ ಆದ ಡಾ.ಎಸ್.ಆರ್.ಗುಂಜಾಳರಂಥವರೂ ಸಹ ಪ್ರಭಾವಿತರಾಗಿ ಪತ್ರ ಬರೆದರು, "ಇದೇನೋ ಶುಭಲಕ್ಷಣ, ಪಂಚಾಚಾರ್ಯರು ಬಸವಾನುಯಾಯಿಗಳಾಗುವ ಸೂಚನೆ ತೋರುತ್ತಿದೆ." ಎಂದು. ನಾನು ಪತ್ರ ಓದಿ ಮನಸಾರೆ ನಕ್ಕೆ. ನೇರವಾಗಿ ಇಂಥ ಅಭಿಪ್ರಾಯ ಹೇಳಿದ ಕೆಲವರಿಗೆ ವಚನವೊಂದನ್ನೂ ಉದಾಹರಿಸಿದೆ :

> ಬರು ಶಠಗನ ಭಕ್ತಿ ದಿಟವೆಂದು ನಂಬಬೇಡ
> ಮಠದೊಳಗಣ ಬೆಕ್ಕು ಇಲಿಯ ಕಂಡು
> ಪುಟನೆಗೆದಂತಾಯಿತ್ತು ಕಾಣಾ ರಾಮನಾಥ !

೬-೧-೧೯೯೪ಳ ರಂದು ಪತ್ರಿಕಾ ಹೇಳಿಕೆ ಪ್ರಕಟವಾಯಿತೇನೋ. ೧೦-೧-೯೪ಳ ರಂದು ಬೆಕ್ಕು ನೆಗೆದೇ ಬಿಟ್ಟಿತು; "ವಿಶ್ವಗುರು ಬಸವಣ್ಣನವರ ಭಾವಚಿತ್ರ ಇರುವ ಕಮಾನಿನ ಕೆಳಗೆ ಹೋಗುವುದಿಲ್ಲವೆಂದು, ಕಮಾನು ತೆಗೆಯಬೇಕೆಂದು" ಪಲ್ಲಕ್ಕಿಗಳನ್ನು ನಿಲ್ಲಿಸಿ, ಕೆಡಹುವ ಕೆಲಸವನ್ನು ಪ್ರತ್ಯಕ್ಷ ನೋಡುವ ಮೂಲಕ, ಶಾಸಕರ ಮೂಲಕ ಮಾಡಿಸುವ ಮೂಲಕ.

ಬಸವ ಭಕ್ತರು ಭಾವುಕರಾಗಿ, 'ಬಸವಾ' ಎಂದು ವಿಷ ತಿನ್ನಿಸಿದರೂ ತಿನ್ನುವ ಮಟ್ಟದಲ್ಲಿ ಮುಗ್ಧರು (ಮೂಢರು) ಆಗಬಾರದು. ಓರ್ವ ವಯಸ್ಕರು ಬಂದು ಹೇಳುತ್ತಿದ್ದರು, "ಪುರಾಣ ಹೇಳುವವರು ಬಹಳ ಚಲೋ ಹೇಳ್ತಾರ್ರಿ. ಸಿದ್ಧರಾಮೇಶ್ವರ ಪುರಾಣ. ಮತ್ತೆ ಅವರು ಬಸವಣ್ಣನ್ನ ಬಿಟ್ಟು ಏನೂ ಹೇಳಿಲ್ಲ. ಅವರ ವಚನಾನೇ ಹೇಳೋದು." ಇಂಥ ಮೂಢರನ್ನು ತಿದ್ದಲು ಯಾರಿಗೂ ಸಾಧ್ಯವಿಲ್ಲ. ಸಿದ್ಧರಾಮೇಶ್ವರರ ಚರಿತ್ರೆಯನ್ನು ವಿಕೃತಗೊಳಿಸಿ, ಅವರ ಹುಟ್ಟಿದ್ದು ಹಿರೇಮಠದವರಲ್ಲಿ, ಚನ್ನಬಸವಣ್ಣನಿಂದ ಲಿಂಗಧಾರಣೆಯಾಗಲಿಲ್ಲ, ಅವರು ಕಲ್ಯಾಣಕ್ಕೆ ಬರಲಿಲ್ಲ. ಅವರೇ ಪ್ರಭುದೇವ - ಚನ್ನಬಸವಣ್ಣನಿಗೆ ಲಿಂಗಧಾರಣೆ ಮಾಡಿದರು ಎಂದು ಸತ್ಯದ ತಲೆ ಮೇಲೆ ಹೊಡೆದಂತೆ ಮಾತನಾಡುವ ಪುರಾಣಕಾರರ ಗತ್ತು ಸಹ ಈ ಮೂಢರಿಗೆ ತಿಳಿಯದು.

ಬಸವಾದಿ ಪ್ರಮಥರ ಸಾಹಿತ್ಯ ಬಿಟ್ಟು ಪ್ರತಿಪಾದಿಸಲು ಇವರ ಬಳಿ ಬಂಡವಾಳ ಏನಿದೆ ? ಅದಕ್ಕೆ ವಚನಗಳನ್ನು ಉದಾಹರಿಸುವರು ಹಾಗೆ ಮಾಡಿದ ಮಾತ್ರಕ್ಕೆ ಬಸವಾದಿ ಪ್ರಮಥರಿಗೆ ಗೌರವ ಸಲ್ಲಿಸಿದಂತೆ ಆಗದು. ಸಂಯುಕ್ತ ಕರ್ನಾಟಕದಲ್ಲಿ ಶ್ರೀ ಕೆ.ಟಿ. ಪಾಂಡುರಂಗಿ ಎಂಬು ಪಂಡಿತರು 'ವಿಚಾರ ಜ್ಯೋತಿ' ಎಂದು ಬರೆಯುತ್ತಿದ್ದರು. ಬಸವಣ್ಣ, ಅಕ್ಕಮಹಾದೇವಿ, ಪ್ರಭುದೇವರು ಮುಂತಾದವರ ವಚನ ವಾಕ್ಯಗಳನ್ನು ಉದಾಹರಿಸಿಕೊಳ್ಳುತ್ತಿದ್ದರು, ಲೇಖನದುದ್ದಕ್ಕೂ ಎಂಥಾ ಪ್ರಸಂಗದಲ್ಲಿಯೂ ಆ ಮಹಾನುಭಾವರ ಹೆಸರು ಬರೆಯದೆ ಓರ್ವರು, ಮಹನೀಯರು ಎಂದು ಬರೆಯುತ್ತಿದ್ದರು. ಓದುವಾಗಲೆಲ್ಲ ಈ ಲೇಖಕರ ಅಪ್ರಾಮಾಣಿಕತೆ, ಮತಾಂಧತೆ ನಮಗೆ ಮನದಟ್ಟಾಗುತ್ತಿತ್ತು. ಶ್ರೀ ಭೀಮಸೇನ ಜೋಷಿಯವರು ವಚನಗಳನ್ನು ಹಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದಾರೆ ಎಂದು ನನಗೊಮ್ಮೆ ಯಾರೋ ಹೇಳಿದರು. ಇದು ನಿಜವೋ ಸುಳ್ಳೋ ನನಗೆ ತಿಳಿಯದು. ಒಂದು ವೇಳೆ ಮಾಡಿದರೂ ನಮಗೇನೂ ಬೇಸರವಿಲ್ಲ. ಇದು ಅವರ ವೈಷ್ಣವ ನಿಷ್ಠೆ ಎಂದು ನಿರ್ವಿಕಾರವಾಗಿ ಭಾವಿಸೋಣ.

ವಚನಗಳನ್ನು ಉದಾಹರಿಸಿ, ಲೇಖಕರ ಹೆಸರು ಹೇಳದಿರುವುದು ಶುದ್ಧ ಅಪ್ರಾಮಾಣಿಕತೆ, ಅದೇ ರೀತಿ ಪಂಚಾಚಾರ್ಯ ಸಂಪ್ರದಾಯದವರು ಬಸವಾದಿ ಪ್ರಮಥರ ಹೆಸರು ಹೇಳಿ, ವಚನ ಉದಾಹರಿಸಿ ಅವರಿಗೆ ಗೌರವ ಕೊಡದಿರುವುದು, ವಿರುದ್ಧವಾಗಿ ನಡೆಯುವುದು ಅಪ್ರಾಮಾಣಿಕತೆ !

ವಾರಸುದಾರರು ಯಾರು ? ತಾಯಿತಂದೆ ಅಪಾರ ಆಸ್ತಿಗಳಿಸಿಟ್ಟಿರುತ್ತಾರೆ ಎಂದುಕೊಳ್ಳಿರಿ. ಆ ಆಸ್ತಿಯನ್ನು ಪಡೆದು ಅನುಭವಿಸುವವರು ವಾರಸುದಾರರೇನೋ ಸರಿ; ಆದರೆ ನಿಜಾರ್ಥದಲ್ಲಿ ಆಸ್ತಿ ಪಡೆಯುವುದರೊಡನೆ ಆ ತಾಯಿತಂದೆಯರ ಸೇವೆ ಮಾಡುವವರು ವಾರಸುದಾರರು. ವಿಶ್ವಗುರು ಬಸವಣ್ಣ ಎನ್ನುವ ತಂದೆ, ವಚನ ಸಾಹಿತ್ಯ ಅನ್ನುವ ತಾಯಿ ಇವುಗಳಿಂದ ಹುಟ್ಟಿದೆ ಲಿಂಗವಂತ ಸಮಾಜ ಎಂಬ ಶಿಶುವು. ಈ ಲಿಂಗವಂತರು - ಮಠಾಧಿಕಾರಿಗಳು, ಸ್ವಾಮಿಗಳೇ ಇರಲಿ ಭಕ್ತರೇ ಇರಲಿ. ಬಸವಣ್ಣನ ಹೆಸರನ್ನು ವಚನ ಸಾಹಿತ್ಯದ (ಆಸ್ತಿಯನ್ನು) ಬಳಕೆ ಮಾಡಿಕೊಂಡೂ ಸಹ ಯಾರು ಧರ್ಮಗುರು ಬಸವಣ್ಣನವರನ್ನು 'ಅಪ್ಪ' ಎಂದು (ಅಂದರೆ ಧರ್ಮಗುರುವೆಂದು) ವಚನ ಸಾಹಿತ್ಯವಮನ್ನು ಅಮ್ಮ (ಅಂದರೆ ಧರ್ಮಸಂಹಿತೆ) ಎಂದು ಗೌರವಿಸುವುದಿಲ್ಲವೋ ಅವರ ಸೇವೆ (ಪ್ರಚಾರ) ಮಾಡುವುದಿಲ್ಲವೋ ಅವರಿಗೆ ವಾರಸುದಾರರು ಎಂದು ಹೇಳಿಕೊಳ್ಳಲು ನೈತಿಕ ಹಕ್ಕು ಇರದು. ಕ್ರೈಸ್ತ, ಇಸ್ಲಾಂ, ಬೌದ್ಧ ಯಾವುದೇ ಧರ್ಮದಲ್ಲೂ ಇಂಥ ವಂಚನೆ ನಡೆಯುತ್ತಿಲ್ಲ; ಆ ಧರ್ಮಾನುಯಾಯಿಗಳಲ್ಲಿ ಕೃತಜ್ಞತೆ - ಋಣಭಾವವಿದೆ. ಈ ಲಿಂಗವಂತರಲ್ಲಿ ಅದರಲ್ಲೂ ಬಹಳಷ್ಟು ಮಠಾಧಿಪತಿಗಳಲ್ಲಿ ಜನಾಕರ್ಷಣೆಗಾಗಿ ಬಸವಣ್ಣನ ಹೆಸರನ್ನು, ವಚನ ಸಾಹಿತ್ಯವನ್ನು ಬಳಸಿಕೊಂಡರೂ ಅಂತರಂಗದಲ್ಲಿ ಕೃತಜ್ಞತೆಯಿಲ್ಲ ಶಿವನಿಂದ ವರ ಪಡೆದು ಶಿವನ ತಲೆಯ ಮೇಲೇ ಕೈ ಇಡಲು ಹೋದ ಭಸ್ಮಾಸುರರಂತೆ, ಬಸವಣ್ಣನ ಹೆಸರು ಹೇಳುತ್ತಲೇ 'ಬಸವಣ್ಣ ಗುರುವಲ್ಲ; ನಾವು ಜಂಗಮರು, ಬಸವಣ್ಣ ಭಕ್ತ.' ಎಂಬ ಮೂರ್ಖ ಮಾತುಗಳನ್ನಾಡುವ ಭಸ್ಮಾಸುರರ ಸಂಖ್ಯೆ ಇಲ್ಲಿ ಬಹಳವಿದೆ. ಯಾರು ನಿಜಾನುಯಾಯಿಗಳು ? ಧರ್ಮಗುರುವು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವವರು ತಾನೆ? ವಿರಕ್ತರೇ ಆಗಲೀ ಪಂಚಾಚಾರ್ಯರೇ ಆಗಲಿ ಬಸವ ತತ್ತ್ವ ವಿರೋಧಿ

Digitalized by e-Sahithya Documentation Forum
Sponsored by Sarayu Foundation Trust

ಕಾರ್ಯಮಾಡುತ್ತ ತಾವೂ ಅನುಯಾಯಿಗಳು, ಬಸವ ತತ್ತ್ವವನ್ನೇ ಪ್ರಚಾರ ಮಾಡುತ್ತೇವೆ ಎನ್ನುವುದು ಹಾಸ್ಯಾಸ್ಪದವಲ್ಲವೆ? ಬಸವ ತತ್ತಾನುಯಾಯಿಗಳು ಬಹುದೇವತಾ ಉಪಾಸನೆ, ಪರಾವಲಂಬನೆ, ಶೋಷಣೆ, ಜಾತಿವಾದ, ತತ್ತ್ವ ಭ್ರಷ್ಟತೆ, ಅಹಂಕಾರ, ಆಡಂಬರ ಬಿಟ್ಟುಬಿಡಬೇಕು. ಇಂದಿನ ಬಹುಪಾಲು ವಿರಕ್ತರಲ್ಲಿ ಇವೆಲ್ಲ ಇದ್ದು, ಪಂಚಾಚಾರ್ಯರಂತೂ ಇವುಗಳಲ್ಲೇ ಅದ್ದಿ ತೆಗೆದವರಾಗಿದ್ದಾರೆ. ಶರಣರದು ಸರಳ ಜೀವನ, ಉದಾತ್ತ ಚಿಂತನೆ ಜಾತ್ಯತೀತ ಮನೋಭಾವ ವಿಶಾಲ ದೃಷ್ಟಿಕೋನ. ಇವು ಪಂಚಾಚಾರ್ಯರ ಬಳಿ ಅಪ್ಪಿತಪ್ಪಿ ಸುಳಿಯವು. ಅಂದಾಗ ಅವರಿಗೆ ಬಸವಣ್ಣನ ಗೊಡವೆಯಾದರೂ ಏಕೆ ಬೇಕು?

ಒಮ್ಮೆ ಒಂದು ರಾಷ್ಟ್ರೀಯ ಬಸವದಳದ ಪ್ರಮುಖರು ಹೇಳಿದರು "ಆ ಸ್ವಾಮಿಗಳಲ್ಲಿ ಹೀಗೆ ಬಸವಭಕ್ತಿ ಬಂದಿದೆ; ಈ ಸ್ವಾಮಿಗಳಲ್ಲಿ ತತ್ತ್ವನಿಷ್ಠೆ ಬಂದಿದೆ. ನಮಗೆಲ್ಲ ಸಂತೋಷವಾಗಿದೆ" ಎಂದರು. ಆಗ ನಾನು ಹೇಳಿದೆ. "ನಿಮ್ಮಷ್ಟೆ ನಮಗೂ ಸಂತೋಷವಾಗಿದೆ. ಏಕೆಂದರೆ ಹುಟ್ಟಿ ೧೬ ವರ್ಷ ಆದ ಮಗ ಈಗಲಾದರೂ ಅಪ್ಪನಿಗೆ ಅಪ್ಪ, ಅಮ್ಮನಿಗೆ ಅಮ್ಮ ಅನ್ನಲು ಕಲಿತರೆ ಯಾರಿಗೆ ಸಂತೋಷವಾಗದು? ಅದರಲ್ಲೂ ವಿರಕ್ತರು ಹೀಗೆ ಅನ್ನಬೇಕಾದುದು ಅವರ ಧರ್ಮ. ತಡವಾಗಿಯಾದರೂ ಎಚ್ಚೆತ್ತರಲ್ಲ, ಬಹಳ ಸಂತೋಷ. ಆದರಿಷ್ಟೆ, ನೀವು (ಭಕ್ತರು) ಸ್ವಲ್ಪ ಜಾಗ್ರತರಾಗಿರಬೇಕು. ಒಂದು ಕಥೇ ಹೀಗಿದೆ ಕೇಳಿರಿ".

ಒಂದು ಬೆಕ್ಕಿಗೆ ವಯಸ್ಸಾಯಿತು. ಇಲಿ ಹಿಡಿಯಲು ಆಗದೆ ಹೋಯಿತು. ಆಗ ಅದಕ್ಕೊಂದು ಉಪಾಯ ಹೊಳೆಯಿತು. ಅದು ರುದ್ರಾಕ್ಷಿ ಮಾಲೆ ಹಿಡಿದು ಮೂಲೆಯಲ್ಲಿ ಜಪ ಮಾಡುತ್ತ ಕುಳಿತಿತ್ತು. ಆಗ ಇಲಿಮರಿಗಳು ಮೆಲ್ಲನೆ ಬಂದು ಹೀಗೇಕೆ ಕುಳಿತೆ ಎಂದು ಕೇಳಿದವು. ಆಗ ಬೆಕ್ಕು ಹೇಳಿತು. "ನನಗೆ ವಯಸ್ಸಾಯಿತು ವೈರಾಗ್ಯ ಬಂದಿದೆ. ಅಹಿಂಸಾವ್ರತ ಸ್ವೀಕಾರ ಮಾಡಿದ್ದೇನೆ. ಇನ್ನು ಯಾವ ಹಿಂಸೆ ಮಾಡುವುದಿಲ್ಲ, ಇಲಿ ತಿನ್ನುವುದಿಲ್ಲ..." ಆ ಮರಿಗಳಿಗೆ ಬಹಳ ಸಂತೋಷವಾಯಿತು. ಆದರೂ ಕೇಳಿದವು. "ನಮಗೆ ನಂಬಲು ಆಗದು" "ಬೇಕಾದರೆ ನನ್ನ ಮುಂದೆ ಬನ್ನಿ, ಹತ್ತಿ ಆಟವಾಡಿ ನೋಡಿರಿ." ಅವು ಹತ್ತಿರ ಬಂದು, ಮೇಲೇರಿ ಆಟವಾಡಿದರು ಸುಮ್ಮನಿತ್ತು. ಇಲಿಮರಿಗಳಿಗೆ ಖುಷಿಯಾಗಿ ಓಡಿಹೋಗಿ ಸುದ್ದಿ ಮಾಡಿದವು. ಇಲಿಗಳು ನಿರ್ಭಯವಾಗಿ ಆಟವಾಡತೊಡಗಿದವು. ನಂಬಿಕೆಯಿಂದ ಇಲಿಮರಿಗಳು ಒಂಟೋಂಟಿಯಾಗಿ ಬಂದಾಗ ಬೆಕ್ಕು ಉಪಾಯವಾಗಿ ಕಬಳಿಸತೊಡಗಿತು.

ಜನರು ಜಾಗೃತರಾಗಿ, ಕ್ರೈಸ್ತರು, ಮುಸಲಾಲ್ಮಾನರು ಹೇಗೆ ಸಮಾಜವನ್ನು ಕಟ್ಟುತ್ತಿದ್ದಾರೆ ಎಂದು ಅರಿತು ಧರ್ಮಗುರುವಿನ ಬಗ್ಗೆ ಶ್ರದ್ಧೆ-ನಿಷ್ಠೆ ಬೆಳೆಸಿಕೊಳ್ಳತೊಡಗಿ, ಆ ನಿಷ್ಠೆ ಮಠಾಧಿಪತಿಗಳಲ್ಲಿ ಇಲ್ಲದ್ದು ನೋಡಿ ವಿಚಾರಶೀಲರು ಮಠಮಾನ್ಯಗಳಿಂದ ದೂರವಿರುವ ಪ್ರವೃತ್ತಿ ಬೆಳೆಸಿಕೊಳ್ಳುತ್ತಿದ್ದಾರೆ. ಕೆಲವು ಶ್ರೀಮಂತರು, ಓಲೈಸುವವರು ಮಾತ್ರ ಮಠಗಳ ಸುತ್ತ ತಿರುಗತೊಡಗಿದಾಗ "ಇದರಿಂದ ಜೀವಂತಿಕೆ ಬರುವುದಿಲ್ಲ; ವಿದ್ಯಾರ್ಥಿಗಳಿಂದ ಶಾಲೆಗೆ ಘನತೆ ಬಂದಂತೆ ಅನುಯಾಯಿಗಳಿಂದ ಭಕ್ತರಿಂದ ಮಠಕ್ಕೆ ಶೋಭೆ." ಎಂದು ಮಠಾಧಿಕಾರಿಗಳು ಮಠಗಳಲ್ಲಿ ಜೀವಂತಿಕೆ ತುಂಬಲು 'ಬಸವಾ' ಎನ್ನತೊಡಗಿದ್ದಾರೆ. ಇದು ಅಂತರಂಗದಲ್ಲಿ ಮೂಡಿದ ಪರಿವರ್ತನೆಯೇ ಆದರೆ ಸಮಾಜ ಧನ್ಯವಾಗುತ್ತದೆ. ತೋರಿಕೆಯದಾದರೆ ತಾತ್ಕಾಲಿಕವಾಗುತ್ತದೆ. **ಬಸವಣ್ಣನನ್ನು**

ಸೆಂಟ್ರಿಂಗ್ ಮಾಡಿಕೊಂಡು ತಮ್ಮ ತಮ್ಮ ಮಠದ, ತಮ್ಮ ಗದ್ದುಗೆಯ ಆರ್.ಸಿ.ಸಿ ಮೌಲ್ಡ್ ಹಾಕುವ ಮಠಾಧೀಶರಿಂದ ಏನೂ ಪ್ರಯೋಜನವಾಗದು. ತಾವು ತಮ್ಮ ಮಠವನ್ನು ಸೆಂಟ್ರಿಂಗ್ ಮಾಡಿ ಬಸವಧರ್ಮದ ಮೌಲ್ಡ್ ಹಾಕಿದರೆ ಮಾತ್ರ ಶಾಶ್ವತ ಕಾರ್ಯ ಆಗುತ್ತದೆ.

ಎಷ್ಟು ಚರ್ಚ್ ಹೆಚ್ಚಾಗುತ್ತವೋ ಅಷ್ಟು ಕ್ರೈಸ್ತಧರ್ಮ ಬೆಳೆಯುತ್ತದೆ. ಯಾವುದೇ ಸಂಪ್ರದಾಯದ ಚರ್ಚ್ ಆದರೂ ಅವು ಹೇಳುವುದು ಏಸುಕ್ರಿಸ್ತ - ಬೈಬಲ್ ಕುರಿತು. ಎಲ್ಲಾ ಪಾದ್ರಿ ಬಿಷಪ್‌ಗಳೂ ಒಂದು ಗುರಿ ಎಡೆಗೆ ಕೈ ತೋರಿಸುತ್ತಾರೆ. ಎಷ್ಟು ಮಸೀದಿಗಳೂ - ಮುಲ್ಲಾಗಳೂ ಹೇಳುವುದೂ ಅಲ್ಲಹ-ಮೊಹಮ್ಮದ್ - ಕುರಾನ್ ಬಗ್ಗೆ. ನಮ್ಮಲ್ಲಿ ಹಾಗಲ್ಲ; ಒಬ್ಬೊಬ್ಬ ವ್ಯಕ್ತಿ ಸ್ವಾಮಿ ಆದಂತೆ, ಅವನದೊಂದು ಮಠ ಬೆಳೆದಂತೆ, ಧರ್ಮದ ಶಕ್ತಿ ಕುಂದಿದಂತೆಯೆ. ಏಕೆಂದರೆ ಆತ ಮೊದಲ ತಲೆಯವನಾಗಿದ್ದರೆ ತನ್ನನ್ನೇ ಶ್ರದ್ಧಾಕೇಂದ್ರವಾಗಿ ಬೆಳೆಸಿಕೊಳ್ಳುತ್ತಾನೆ, ನಂತರದ ತಲೆಯವನಾಗಿದ್ದರೆ. ತನ್ನ ಗದ್ದುಗೆಯ ಕರ್ತೃವಿನ ಪ್ರಚಾರ ಮಾಡುತ್ತಾನೆ. ಧರ್ಮಗುರು ಬಸವಣ್ಣನ ಬಗ್ಗೆ ಹೇಳಿ ವಚನ ಸಾಹಿತ್ಯ - ಶರಣ ಪರಂಪರೆಯನ್ನು ಸದೃಢಪಡಿಸುವ ಗೋಜಿಗೇ ಹೋಗುವುದಿಲ್ಲ.

ಆದ್ದರಿಂದ ಈ ದಿಶೆಯಲ್ಲಿ ಬಸವಾಭಿಮಾನಿಗಳು - ಅನುಯಾಯಿಗಳು ಎಂದು ಹೇಳಿಕೊಳ್ಳುವವರ ಮಾತು ನಂಬುವ ಮೊದಲು ಎಚ್ಚರಿಕೆಯಿಂದ ಪರೀಕ್ಷಿಸಬೇಕು. ಇವರ ವಿಶ್ವಾಸವನ್ನು ಧೂರ್ತರು ದುರುಪಯೋಗಪಡಿಸಿಕೊಳ್ಳಲು ಅವಕಾಶ ನೀಡಬಾರದು.

ಕೂಡಲ ಸಂಗಮದಲ್ಲಿ ಶರಣಮೇಳ ಆರಂಭ

ಸಂಭ್ರಮ, ಸಡಗರದ ನಡುವೆ ಇಂದು ಇಲ್ಲಿ ಏಳನೆಯ ಶರಣಮೇಳ ಆರಂಭವಾಯಿತು.

ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಶ್ರೀಮತಿ ಬಸವರಾಜೇಶ್ವರಿ ಅವರು ಮೇಳವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಾಕಷ್ಟು ಆತಂಕಗಳು ಇದ್ದರೂ ಬಸವಣ್ಣನವರ ಕೃಪೆಯಿಂದಾಗಿ ಶರಣಮೇಳವು ವರ್ಷದಿಂದ ವರ್ಷಕ್ಕೆ ಬೆಳೆಯುತ್ತದೆ ಎಂದು ಅಭಿಪ್ರಾಯಪಟ್ಟರಲ್ಲದೆ, ಇಂದಿನ ಸಮಸ್ಯೆಗಳ ಬಗ್ಗೆ ಆಲೋಚನೆ ಮಾಡಿ ಅದಕ್ಕೆ ಸೂಕ್ತವಾದ ಪರಿಹಾರವನ್ನು ಕಂಡುಹಿಡಿಯುವುದೇ ಈ ಶರಣಮೇಳದ ಮುಖ್ಯ ಉದ್ದೇಶವಾಗಿದೆ ಎಂದರು.

ಸ್ತ್ರೀ ಶಕ್ತಿ, ಸಾಮಾಜಿಕ, ನೈತಿಕ, ರಾಜಕೀಯವಾಗಿ ಬೆಳೆದು ಬರಬೇಕು. ಅದಕ್ಕಾಗಿ ರಾಜಕೀಯದಲ್ಲಿ ಮೊನ್ನೆ ಜರುಗಿದ ಪಂಚಾಯತರಾಜ ಚುನಾವಣೆಯಲ್ಲಿ ಪ್ರತಿಶತ ೩೩ರಷ್ಟು ಸ್ಥಾನವನ್ನು ಕಾಯ್ದಿರಿಸಲಾಗಿದೆ ಎಂದರು.

ಮಹಿಳೆಯರು ಮುಂದೆ ಬರುವುದಕ್ಕಾಗಿ ಪ್ರಧಾನಿಯವರು ಎರಡು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಇದರಲ್ಲಿ ಒಂದಾದ ರಾಷ್ಟ್ರೀಯ ಮಹಿಳಾ ಸಮೃದ್ಧಿ ಯೋಜನೆಯಲ್ಲಿ ಫಲಾನುಭವಿಗಳಿಗೆ ೨೫೦೦ ದಿಂದ ೫೦೦೦ ರೂ. ಹಣವನ್ನು

Digitalized by e-Sahithya Documentation Forum
Sponsored by Sarayu Foundation Trust

ಪ್ರತಿಶತ ೧೨ರಷ್ಟು ಬಡ್ಡಿಯನ್ನು ನೀಡಲಾಗುತ್ತದೆ. ಇದಕ್ಕೆ ಯಾವುದೇ ಭದ್ರತೆ ಇಲ್ಲ. ೧೫ ತಿಂಗಳ ಅಥವಾ ೩ ವರ್ಷಗಳೊಳಗಾಗಿ ಮರುಪಾವತಿ ಮಾಡಬೇಕು. ಈ ಯೋಜನೆಗೆ ನಮ್ಮ ಖಾತೆಯಲ್ಲಿ ಕೋಟ್ಯಾಂತರ ರೂಪಾಯಿ ಇದೆ ಎಂದು ಅವರು ಹೇಳಿದರು.

ಇನ್ನೊಂದು ಯೋಜನೆ ಪ್ರಕಾರ ನೀರುದ್ಯೋಗಿ ಪುರುಷ ಮತ್ತು ಮಹಿಳೆಯರಿಗೆ ಒಂದು ಲಕ್ಷ ರೂ. ಸಾಲ ನೀಡುವ ಗುರಿ ಇದ್ದು, ಅದಕ್ಕೆ ೭೬೦೦ ಸಹಸ್ರ ರೂ. ಸಹಾಯದ ಧನ ನೀಡಲಾಗುವುದು. ಈ ಹಿನ್ನೆಲೆಯಲ್ಲಿ ಯುವಕ, ಯುವತಿಯರು ನೌಕರಿಗಾಗಿ ಅಲೆಯದೆ ನಿಮ್ಮದೇ ಆದ ಶಕ್ತಿಯನ್ನು ಬೆಳೆಸಿಕೊಳ್ಳಿ. ಸರಕಾರದಿಂದ ಸಿಗುವ ಸಾಕಷ್ಟು ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಬಡತನದ ರೇಖೆಯಿಂದ ಮೇಲೆ ಬನ್ನಿ ಎಂದರು.

ಶರಣಮೇಳ ಉಸ್ತುವಾರಿ ಸಮಿತಿ ಕಾರ್ಯಾಧ್ಯಕ್ಷೆ ಜಗದ್ಗುರು ಮಾತೆ ಮಹಾದೇವಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತ ವಚನ ಸಾಹಿತ್ಯದ ರಕ್ಷಣೆಗೆ ಅನೇಕ ಶರಣ ಶರಣೆಯರು ಖಡ್ಗ ಹಿಡಿದು ಹೋರಾಟ ಮಾಡಿದ್ದಾರೆ. ಈ ಸಮೃದ್ಧ ಸಾಹಿತ್ಯವನ್ನು ಹೃದಯ ಕಮಲದಲ್ಲಿ ತುಂಬಿ ಇತರರಿಗೆ ಹೂವಿನ ಹಾಗೆ ಪರಿಮಳದಂತೆ ಹರಡಿಸಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಮೈಸೂರು ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಡಾ. ದೇ ಜವರೇಗೌಡ ಅವರು ಜಗತ್ತಿನ ಎಲ್ಲ ಜನತೆ ಇಲ್ಲಿ ಬರುವಂತೆ ಇದನ್ನು ಅಂತರರಾಷ್ಟ್ರೀಯ ಕೇಂದ್ರವನ್ನಾಗಿ ಮಾಡಬೇಕು. ಭಾರತ ಸರಕಾರ, ಜಗದ್ಗುರು ಮಾತೆ ಮಹಾದೇವಿ ಮತ್ತು ಜಗದ್ಗುರು ಲಿಂಗಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ಈ ಬಗ್ಗೆ ಸಮಿತಿಯನ್ನು ಸ್ಥಾಪಿಸಿಬೇಕು ಎಂದರು.

ಡಾ. ದೇ. ಜವರೇಗೌಡ ಮುಂದುವರೆದು ಮಾತನಾಡುತ್ತ ಬಸವಣ್ಣನವರು ಐಕ್ಯರಾಗಿಲ್ಲ. ಅವರು ತಮ್ಮ ವಚನ ಸಾಹಿತ್ಯದ ಮೂಲಕ ಇಡೀ ಜಗತ್ತಿಗೆ ಜ್ಯೋತಿಯಾಗಿ ಬೆಳಗುತ್ತಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ವಿಶ್ವಗುರು ಬಸವಣ್ಣನವರ ವಚನಗಳಾಧಾರಿತ ಬಸವ ವಚನಾಮೃತ ಎಂಬ ಧ್ವನಿಸುರುಳಿಯನ್ನು ಮೈಸೂರಿನ ಸಾಹಿತ್ಯ ಸಂಶೋಧಕ ರಾಜೇಂದ್ರಗೌಡ ಅವರು ಬಿಡುಗಡೆ ಮಾಡಿದರು.

ಇದೇ ಸಂದರ್ಭದಲ್ಲಿ ಉತ್ತರ ಕರ್ನಾಟಕ ದಿನಪತ್ರಿಕೆಯ ಸಂಪಾದಕ ಶಿವಶರಣಪ್ಪ ವಾಲಿ, ಅವರ ಶ್ರೀಮತಿ ಶಕುಂತಲಾ ವಾಲಿ, ಸಚಿವೆ ಬಸವರಾಜೇಶ್ವರಿ ಮತ್ತು ಚಳ್ಳಕೇರಿಯ ವೀರಭದ್ರಪ್ಪ ಅವರನ್ನು ಜಗದ್ಗುರು ಲಿಂಗಾನಂದ ಸ್ವಾಮಿಗಳು ಶಾಲು ಹೊದಿಸಿ ನೆನಪಿನ ಕಾಣಿಕೆಯನ್ನಿತ್ತು ಸತ್ಕರಿಸಿ ಗೌರವಿಸಿದರು.

ಸಮಾರಂಭದ ಸನ್ನಿಧಿ ವಹಿಸಿದ್ದ ಶ್ರೀಮತಿ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ ಪುನರ್ಜನ್ಮ ಮತ್ತು ಪೂರ್ವಜನ್ಮ ಸಿದ್ಧಾಂತವನ್ನು ಕುರಿತು ಮಾತನಾಡಿದರು.

ಎನ್. ಪುಟ್ಟರುದ್ರಪ್ಪ ಸ್ವಾಗತಿಸಿದರು. ಜಿ.ಜಿ. ಪಾಟೀಲ ವಂದಿಸಿದರು. ಬಸವಕುಮಾರ ಪಾಟೀಲ ಕಾರ್ಯಕ್ರಮ ನಿರೂಪಿಸಿದರು.

— *(ಸಂಯುಕ್ತ ಕರ್ನಾಟಕ ೧೪-೧-೧೯೯೪)*

ದಿ. 12-1-1994 ರಂದು ನಡೆದ ಬಸವ ಧರ್ಮ ಸಂಸತ್ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು

೧. ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಆಚರಣೆ
೨. ಪ್ರತಿ ಊರಲ್ಲಿಯೂ ವಾರ್ಷಿಕ ಗಣ ಸಮಾವೇಶ
೩. ರಾಷ್ಟ್ರೀಯ ಬಸವ ದಳದಿಂದ ಯೋಗ ಶಿಕ್ಷಣ
೪. ಯೋಗ ತರಬೇತಿ ಶಿಬಿರ ನಡೆಸುವಿಕೆ
೫. ಶರಣವ್ರತ ಸ್ವೀಕಾರ - ನಿಯಮಗಳ ರಚನೆ
೬. ರಾಷ್ಟ್ರೀಯ ಬಸವ ದಳಗಳ ಪ್ರಕಟಣೆ - ಕೇಂದ್ರದ ಪೂರ್ವಾನುಮತಿ
೭. ಬಸವ ಧರ್ಮದ ಎರಡನೆಯ ಸಮ್ಮೇಳನ
೮. ನವರಾತ್ರಿ ಆಚರಣೆ, ಬನ್ನಿ ಕೊಡುವ ಸಂಪ್ರದಾಯ ಸರಿಯೆ ?
೯. ಬಸವೇಶ್ವರ ಐಕ್ಯಮಂಟಪ – ಉಚಿತ ಪ್ರವೇಶ
೧೦. ಶರಣ ಸಂಸ್ಕೃತಿಯ ಕಲಬೆರಕೆ ಬೇಡ

ಶರಣ ಸಂಸ್ಕೃತಿಯ ಕಲಬೆರಕೆ ಬೇಡ

ಪೂಜ್ಯರೇ / ಶರಣ ಬಂಧುಗಳೇ,

ಬಸವ ಧರ್ಮ ಸಂಸತ್ ವೇದಿಕೆಯನ್ನು ರಚಿಸಿರುವುದು ನಮಗೆ ಅತೀವ ಸಂತೋಷದ ಸಂಗತಿಯಾಗಿದೆ. ಅದಕ್ಕಾಗಿ ಅಭಿನಂದನೆ. ನಾವೆಲ್ಲರೂ ನಮ್ಮ ನಮ್ಮ ಸಂದೇಹ-ಅಜ್ಞಾನಗಳನ್ನು ಶರಣರ ಶಾಸನ ಸಭೆಯ ಮುಂದಿಟ್ಟು, ಪರಿಹರಿಸಿ ಕೊಳ್ಳಲು ಅವಕಾಶವು ದೊರೆತಿರುತ್ತದೆ.

1. ಬೆಂಗಳೂರು ನಗರ ಮುಂತಾದ ಕಡೆ ಶ್ರೀ ಬಸವಾದಿ ಶರಣರುಗಳ ಹೆಸರನ್ನು ಬಳಸಿಕೊಂಡು ಹಲವಾರು ಸಂಘ-ಸಂಸ್ಥೆ, ಕಲ್ಯಾಣ ಮಂಟಪ ಮುಂತಾದುವನ್ನು ಲಿಂಗವಂತರು ಕಟ್ಟಿಸುವರು. ಆದರೆ ತತ್ತ್ವಭ್ರಷ್ಟರಾಗಿಯೋ, ಹಣದಾಸೆಗಾಗಿಯೋ ಬಸವ ತತ್ತ್ವಕ್ಕೆ ವಿರುದ್ಧವಾದ ಗಣಪತಿ ಪ್ರತಿಷ್ಠಾಪನೆ, ನವಗ್ರಹ ಪ್ರತಿಷ್ಠಾಪನೆ ಮುಂತಾಗಿ ಮಾಡುವರು. ಇದು ನಮಗೆ ತುಂಬಾ ದುಃಖದ ಸಂಗತಿಯಾಗಿದೆ. 'ಶರಣ ಸೇವಾ ಸಮಾಜ' ಎನ್ನುವವರು ಇದೇ ರೀತಿ ಮಾಡಿದಾಗ ನಾವು ಪ್ರತಿಭಟನೆ ಮಾಡಿದೆವಾದರೂ ಅವರು ಪೋಲಿಸ್ ನೆರವಿನಿಂದ ತತ್ತ್ವವಿರೋಧಿ ಕಾರ್ಯವನ್ನು ಪೂರೈಸಿಯೇ ಬಿಟ್ಟರು. ಶ್ರೀ ಜಗಜ್ಯೋತಿ ಬಸವೇಶ್ವರ ಕಲ್ಯಾಣ ಮಂಟಪದವರು ಗಣಪತಿ ಪ್ರತಿಷ್ಠಾಪನೆ ಮಾಡುವ ತಯಾರಿಯಲ್ಲಿದ್ದಾರೆ ಎಂಬುದಾಗಿ ತಿಳಿದಿದೆ.

Digitalized by e-Sahithya Documentation Forum
Sponsored by Sarayu Foundation Trust

2. ಅದೇ ರೀತಿ ಶ್ರೀ ರೇಣುಕಾಚಾರ್ಯ ಕಲ್ಯಾಣ ಮಂಟಪ, ಜಗಜ್ಯೋತಿ ಬಸವೇಶ್ವರ ಪ್ರಾರ್ಥನಾ ಮಂದಿರ ಕಟ್ಟುವುದಾಗಿ ಇನ್ನೊಂದು ಸಂಸ್ಥೆಯವರು ಪ್ರಕಟಿಸಿದ್ದಾರೆ. ಪರಸ್ಪರ ವಿರುದ್ಧವಾದ ತತ್ತ್ವಗಳನ್ನು-ವ್ಯಕ್ತಿಗಳ ಹೆಸರನ್ನು ಸೇರಿಸಿ ಇನ್ನೊಂದು ರೀತಿ ಅಪಚಾರ ಮಾಡುವ ಕೆಲಸ ಈ ರೀತಿ ಪ್ರಾರಂಭವಾಗುತ್ತಿದೆ. ಮೊದಲು ವಿಶ್ವಗುರು ಬಸವಣ್ಣನವರ ವಿರೋಧಿಗಳಾಗಿದ್ದವರೇ ಈಗ ಮೆಲ್ಲನೆ ಧರ್ಮಗುರು ಬಸವಣ್ಣನವರ ಹೆಸರನ್ನು ಬಳಸಿಕೊಂಡು ಇನ್ನೊಂದು ರೀತಿಯ ಅನ್ಯಾಯ ಮಾಡುತ್ತಿದ್ದಾರೆ.

ಆದ್ದರಿಂದ ಶರಣರ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ ಒಂದು ನಿರ್ಣಯವನ್ನು ಕೈಗೊಳ್ಳಬೇಕು. ನಾವು ಅದರ ಬೆಂಬಳಿವಿಡಿದು ಹೋರಾಡಲು, ಸಂಘಟಕರೊಡನೆ ಚರ್ಚಿಸಲು ಸಾಧ್ಯವಾಗುತ್ತದೆ. ತತ್ತ್ವವಿರೋಧಿ ಕಾರ್ಯಗಳನ್ನು ತಡೆಗಟ್ಟಲು ಇಂದು ಯತ್ನಿಸುವುದು ಅತ್ಯಗತ್ಯವೆಂದು ತಿಳಿದಿದ್ದೇವೆ.

ರಾಷ್ಟ್ರೀಯ ಬಸವ ದಳ, ಬೆಂಗಳೂರು – ಇದರ ಪರವಾಗಿ

ಶರಣೆಯರಾದ :		ಶರಣರುಗಳಾದ :
ದೇವಿಕಾ ಶರಣಪ್ಪ		**ಕೊಂಡಜ್ಜಿ ಬಸಪ್ಪ.**
ಪಾರ್ವತಿ ಶಿರೋಳ.	**ದಿ.12-1-1994**	**ಗಂಗಾಧರ್.**
ರೇವಮ್ಮ ಈಶ್ವರಪ್ಪ	**ಕೂಡಲಸಂಗಮ**	**ಎಲ್. ಗುರುಸ್ವಾಮಿ**
ಮತ್ತು ಇತರರು		ಮತ್ತು ಇತರರು

ಕಲ್ಯಾಣ ಕಿರಣ ಚಂದಾದಾರರ ಗಮನಕ್ಕೆ

"ಕಲ್ಯಾಣ ಕಿರಣ" ಮಾಸ ಪತ್ರಿಕೆಯು ಅಂಚೆಯಲ್ಲಿ ಬರುತ್ತಿದ್ದಂತೆಯೇ ಚಂದಾ ಸಂಖ್ಯೆ ಬರೆದಿಟ್ಟುಕೊಳ್ಳಿರಿ. ಪತ್ರ ವ್ಯವಹಾರ ಮಾಡುವಾಗ ತಪ್ಪದೆ ಚಂದಾ ಸಂಖ್ಯೆ ಬರೆಯಿರಿ,

—ವ್ಯವಸ್ಥಾಪಕರು
"ಕಲ್ಯಾಣ ಕಿರಣ" ಮಾಸ ಪತ್ರಿಕೆ,
ವಿಶ್ವ ಕಲ್ಯಾಣ ಮಿಷನ್,
ಬಸವ ಗಂಗೋತ್ರಿ,
ಕುಂಬಳಗೋಡು-560074
ಮೈಸೂರು ರೋಡ್, ಬೆಂಗಳೂರು ದಕ್ಷಿಣ.
ಫೋನ ನಂ : 8437234

ಶ್ರೀ ಬಸವೇಶ್ವರ ಐಕ್ಯಮಂಟಪ—ಉಚಿತ ಪ್ರವೇಶ

ಬಸವ ಭಕ್ತರಿಗೆ ಒಂದು ಕರೆ.

ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವ ಬಸವಾ ಎಂಬುದೇ ಭಕ್ತಿಕಾಣಾ
ಕಪಿಲಸಿದ್ಧಮಲ್ಲಿಕಾರ್ಜುನಾ ! —ಶ್ರೀ ಸಿದ್ಧರಾಮೇಶ್ವರರು

ಶರಣ ಬಂಧುಗಳೇ,

ತಮ್ಮ ಮುಂದೆ ಒಂದು ವಿಶೇಷ ಮನವಿಯನ್ನು ಇಡಲು ಬಯಸಿದ್ದೇನೆ. ಇದು ನನ್ನ ವೈಯಕ್ತಿಕ ಮನವಿ ಮತ್ತು ನಿಮ್ಮಲ್ಲಿಯೂ ಇಂತಹ ಆಲೋಚನೆ ಬಂದಿರಲೂ ಸಾಕು.

ಕೂಡಲ ಸಂಗಮವು ಪುರಾತನ ಸಂಗಮೇಶ್ವರ ದೇವಾಲಯವನ್ನು ಹೊಂದಿದೆ. ಕೃಷ್ಣಾ-ಮಲಪ್ರಭಾ ನದಿಗಳ ಸಂಗಮದಿಂದ ಶೋಭಿಸುತ್ತಿದೆ. ಇದಕ್ಕೆ ಐತಿಹಾಸಿಕ, ತಾತ್ತ್ವಿಕ ಮಹತ್ವ ಬಂದುದು ಧರ್ಮಪಿತ ಬಸವಣ್ಣನವರು ಇಲ್ಲಿ ವಿದ್ಯಾಭ್ಯಾಸ ಪಡೆದು, ತಪಸ್ಸು ಮಾಡಿದುದರಿಂದ ಮತ್ತು ಅವರು ಇಲ್ಲಿಯೇ ಲಿಂಗೈಕ್ಯರಾದುದರಿಂದ. ಹೀಗಾಗಿ ಇದನ್ನು ಧರ್ಮಕ್ಷೇತ್ರ ಎಂದು ಬಸವ ಧರ್ಮದ ಮಹಾಜಗದ್ಗುರು ಪೀಠವು ಘೋಷಿಸಿತು. ನಮಗೆ-ನಿಮಗೆಲ್ಲ ಭಾವನಾತ್ಮಕ ಸಂಬಂಧ ಬೆಳೆದು ಜೀವಮಾನದಲ್ಲಿ ಒಮ್ಮೆಯೂ ನೋಡದವರು ಸಹ ಪ್ರತಿವರ್ಷವೂ ಬರುವಂತೆ ಆಗಿದೆ. ನಾವು ಕೂಡಲ ಸಂಗಮದ ಬಗ್ಗೆ ಹಲವಾರು ಕನಸುಗಳನ್ನು ಹೊತ್ತು ಬರುತ್ತೇವೆ. ಇಲ್ಲಿ ಆಗುವ ಆಘಾತ ಅಸದಳವಾದುದು.

ಶ್ರೀ ಸಂಗಮೇಶ್ವರ ದೇವಾಲಯ ಮತ್ತು ಐಕ್ಯಮಂಟಪದ ಮೇಲುಸ್ತುವಾರಿ ಮಾಡುತ್ತಿರುವ ವಂಶಪಾರಂಪರ್ಯದ ಟ್ರಸ್ಟ್ ಬಸವ ತತ್ತ್ವದಲ್ಲಿ ಆಸಕ್ತಿ-ನಿಷ್ಠೆಯಿಲ್ಲದೆ ಕೇವಲ ಹಣ ಗಳಿಕೆಯಲ್ಲಿ ಆಸಕ್ತವಾಗಿರುವ ಟ್ರಸ್ಟ್. ಶ್ರೀ ಬಸವೇಶ್ವರ ಐಕ್ಯಮಂಟಪವನ್ನು ನಾರಾಯಣಪುರ ಅಣೆಕಟ್ಟಿನ ನೀರಿನಲ್ಲಿ ಮುಳುಗದಂತೆ ಸಂರಕ್ಷಿಸಿರುವುದು ಕರ್ನಾಟಕ ಸರ್ಕಾರದ ನೀರಾವರಿ ಇಲಾಖೆ. ಆ ಮಂಟಪವು ಬಯಲಲ್ಲಿ ಇದ್ದಾಗ ಯಾವುದೇ ರೀತಿ ಆಸಕ್ತಿ ವಹಿಸದಿದ್ದ ಪೂಜಾರಿವೃಂದ ಮತ್ತು ದೇವಾಲಯ ಸಮಿತಿಯವರು, ಸರ್ಕಾರವು ಕೊಳವೆ ಭಾವಿ ಕಟ್ಟಿ ಐಕ್ಯ ಮಂಟಪವನ್ನು ಸಂರಕ್ಷಿಸಿದ ಮೇಲೆ 50 ಪೈಸೆ ಟಿಕೆಟನ್ನು ಇಡಲಾರಂಭಿಸಿದರು. ಈಗ ಒಂದು ರೂಪಾಯಿ ತೆತ್ತು ಪ್ರವೇಶ ಪಡೆದು ನಾವು ಅಪ್ಪ ಬಸವಣ್ಣನವರ ಶ್ರೀಸಮಾಧಿಯ ದರ್ಶನ ಪಡೆಯಬೇಕಾಗಿದೆ.

ಪವಿತ್ರ ಸ್ಥಳಗಳ ದರ್ಶನ, ಪೂಜೆ-ಪುರಸ್ಕಾರಗಳಿಗೆ ಹಣ, ಜಾತಿ, ಅಂತಸ್ತು ಅಡ್ಡಿಯಾಗಬಾರದು ; ಎಲ್ಲರಿಗೂ ಇವು ಲಭ್ಯವಾಗಬೇಕು ಎಂಬುದೇ ಬಸವ ತತ್ತ್ವದ

Digitalized by e-Sahithya Documentation Forum
Sponsored by Sarayu Foundation Trust

ಮರ್ಮ. ಇದಕ್ಕಾಗಿಯೇ ಗುರು ಬಸವಣ್ಣನವರು 'ಬಸವ ಕ್ರಾಂತಿ' ದಿನದಂದು ನವ ಧರ್ಮದ ಘೋಷಣೆ ಮಾಡಿದರು. ಇಂಥ ಕ್ರಾಂತಿಪುರುಷ ಬಸವಣ್ಣನವರ ಸಮಾಧಿ ದರ್ಶನಕ್ಕೆ ಪುನಃ ಹಣ ಕೊಡುವ ದೌರ್ಭಾಗ್ಯ ನಮ್ಮ-ನಿಮ್ಮದಾಗಿದೆ. ಯಾವುದೇ ರೀತಿ ಆಕರ್ಷಣೀಯವಾಗಿ ಈ ಸ್ಥಾನವನ್ನು ಇಟ್ಟುಕೊಳ್ಳದ ದೇವಾಲಯ ಸಮಿತಿಯವರು ಶರಣ ಮೇಳದ ಕಾಲದಲ್ಲಿ ಹರಾಜು ಸಹಿತ ಹಾಕಿ ಐಕ್ಯಮಂಟಪದಲ್ಲಿ ವ್ಯವಹಾರ ನಡೆಸುವರು. ಇದನ್ನು ಕಂಡು ನೊಂದು ನಾವು ಸಾತ್ವಿಕ ಪ್ರತಿಭಟನೆ ಮಾಡಿ ನಮ್ಮ ಅನುತಾಪವನ್ನು ವ್ಯಕ್ತಪಡಿಸಿದರೆ ಆಗ ದೇವಾಲಯದವರು ನಮ್ಮ ಬಗ್ಗೆ ಅಪಪ್ರಚಾರ ಮಾಡಿದರು. ಈ ದೇಶದಲ್ಲಿ ಅನ್ಯಾಯವನ್ನು ಪ್ರತಿಭಟಿಸುವ ಹಕ್ಕನ್ನೂ ನಾವು ಕಳೆದು ಕೊಳ್ಳುತ್ತಿದ್ದೇವೆ ಏನೋ ಅನ್ನಿಸದಿರದು.

ಸರ್ಕಾರಗಳಂತೂ ತಮ್ಮದೇ ಸಮಸ್ಯೆಗಳಲ್ಲಿ ಮುಳುಗಿರುತ್ತವೆ. ಜನರ ಅನಿಸಿಕೆಗೆ ಸ್ಪಂದಿಸಲೂ ಅದಕ್ಕೂ ಪುರುಸೊತ್ತು ಇರದು. ಸರ್ಕಾರಿ ವೃಂದ ಕಣ್ಣಿದ್ದೂ ಕುರುಡು. ಕಿವಿಯಿದ್ದೂ ಕಿವುಡು. ಗೋಲ್‌ಗುಮ್ಮಟದಂತಹ ಸ್ಮಾರಕ ನೋಡಲು ಶುಕ್ರವಾರ ಹೋಗುವವರಿಗೆ ಉಚಿತ ಪ್ರವೇಶವಿದೆ. ವಿಶ್ವಗುರು ಬಸವಣ್ಣನವರಂಥ ಮಹಾ ಪುರುಷರ ದಿವ್ಯ ಸಮಾಧಿಯ ದರ್ಶನಕ್ಕೆ ನಮಗೆ ಆ ಭಾಗ್ಯವಿಲ್ಲ. ಇದು ನಮ್ಮ ದುರ್ದೈವವೆ ?

ಆದ್ದರಿಂದ ಬಸವ ಭಕ್ತರಲ್ಲಿ ನನ್ನ ಹೃತ್ಪೂರ್ವಕ ಮನವಿ ಏನೆಂದರೆ, "ಬಸವೇಶ್ವರ ಐಕ್ಯಮಂಟಪದ ಪ್ರವೇಶವು ಎಲ್ಲರಿಗೂ ಉಚಿತವಾಗಿ ಲಭ್ಯವಾಗುವವರೆಗೆ ನಾವು ಹಣಕೊಟ್ಟು ಬಸವೇಶ್ವರ ಐಕ್ಯಮಂಟಪದ ದರ್ಶನಕ್ಕೆ ಹೋಗುವುದಿಲ್ಲ" ಎಂಬ ಸಂಕಲ್ಪ ತೊಡಬೇಕಾಗಿದೆ. ನಮಗೆ ಇನ್ನಾವ ಪರಿಹಾರವೂ ಉಳಿದಿಲ್ಲ. ನಮಗೆ-ನಿಮಗೆ ಅತ್ಯಂತ ಭಾವನಾತ್ಮಕವಾಗಿ ಸಂಬಂಧಿಸಿರುವ ಇಂಥ ಸ್ಥಾನದ ಬಗ್ಗೆ ಹೀಗೆ ಮಾಡಲು ನಮಗೂ ಅಪಾರವಾದ ವ್ಯಥೆಯಾಗುತ್ತದೆ. ಆದರೆ, ಇಂಥ ಸಂಕಲ್ಪ ಅನಿವಾರ್ಯ. ಏಕೆಂದರೆ, ಇಂದು ಆದಾಯದ ಮೂಲವಾಗಿರುವ ಶ್ರೀ ಬಸವೇಶ್ವರ ಐಕ್ಯ ಮಂಟಪದ ಹಣ ತೆಗೆದುಕೊಂಡೇ ಬಸವ ತತ್ತ್ವಕ್ಕೆ ವಿರುದ್ಧವಾದ ಅಡ್ಡಪಲ್ಲಕ್ಕಿ ಉತ್ಸವದ ವ್ಯವಸ್ಥೆ ಮಾಡುತ್ತಾರೆ, ಬಸವ ತತ್ತ್ವಾನುಯಾಯಿಗಳ ಕಾರ್ಯಕ್ರಮವಾದ ಶರಣಮೇಳದೊಡನೆ ಸ್ಪರ್ಧೆ ನಡೆಸುತ್ತಾರೆ. ಶಿವನಿಂದ ವರ ಪಡೆದ ಭಸ್ಮಾಸುರ ಶಿವನ ತಲೆಯ ಮೇಲೆ ಕೈಯಿಟ್ಟಂತೆ ದೇವಾಲಯ ಸಮಿತಿಯವರು ವರ್ತಿಸುತ್ತಿದ್ದಾರೆ. ಹೀಗಿರುವಾಗ ನಾವು ಅನ್ಯಾಯವನ್ನು ಪ್ರತಿಭಟಿಸುವ ಶಕ್ತಿಯನ್ನು ಪೂರ್ತಿ ಕಳೆದುಕೊಂಡರೆ ಹೇಗೆ ?

ಆದ್ದರಿಂದ ನಾವು ನಮ್ಮ ಹೃನ್ಮನಮತಿಗಳಲ್ಲಿ ಗುರು ಬಸವಣ್ಣನವರನ್ನು ಪ್ರತಿಷ್ಠಾಪಿಸಿಕೊಂಡು ಇಲ್ಲೇ ಪೂಜಿಸೋಣ, ಧ್ಯಾನಿಸೋಣ. ಐಕ್ಯಮಂಟಪದ ದರ್ಶನ ಉಚಿತವಾಗಿ ಪ್ರಾಪ್ತಿಯಾಗುವವರೆಗೆ ಈ ದೃಢ ಸಂಕಲ್ಪವನ್ನು ನಿಜ ಬಸವ ಭಕ್ತರು ಕೈಗೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

12-1-1994

ಬಸವಕುಮಾರ್ ಪಾಟೀಲ, ಬೀದರ.

ರಾಷ್ಟ್ರೀಯ ಬಸವ ದಳಗಳ ಮಹಾಧಿವೇಶನದಲ್ಲಿ
ದಿ. 15-1-1994 ರಂದು ತೆಗೆದುಕೊಂಡ ನಿರ್ಣಯಗಳು

---

1. ರಾಷ್ಟ್ರೀಯ ಬಸವ ದಳಗಳ ಶಾಖೆಗಳು ಬೆಳೆಯುತ್ತಿವೆ. ಅವುಗಳ ಮೂಲಕ ಉತ್ತಮ ಸಂಘಟನೆ ಮತ್ತು ಸಂಸ್ಕಾರವು ಸಾಧ್ಯವಾಗುತ್ತಿದೆ. ವಿವಿಧ ರಾಷ್ಟ್ರೀಯ ಬಸವ ದಳಗಳು ಬೇರೆ ಬೇರೆ ಸಮಯದಲ್ಲಿ ರೂಪುಗೊಳ್ಳುತ್ತವೆ. ಅವುಗಳು ಸ್ಥಾಪನೆಗೊಂಡ ದಿನಾಂಕದಂದು ಅಥವಾ ಆ ದಿನಾಂಕದ ಹಿಂದೆ-ಮುಂದೆ ಆಯಾ ಶಾಖೆಗಳ ವಾರ್ಷಿಕೋತ್ಸವವನ್ನು ನಡೆಸಬಹುದು. ಇದರ ಜೊತೆಗೆ ಎಲ್ಲ ರಾಷ್ಟ್ರೀಯ ಬಸವ ದಳಗಳವರೂ ಒಂದು ವಿಶಿಷ್ಟದಿನದಂದು ಅವರವರ ಊರುಗಳಲ್ಲಿ ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬವನ್ನು ಆಚರಿಸುವುದು ಸೂಕ್ತ.

   ಈ ಅಗತ್ಯತೆಯನ್ನು ಅರಿತು ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬಕ್ಕಾಗಿ ಭಾದ್ರಪದ ಚೌತಿಯನ್ನು ಆಯ್ಕೆ ಮಾಡಲಾಗಿದೆ. ಈ ಆಯ್ಕೆಗೆ ಕಾರಣಗಳೆಂದರೆ, ರಾಷ್ಟ್ರೀಯ ಬಸವ ದಳದ ಪರಿಕಲ್ಪನೆ (Concept) ನೀಡಿದ ಪೂಜ್ಯರಾದ ಜಗದ್ಗುರು ಲಿಂಗಾನಂದ ಸ್ವಾಮಿಗಳವರು ಹುಟ್ಟಿದ್ದು ಭಾದ್ರಪದ ಚೌತಿಯಂದು. ಪೂಜ್ಯರು ಅವರ ವರ್ಧಂತಿಯ ಆಚರಣೆಯ ಬದಲಿಗೆ ಅಂದು ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಆಚರಿಸಲು ಕರೆ ನೀಡಿರುವುದು. ಈ ದಿನವನ್ನು ಆಯ್ಕೆಮಾಡಲು ಮತ್ತೊಂದು ಕಾರಣ 'ಗಣಪತಿ'ಯ ಕಲ್ಪನೆಯು ಗಣನೇತಾರನ ಕಲ್ಪನೆಯನ್ನೇ ನೀಡುವ ಕಾರಣ, ರಾಷ್ಟ್ರೀಯ ಬಸವ ದಳದ ಗುರಿಯು ಸಹ ಆದರ್ಶ ಗಣನೇತಾರರನ್ನು ತಯಾರು ಮಾಡುವುದೇ ಆಗಿರುವುದರಿಂದ, ಚೌತಿಯಂದು ರಾಷ್ಟ್ರೀಯ ಬಸವ ದಳದ ಜಯಂತಿ ಎಂದು ಆಚರಿಸಬೇಕೆಂದು ನಿರ್ಣಯಿಸಲಾಯಿತು.

2. ಶರಣ ಮೇಳವು ವರ್ಷಕ್ಕೊಮ್ಮೆ ಎಲ್ಲ ಶರಣ ಬಂಧುಗಳೂ ಧರ್ಮಕ್ಷೇತ್ರದಲ್ಲಿ ಸಮಾವೇಶವಾಗಬೇಕೆಂಬುವ ಪ್ರಜ್ಞೆಯನ್ನೂ ಜಾಗೃತಗೊಳಿಸಿ ಎಲ್ಲರನ್ನು ಒಟ್ಟುಗೂಡಿಸುತ್ತದೆ. ವಾರಕ್ಕೊಮ್ಮೆ ಮಾಡುವ ಸಾಮೂಹಿಕ ಪ್ರಾರ್ಥನೆಯು ಸಂಸ್ಕಾರ ಮತ್ತು ಸಂಘಟನೆಗೆ ಪೋಷಕವಾಗುತ್ತಿದೆ. ಇದೇ ರೀತಿಯಲ್ಲಿ ಪ್ರತಿ ಊರಿನಲ್ಲಿಯೂ ಇರುವ ಶರಣ ಬಂಧುಗಳು ಸಕುಟುಂಬ ಪರಿವಾರ ಸಹಿತವಾಗಿ ನಗರ ಮಧ್ಯದಲ್ಲಿರುವ ವಿಶಾಲ ಮೈದಾನದಲ್ಲಿ ಸಮಾವೇಶವಾಗಿ ಪ್ರಾರ್ಥನೆಯನ್ನು ಮಾಡಬೇಕು. ಸಮುದಾಯ ಪ್ರಾರ್ಥನೆ ಮತ್ತು ಷಟ್‌ಸೂತ್ರ ಘೋಷಣೆ ಮುಖ್ಯವಾಗಿರುವ ಈ ಗಣಸಮಾವೇಶದಲ್ಲಿ ಪ್ರಸಾದ ವಿತರಣೆಯನ್ನು ಮಂಗಲಾನಂತರ ಮಾಡಬೇಕು. ಇದಕ್ಕೆ ಸೂಕ್ತವಾದ ದಿನವೆಂದರೆ ಶಿವರಾತ್ರಿ. ಅಂದು ಎಲ್ಲ ಶರಣರ ಸ್ಮರಣೆಯಲ್ಲಿ ಸರ್ವಶರಣರ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದ್ದು, ಪ್ರಾರ್ಥನೆಗೆ ಅನುಕೂಲವಾಗುತ್ತದೆ ಬೆಳಗಿನ ಸ್ನಾನ-ಪೂಜೆ ಮುಗಿಸಿಕೊಂಡು ಶರಣ ಬಂಧುಗಳು ಪ್ರಾರ್ಥನೆಗೆ ಸೇರಬೇಕು.

Digitalized by e-Sahithya Documentation Forum
Sponsored by Sarayu Foundation Trust

ಈ ವಾರ್ಷಿಕ ಗಣಸಮಾವೇಶವು ಎಲ್ಲ ನಗರ, ಊರು, ಗ್ರಾಮಗಳಲ್ಲಿ ನಡೆಯುವ ಸತ್‌ಪರಂಪರೆಯನ್ನು ಬೆಳೆಸಬೇಕು. ಇಂಥ ಗಣಸಮಾವೇಶಗಳನ್ನು ರಾಷ್ಟ್ರೀಯ ಬಸವ ದಳಗಳು ನಡೆಸಬೇಕು ಎಂದು ನಿರ್ಣಯ ತೆಗೆದುಕೊಳ್ಳಲಾಯಿತು.

3. ರಾಷ್ಟ್ರೀಯ ಬಸವ ದಳಗಳು ಸಂಸ್ಕಾರ ಮತ್ತು ಸಂಘಟನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ವಾರದ ಸಾಮೂಹಿಕ ಪ್ರಾರ್ಥನೆ ಮತ್ತು ಶರಣರ ಜಯಂತಿಗಳ ಆಚರಣೆಯ ಮೂಲಕ ಉತ್ತಮ ಸಂಸ್ಕಾರ ನೀಡುತ್ತಿವೆ. ಇದರ ಜೊತೆಗೆ ಯೋಗ ತರಬೇತಿಯನ್ನು ನೀಡುವ ಯೋಜನೆ ಹಾಕಬೇಕು. ದೈಹಿಕ-ಮಾನಸಿಕ ಆರೋಗ್ಯಗಳ ಸಂರಕ್ಷಣೆಗೆ ನೆರವಾಗುವ ಯೋಗಾಸನ–ಪ್ರಾಣಾಯಾಮಗಳ ಜೊತೆಗೆ ಸದಸ್ಯರಿಗೆ ಧ್ಯಾನ-ತ್ರಾಟಕಗಳಿಂದ ಕೂಡಿದ ಶಿವಯೋಗದ ತರಬೇತಿ ಸಹ ನೀಡಬೇಕು.

4. ರಾಷ್ಟ್ರೀಯ ಬಸವ ದಳಗಳು ಯೋಗ ತರಬೇತಿ ಶಿಬಿರವನ್ನು ನಡೆಸಬೇಕು. ತನ್ಮೂಲಕ ತನ್ನ ಸದಸ್ಯರಿಗೆ ಮಾತ್ರವಲ್ಲದೆ ಇನ್ನಿತರ ಜನರಿಗೂ ದೈಹಿಕ-ಮಾನಸಿಕ ಆರೋಗ್ಯ ಸಂರಕ್ಷಣೆಗಾಗಿ ಯೋಗಾಭ್ಯಾಸವನ್ನು ರೂಢಿಸಿಕೊಳ್ಳುವ ತರಬೇತಿ ನೀಡಬೇಕು. ಹತ್ತು – ಹದಿನೈದು ದಿವಸಗಳ ತರಬೇತಿ ಕಮ್ಮಟಗಳನ್ನು ನಡೆಸಿಕೊಡಬೇಕು.

5. ಶರಣ ಮೇಳದಲ್ಲಿ ಭಾಗಿಗಳಾಗುವ ಶರಣ ಬಂಧುಗಳು 40 ದಿವಸ, 30 ದಿವಸ, 15 ದಿವಸಗಳ ವ್ರತವನ್ನು ಸ್ವೀಕಾರ ಮಾಡಬೇಕು. ಈ ವ್ರತದ ಕಾಲದಲ್ಲಿ ಕೆಲವು ನಿಯಮಗಳನ್ನು ಪಾಲಿಸಿ, ಬಸವ ಕ್ರಾಂತಿ ದಿನದ ಸಮುದಾಯ ಪ್ರಾರ್ಥನೆ ಪೂರೈಸಿ, ಬಸವ ಜೋತಿ ದರ್ಶನ ಮಾಡಿ ವ್ರತವನ್ನು ಪೂರ್ಣಗೊಳಿಸಬೇಕು. ಕಾರಣಾಂತರದಿಂದ ಅಂದು ಬರಲು ಆಗದಿದ್ದವರು, ಮಾಘ ಪೌರ್ಣಿಮೆಗೆ ಕೂಡಲ ಸಂಗಮಕ್ಕೆ ಬಂದು 'ಶರಣ ಜ್ಯೋತಿ' ದರ್ಶನವನ್ನು ಮಾಡಿ ವ್ರತವನ್ನು ಪೂರೈಸಬೇಕು. ನಿಯಮಗಳ ವಿವರಗಳಿಗಾಗಿ ಬಸವ ಧರ್ಮ ಪೀಠಕ್ಕೆ ಪತ್ರವನ್ನು ಬರೆಯಬೇಕು.

6. ರಾಷ್ಟ್ರೀಯ ಬಸವ ದಳಗಳವರು ಧರ್ಮ ಪ್ರಚಾರದ ಉತ್ಸಾಹದಿಂದ ಕೆಲವೊಂದು ಪ್ರಕಟಣೆಗಳನ್ನು, ಕರಪತ್ರಗಳನ್ನು ಹೊರಡಿಸುವ ಪರಿಪಾಠ ಹೊಂದಿರುವುದು ಸಹಜ. ಹಾಗೆ ಹೊರಡಿಸುವಾಗ ಕೇಂದ್ರ ಸಂಸ್ಥೆಯಿಂದ ಹೊರಡಿಸಿದ ಪ್ರಕಟಣೆಗಳ ಮರುಮುದ್ರಣ ಮಾಡುವುದಾದರೆ ಯಥಾ ರೀತಿಯಲ್ಲಿ ಮಾಡಬಹುದು. ಏನಾದರೂ ಹೊಸ ಪ್ರಕಟಣೆಗಳನ್ನು ಹೊರಡಿಸುವುದಾದರೆ, ಆಗ ಅವರು ಕೇಂದ್ರ ಸಂಸ್ಥೆಗೆ ಬರೆದು ಸಿದ್ಧಪಡಿಸಿದ ಪ್ರಕಟಣೆಯ ಬಗ್ಗೆ ಅಭಿಪ್ರಾಯ ಮತ್ತು ಪ್ರಕಟಣೆಯನ್ನು ಮಾಡಲು ಅನುಮತಿ ಪಡೆದು, ಅಗತ್ಯವಿದ್ದರೆ ತಿದ್ದುಪಡಿ ಮಾಡಿಸಿಕೊಂಡು ಮುದ್ರಿಸಬೇಕು.

7. **ಎರಡನೆಯ ಬಸವ ಧರ್ಮ ಸಮ್ಮೇಳನ :** ಹೈದರಾಬಾದಿನಲ್ಲಿ ಪ್ರಥಮ ಬಸವ ಧರ್ಮ ಸಮ್ಮೇಳನವು ತಮಿಳುನಾಡಿನ ನೀಲಗಿರಿ ಜಿಲ್ಲೆಯ

ಕಾಟೇರಿಯಲ್ಲಿ ನಡೆಯಿತು. ಅದೇ ರೀತಿ ಎರಡನೆಯ ಸಮ್ಮೇಳನವು ಹೈದರಾಬಾದ್ ರಾಷ್ಟ್ರೀಯ ಬಸವ ದಳದ ವತಿಯಿಂದ ಆಂಧ್ರ ಪ್ರದೇಶದ ಹೈದರಾಬಾದಿನಲ್ಲಿ ಮೇ ತಿಂಗಳಿನ 21 ಮತ್ತು 22 ರಂದು ನಡೆಯಬೇಕೆಂದು ನಿರ್ಧರಿಸಲಾಯಿತು. ಈ ಮಹಾಸಮ್ಮೇಳನದ ಯಶಸ್ಸಿಗೆ ಎಲ್ಲ ರಾಷ್ಟ್ರೀಯ ಬಸವ ದಳಗಳವರೂ ಸಹಕರಿಸಬೇಕೆಂದು ಕರೆ ನೀಡಲಾಯಿತಲ್ಲದೆ, ಹೈದರಾಬಾದ ಸಮ್ಮೇಳನದ ಯಶಸ್ಸಿಗೆ ಹೊಣೆಗಾರಿಕೆಯನ್ನು ಹೈದರಾಬಾದದ ಸುಭಾಷ್ ಪಾಟೀಲರಿಗೆ ವಹಿಸಿ ಕೊಡಲಾಯಿತು. ನಾರಾಯಣ ಖೇಡದ ಶಾಸಕರಾದ ಶರಣ. ಶಿವರಾಜ ಶೆಟಕಾರನ್ನು ಸಮ್ಮೇಳನದ ಗೌರವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

8. **ಶರಣ ಸಂಸ್ಕೃತಿ ರಕ್ಷಣೆ :**
ಬಸವಾದಿ ಪ್ರಮಥರ ಹೆಸರಿನಲ್ಲಿ ಕಲ್ಯಾಣ ಮಂದಿರ, ಪ್ರಾರ್ಥನಾ ಮಂದಿರ ಮುಂತಾದುವನ್ನು ಮಾಡಿದಾಗ ಅವನ್ನು ಶರಣ ಸಂಸ್ಕೃತಿಗೆ, ಅನುಗುಣವಾಗಿ ಮಾಡಬೇಕು. ಶರಣ ಸಂಸ್ಕೃತಿಗೆ ಹೊರತಾದ ಆಚರಣೆಗಳನ್ನು ಪ್ರೋತ್ಸಾಹಿಸಬಾರದು. ಗಣಪತಿ, ನವಗ್ರಹ ಮುಂತಾದ ದೇವತೆಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸಬಾರದು. ಒಂದು ವೇಳೆ ತತ್ತ್ವಹೀನರಾಗಿ ಪ್ರತಿಷ್ಠಾಪಿಸುವುದಾದರೆ, ಆಗ ಬಸವಾದಿ ಪ್ರಮಥರ ಹೆಸರನ್ನು ಸಂಘ-ಸಂಸ್ಥೆ, ಕಟ್ಟಡಗಳಿಗೆ ಇಡಬಾರದು.

9. **ಬಸವಣ್ಣನವರು — ಪಂಚಾಚಾರ್ಯರು :**
ಇತ್ತೀಚಿಗೆ, ಐತಿಹಾಸಿಕ ಪುರುಷರಾದ ಬಸವಣ್ಣನವರ ಮತ್ತು ಪೌರಾಣಿಕ-ಕಾಲ್ಪನಿಕ ಸೃಷ್ಟಿಗಳಾದ ಪಂಚಾಚಾರ್ಯರ ಹೆಸರುಗಳನ್ನು ಸೇರಿಸಿ ಜಯಂತಿಗಳನ್ನು ಆಚರಿಸುವುದು, ಸಂಸ್ಥೆಗಳನ್ನು ಕಟ್ಟುವುದು, ಮೆರವಣಿಗೆ–ಉತ್ಸವಗಳನ್ನು ನಡೆಸುವುದು ಅಭ್ಯಾಸವಾಗುತ್ತಿದೆ. ಇದು ತುಂಬಾ ವಿರುದ್ಧಾಭಾಸವಾದುದು. ಏಕೆಂದರೆ ಐತಿಹಾಸಿಕ ವ್ಯಕ್ತಿಯಾಗಿ ಪ್ರಗತಿಪರ ಧರ್ಮವನ್ನು ಕೊಟ್ಟ ಬಸವಾದಿ ಪ್ರಮಥರ ಜೊತೆಗೆ ಪೌರಾಣಿಕ ವ್ಯಕ್ತಿಗಳು, ಅಸಮಾನತೆಯ ಪ್ರತಿಪಾದಕರಾದ ಪಂಚಾಚಾರ್ಯರ ಹೆಸರು ಸೇರಿಸುವುದು, ಜಯಂತಿ ಆಚರಿಸುವುದು, ಅವರ ಮೂರ್ತಿಗಳನ್ನು ಬಸವೇಶ್ವರ ದೇವಸ್ಥಾನಗಳಲ್ಲಿ ಪ್ರತಿಷ್ಠಾಪಿಸುವುದು ಬಹು ದೊಡ್ಡ ತಪ್ಪು. ಇನ್ನು ಇಂಥ ಕಾರ್ಯಗಳು ನಡೆದಾಗ ರಾಷ್ಟ್ರೀಯ ಬಸವ ದಳಗಳವರು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಬೇಕು.

10. **ಪಾನ ನಿಷೇಧ ಆಂದೋಲನ :**
ರಾಷ್ಟ್ರೀಯ ಬಸವ ದಳಗಳು ಸಾಮೂಹಿಕ ಪ್ರಾರ್ಥನೆ – ಶರಣರ ಜಯಂತಿಗಳನ್ನು ಆಚರಿಸುವುದರ ಜೊತೆಗೆ ಸಾರಾಯಿ, ಸೇಂದಿ ಮುಂತಾದುವನ್ನು ನಿಷೇಧಿಸುವ ಆಂದೋಲನವನ್ನೂ ನಡೆಸಬೇಕು. ಮನೆಯ ಸ್ವಾಸ್ಥ್ಯವನ್ನು ಸಮಾಜದ ನೈತಿಕತೆಯನ್ನು ನಾಶಪಡಿಸುವ ಸಾರಾಯಿ, ಸೇಂದಿ ಮುಂತಾದ ಮಾದಕ ಪಾನೀಯಗಳ ಬಳಕೆಯನ್ನು ಸಮಾಜದಿಂದ ಬಹಿಷ್ಕರಿಸುವ ಚಳುವಳಿಯನ್ನು ಹಮ್ಮಿಕೊಳ್ಳಬೇಕು.

Digitalized by e-Sahithya Documentation Forum
Sponsored by Sarayu Foundation Trust

11. ಶಾಸಕರ ವರ್ತನೆಯ ಖಂಡನೆ :

ಹುನಗುಂದ ಕ್ಷೇತ್ರದ ಶಾಸಕರಾದ ಎಸ್. ಆರ್. ಕಾಶಪ್ಪನವರು ದಿ. 10-1-1994 ರಂದು ಶರಣ ಮೇಳ ಉತ್ಸವ ಸಮಿತಿಯವರು ನಿಲ್ಲಿಸಿದ್ದ ಕಮಾನನ್ನು, ಅದರ ಮೇಲೆ ಕಟ್ಟಲಾಗಿದ್ದ ವಿಶ್ವಗುರು ಬಸವಣ್ಣನವರ ಭಾವ ಚಿತ್ರವನ್ನು, ಷಟಸ್ಥಲ ಧ್ವಜವನ್ನು, ಕಿತ್ತಿಸಿ ನೆಲಕ್ಕೆ ಕೆಡವಿ ವಿಶ್ವಗುರು ಬಸವಣ್ಣನವರಿಗೆ ಅವಮಾನ ಮಾಡಿದ್ದಲ್ಲದೆ ಬಸವ ತತ್ತ್ವಾನುಯಾಯಿಗಳ ಬೃಹತ್ ಸಮುದಾಯಕ್ಕೆ ಅಪಾರ ನೋವನ್ನು ಉಂಟುಮಾಡಿದ್ದಾರೆ. ಇದನ್ನು ತೀವ್ರವಾಗಿ ಖಂಡಿಸಲಾಗುವುದಲ್ಲದೆ ಈ ಹೇಯ ವರ್ತನೆಯನ್ನು ಖಂಡಿಸಿ ಎಲ್ಲ ರಾಷ್ಟ್ರೀಯ ಬಸವ ದಳಗಳ ಸದಸ್ಯರೂ ಎಸ್. ಆರ್. ಕಾಶಪ್ಪನವರಿಗೆ ಪ್ರತಿಭಟನಾತ್ಮಕ ಪತ್ರವನ್ನು ಬರೆಯಬೇಕೆಂದು ನಿರ್ಣಯಿಸಲಾಯಿತು. ಆಡಂಬರ-ಅಸಮಾನತೆಯ ಪೋಷಕರಾದ ಪಂಚಾಚಾರ್ಯ ಸ್ವಾಮಿಗಳ ಅಡ್ಡಪಲ್ಲಕ್ಕಿ ವಿಶ್ವಗುರು ಬಸವಣ್ಣನವರ ಭಾವಚಿತ್ರದ ಕೆಳಗೆ ಹಾಯಬಾರದೆಂಬ ಕುತ್ಸಿತ ಬುದ್ಧಿಯನ್ನು ಬಸವ ತತ್ತ್ವಾನುಯಾಯಿಗಳ ಸಮುದಾಯವು ತೀವ್ರವಾಗಿ ಖಂಡಿಸುತ್ತದೆ.

12. ಬಸವಣ್ಣನವರ ಹೆಸರಿನ ದುರ್ಬಳಕೆ :

ಇತ್ತೀಚಿಗೆ ಪಂಚಾಚಾರ್ಯ ಪರಂಪರೆಯ ಮಠಾಧೀಶರು ತಾವು ಬಸವ ತತ್ತ್ವಾನುಯಾಯಿಗಳು, ವಿರೋಧಕರಲ್ಲ ಎಂದು ಹೇಳಿಕೆ ಕೊಡಲು ಆರಂಭಿಸಿದ್ದಾರೆ. ದಿ. 10 ರಂದು ಅವರು ಬಸವ ಭಾವಚಿತ್ರವನ್ನು ಶಾಸಕರು ಕೆಡವಲು ಪ್ರಚೋದನೆ ನೀಡಿದುದು ಅವರು ಎಷ್ಟರ ಮಟ್ಟಿಗೆ ಬಸವ ವಿರೋಧಿಗಳು ಎಂಬುದನ್ನು ಸ್ಪಷ್ಟೀಕರಿಸುವುದಾದರೂ ಅವರು ಬಸವಣ್ಣನವರ ಹೆಸರನ್ನು ಅವರ ವಚನಗಳನ್ನು ದುರ್ಬಳಕೆ ಮಾಡುವುದನ್ನು ಬಿಡಬೇಕು. ಬಸವ ತತ್ತ್ವದ ಸಾರವಾದ ಏಕದೇವೋಪಾಸನೆ, ಸಮಾನತೆ, ಸರಳತೆ ಇವಾವೂ ಪಂಚಾಚಾರ್ಯ ಪರಂಪರೆಯ ಸ್ವಾಮಿಗಳಲ್ಲಿ ಆಚರಣೆಯಲ್ಲಿ ಇಲ್ಲದಿರುವುದನ್ನು ಕಾಣಬಹುದು. ಆದ್ದರಿಂದ ಅವರು ಬಸವ ತತ್ತ್ವಾಭಿಮಾನಿಗಳು ಎಂಬುದನ್ನು ಯಾವುದೇ ರೀತಿಯಲ್ಲಿ ಹೇಳಬಾರದೆಂದು ನಿರ್ಣಯಿಸಲಾಯಿತು.

13. ಬಸವೇಶ್ವರ ಐಕ್ಯ ಮಂಟಪಕ್ಕೆ ಉಚಿತ ಪ್ರವೇಶ :

ಶ್ರೀ ಬಸವೇಶ್ವರ ಐಕ್ಯ ಮಂಟಪವು ಕೃಷ್ಣಾ-ಮಲಪ್ರಭಾ ನದಿಗಳ ದಿವ್ಯ ಸಂಗಮದಲ್ಲಿದ್ದು ಅಸಂಖ್ಯಾತ ಬಸವ ತತ್ತ್ವಾನುಯಾಯಿಗಳ ಶ್ರದ್ಧಾ ಕೇಂದ್ರವಾಗಿದೆ. ಇಲ್ಲಿಗೆ ಬಂದು ಪೂಜೆ-ಧ್ಯಾನಗಳನ್ನು ಮಾಡಬೇಕು ಎಂಬ ಶ್ರದ್ಧಾಳುಗಳಿಗೆ ಪ್ರವೇಶ ಶುಲ್ಕ ಇಟ್ಟಿರುವುದರಿಂದ ಬಹಳ ಅನಾನುಕೂಲವಾಗುತ್ತಿದೆ. ಉಚಿತ ಪ್ರವೇಶವು ಲಭ್ಯವಾಗಬೇಕು ಎಂಬ ಬಸವ ಭಕ್ತರ ಅಪೇಕ್ಷೆಯು ಸರ್ಕಾರದ ಉದಾಸೀನತೆಯಿಂದ ಈಡೇರುತ್ತಲಿಲ್ಲ. ಆದ್ದರಿಂದ ಬಸವ ಭಕ್ತರು ಒಂದು ಸತ್ ಸಂಕಲ್ಪವನ್ನು ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು. ಎಲ್ಲಿಯವರೆಗೂ ಶ್ರೀ ಬಸವೇಶ್ವರರ ದಿವ್ಯ ಸಮಾಧಿಯ ದರ್ಶನವು ಉಚಿತವಾಗಿ ಪ್ರಾಪ್ತಿಯಾಗುವುದಿಲ್ಲವೋ ಅಲ್ಲಿಯವರೆಗೂ ಶುಲ್ಕ ಕೊಟ್ಟು ದರ್ಶನಕ್ಕೆ ಹೋಗದೆ, ತಮ್ಮ ಹೃದಯ ಮನ ಮತಿಗಳಲ್ಲಿಯೇ ಬಸವಣ್ಣನವರನ್ನು ದರ್ಶಿಸುವ ದೃಢ ಸಂಕಲ್ಪ ಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

★

ಬಸವ ಧರ್ಮ ಪೀಠದಿಂದ ಗಣಮೇಳ ನಡೆಸಲು ಆದೇಶ ಪತ್ರ

ಶರಣ ಬಂಧುಗಳಿಗೆ ಬಸವ ಸ್ಮರಣ ಪೂರ್ವಕ ಶುಭಹಾರೈಕೆಗಳು,

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ 1994 ರ ಜನವರಿ 12 ರಿಂದ 15 ರ ವರೆಗೆ ನಡೆದ ಏಳನೆಯ ಶರಣ ಮೇಳವು ಅತ್ಯಂತ ಯಶಸ್ವಿಯಾಯಿತು. ಹಿಂದಿನ ಎಲ್ಲ ಶರಣ ಮೇಳಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳನ್ನು ಆಕರ್ಷಿಸಿತು. ಜನಸಂದಣಿಯು ಬಹಳ ಹೆಚ್ಚಾದರೂ ಯಾರಿಗೂ ಯಾವುದಕ್ಕೂ ಕೊರತೆಯಾಗದಂತೆ ಶರಣ ಕಾರ್ಯಕರ್ತರು ದುಡಿದುದು ಇಡೀ ಕಾರ್ಯಕ್ರಮಕ್ಕೆ ಶೋಭೆ ತಂದಿತು. ಮತ್ತು ಅಪ್ಪ ಬಸವಣ್ಣನವರ ಕೀರ್ತಿಯನ್ನು ಮೊಳಗಿಸಿತು. ಹೀಗಾಗಿ ನಿಮಗೆಲ್ಲ ಯಾವ ರೀತಿ ಧನ್ಯವಾದಗಳನ್ನು ಹೇಳಬೇಕೋ ತಿಳಿಯದಷ್ಟು ಮಾತು ಮೂಕವಾಗಿದೆ. ನೀವುಗಳು ತನುವಿನಿಂದ ದುಡಿದಿದ್ದೀರಿ ; ಮನಃಪೂರ್ವಕವಾಗಿ ಪ್ರಚಾರ ಮಾಡಿದ್ದೀರಿ. ಧನ ಸಂಗ್ರಹ ಮಾಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದೀರಿ. ಸೃಷ್ಟಿಕರ್ತನ ಕರುಣೆ, ಧರ್ಮಪಿತ ಬಸವಣ್ಣನವರ ದಿವ್ಯಾನುಗ್ರಹ ನಿಮಗೆ ದೊರೆಯಲೆಂದು ಹಾರೈಸುವೆವು. ದೇಣಿಗೆ ಸಂಗ್ರಹ ಮಾಡಿದ್ದನ್ನು ಈಗಾಗಲೇ ಸಂಸ್ಥೆಗೆ ಒಪ್ಪಿಸಿರಬಹುದೆಂದು ನಂಬುತ್ತೇವೆ. ನಿಮ್ಮ ಬಳಿ ಹಣವಾಗಲೀ, ರಸೀತಿ ಪುಸ್ತಕವಾಗಲೀ ಉಳಿದಿದ್ದರೆ ಆದಷ್ಟು ಬೇಗನೆ ಕಳಿಸಿಕೊಡಿರಿ.

ನಿಮಗೀಗ ಮನವರಿಕೆಯಾಗಿದೆ, ವರ್ಷದಿಂದ ವರ್ಷಕ್ಕೆ ಜನರು ಜಾಸ್ತಿ ಸೇರುತ್ತಿದ್ದಾರೆ, ಖರ್ಚು ವೃದ್ಧಿಯಾಗುತ್ತಿದೆ. ಬಸವ ಮಹಾಮನೆಯ ಮಕ್ಕಳಾದ ತಾವು ತನು-ಮನ-ಧನಗಳಿಂದ ಈ ಹೊಣೆಯನ್ನು ಹೊರುತ್ತಿದ್ದೀರಿ. ಮುಂದಿನ ಶರಣ ಮೇಳಕ್ಕೆ ಅಂದರೆ 8 ನೆಯ ಶರಣ ಮೇಳಕ್ಕೆ ಆದಷ್ಟು ಬೇಗನೆ ದೇಣಿಗೆ ಸಂಗ್ರಹ ಪ್ರಾರಂಭ ಮಾಡಬೇಕು. ಹೊಸ ಹೊಸ ಕ್ಷೇತ್ರಗಳ ಜನರನ್ನು ಸಂಪರ್ಕಿಸಬೇಕು. ರಸೀತಿ ಪುಸ್ತಕ-ಪ್ರಚಾರ ಸಾಮಗ್ರಿಗಳನ್ನು ನೀವಾಗಿ ಪತ್ರ ಬರೆದು ತರಿಸಿಕೊಂಡು 1994 ರ ಅಕ್ಟೋಬರ್ ಆರಂಭದಿಂದಲೇ ಪ್ರಚಾರ ಕಾರ್ಯ ಆರಂಭಿಸಬೇಕು.

ಗಣ ಮೇಳ - ಮಹಾಶಿವರಾತ್ರಿಯಂದು

ಶರಣ ಬಂಧುಗಳೇ,

ಈಗ ನೀವು ವರ್ಷಕ್ಕೊಮ್ಮೆ ಧರ್ಮಕ್ಷೇತ್ರ ಕೂಡಲ ಸಂಗಮಕ್ಕೆ ಶರಣ ಮೇಳಕ್ಕೆ ಬರುತ್ತಿದ್ದೀರಿ, ವಾರಕ್ಕೊಮ್ಮೆ ಶರಣರೊಡನೆ ಸೇರಿ ನಿಮ್ಮೂರಲ್ಲಿ ಸಾಮೂಹಿಕ-ಪ್ರಾರ್ಥನೆ ಮಾಡುತ್ತಿದ್ದೀರಿ. ಅಷ್ಟೇ ಅಗತ್ಯವಿದೆ ಇನ್ನೊಂದು ಕಾರ್ಯಕ್ರಮ.

Digitalized by e-Sahithya Documentation Forum
Sponsored by Sarayu Foundation Trust

ಆದೆಂದರೆ ಆಯಾ ಊರುಗಳಲ್ಲೇ ವರ್ಷಕ್ಕೊಮ್ಮೆ ಎಲ್ಲ ಶರಣ ಬಂಧುಗಳೂ ಸೇರಿ ಮಾಡುವ ಸಮುದಾಯ ಪ್ರಾರ್ಥನೆ **'ಗಣ ಮೇಳ'**. ಇಂಥ ಗಣ ಮೇಳಗಳನ್ನು ಎಲ್ಲ ಗ್ರಾಮ, ಊರು, ತಾಲ್ಲೋಕು ಜಿಲ್ಲಾ ಕೇಂದ್ರಗಳಲ್ಲೂ ಮಹಾಶಿವರಾತ್ರಿಯಂದು ಬೆಳಿಗ್ಗೆ 10 ರಿಂದ 11-30 ರ ವರೆಗೆ ನಡೆಸಬೇಕು ಎಂದು ಶರಣರ ಮಹಾಸಭೆಯಲ್ಲಿ ದಿ. 15-1-94 ರಂದು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಆ ನಿರ್ಣಯ ವನ್ನು ಇದೇ ಶಿವರಾತ್ರಿಯಂದು ಆಚರಣೆಗೆ ತರಬೇಕಾಗಿದೆ. ಮಹಾಶಿವರಾತ್ರಿಯು 10-3-1994 ರಂದು ಒದಗಿ ಬಂದಿದೆ. ಅಂದು ಸಾರ್ವತ್ರಿಕ ರಜಾ ದಿನವೂ ಇದೆಯಷ್ಟೆ.

ನೀವು ರಾಷ್ಟ್ರೀಯ ಬಸವ ದಳದ ಸದಸ್ಯರು ಅಥವಾ ಬಸವ ಧರ್ಮ ಸಂಸತ್ ಸದಸ್ಯರು ಇರಬಹುದು. ಅಥವಾ ಬಸವ ಪಥದಲ್ಲಿ ನಡೆಯುವವರಾಗಿರಬಹುದು. ನಿಮ್ಮ ಮೇಲೆ ಇಂಥ 'ಗಣ ಮೇಳ' ನಡೆಸುವ ಹೊಣೆಗಾರಿಕೆ ಇದೆ. ಅದು ನಿಮ್ಮ ಪವಿತ್ರ ಕರ್ತವ್ಯ ಎಂದು ಸಂಘಟಿಸಿರಿ. ಈ ಆದೇಶ ಪತ್ರವನ್ನು ನಿಮ್ಮ ಮೇಲೆ ವಿಶ್ವಾಸವಿಟ್ಟು ಕಳಿಸಿದ್ದೇವೆ. ಇದರೊಡನೆ ಸೂಚನಾ ಪತ್ರವನ್ನು ಇಡಲಾಗಿದೆ. 'ಗಣಮೇಳ'ದ ಅಗತ್ಯ ಕುರಿತು ನಿಮ್ಮ ಊರಿನ ಜನರಿಗೆ ಮನವರಿಕೆ ಮಾಡಿಕೊಡಿರಿ. ಬಸವ ಗುರುವಿನ ಸಂದೇಶ ವಾಹಕರನ್ನಾಗಿ ಆ ಧರ್ಮಪಿತರು ನಿಮ್ಮನ್ನು ಆರಿಸಿಕೊಂಡಿದ್ದಾರೆ ಎಂದು ನಂಬಿ. ಮನೆಮನೆಯನ್ನು ಸಂದರ್ಶಿಸಿ, ಶರಣ ಬಂಧುಗಳನ್ನು ಗಣ ಮೇಳಕ್ಕೆ ಆಹ್ವಾನಿಸಿರಿ, ನಿಮ್ಮ ಕಳಕಳಿ, ವಿಶ್ವಾಸ ಅವರನ್ನು ಆಕರ್ಷಿಸುವುದು. ನಿಧಾನವಾಗಿ ಫಲ ಕೊಟ್ಟರೂ ಚಿಂತೆಯಿಲ್ಲ ನಿಮ್ಮ ಪ್ರಯತ್ನ ಯಶಸ್ವಿಯಾಗುವುದು.

ಕರಪತ್ರಗಳನ್ನು ಮುದ್ರಿಸಿರಿ. ಕರಪತ್ರದ ಒಂದು ಮಾದರಿ ಕಳಿಸಲಾಗಿದೆ. ಅನುಕೂಲವಿದ್ದರೆ ಭಿತ್ತಿಪತ್ರ ಮುದ್ರಿಸಬಹುದು. ಸಿನಿಮಾ ಸ್ಲೈಡುಗಳನ್ನು ಮಾಡಿಸಿ, ನಿಮ್ಮ ಊರುಗಳ ಚಲನಚಿತ್ರ ಮಂದಿರದಲ್ಲಿ ಪ್ರದರ್ಶಿಸಿರಿ.

'ಗಣ ಮೇಳವನ್ನು ಹೇಗೆ ನಡೆಸಬೇಕು ; ನಿರ್ವಹಿಸಬೇಕು ಎಂಬ ಬಗ್ಗೆ ನಿಮಗೆ ಸೂಚನೆಯನ್ನು ಪ್ರತ್ಯಕ್ಷವಾಗಿ ನೀಡಲು, ಕೂಡಲ ಸಂಗಮದಲ್ಲಿ ದಿ. 26-2-94 ಚನ್ನಹುಣ್ಣಿಮೆಯಂದು ಒಂದು ಸಭೆಯನ್ನು ಕರೆದಿದ್ದೇವೆ. ನೀವು ತಪ್ಪದೆ ಬಂದು ಅಥವಾ ನಿಮ್ಮ ಪ್ರತಿನಿಧಿಯೊಬ್ಬರನ್ನು ಕಳಿಸಿ ವಿವರಗಳನ್ನು ಪಡೆಯಬೇಕು. 800 ವರ್ಷಗಳ ಗಾಢಾಂಧಕಾರದ ಬಳಿಕ ಅಪೂರ್ವ ಜಾಗೃತಿಯನ್ನು ಉಂಟು ಮಾಡುವಂತೆ ಈ ಶರಣ ಸಮಾವೇಶವು ಅತ್ಯಂತ ಹೆಚ್ಚಿನ ಊರುಗಳಲ್ಲಿ ನಡೆಯುವಂತಾಗಬೇಕೆಂಬ ಸದಿಚ್ಛೆ ನಮ್ಮದಾಗಿದೆ.

ಈ ಐತಿಹಾಸಿಕ ಪ್ರಥಮ ಗಣಮೇಳವು ಬಸವ ಧರ್ಮ ಪೀಠದ ವತಿಯಿಂದ ದಿ. 10-3-1994 ರಂದು ಧಾರವಾಡ ನಗರದ ಆರ್. ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ ಬೆಳಿಗ್ಗೆ 10 ರಿಂದ 11-30 ರ ವರೆಗೆ ಬಸವ ಧರ್ಮದ ಮಹಾಜಗದ್ಗುರು ಪೀಠದ **ಪೂಜ್ಯ ಶ್ರೀಮನ್ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ** ದಿವ್ಯ ಸನ್ನಿಧಿಯಲ್ಲಿ ನೆರವೇರಲಿದೆ.

ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರೂ ಭಾಗವಹಿಸಲಿದ್ದಾರೆ. ವಿವಿಧ ರಾಷ್ಟ್ರೀಯ ಬಸವ ದಳಗಳವರು ತಮ್ಮ ತಮ್ಮಲ್ಲಿ 'ಗಣಮೇಳ' ಮಾಡಬೇಕಾಗುವುದರಿಂದ ಕೇವಲ ಯಾರಾದರೊಬ್ಬರನ್ನು ಪ್ರತಿನಿಧಿಯನ್ನಾಗಿ ಧಾರವಾಡಕ್ಕೆ ಕಳಿಸಿಕೊಟ್ಟರೆ, ಅವರಿಗೆ ಮುಂದೆ ಹೇಗೆ ಮಾಡಬೇಕು ಎಂಬ ಬಗ್ಗೆ ಪ್ರಾಯೋಗಿಕ ತರಬೇತಿ ಸಿಕ್ಕುವುದು.

ಶುಭಹಾರೈಕೆಗಳೊಡನೆ

ಸಿದ್ಧತಾ ಸಭೆ :
ದಿ. 26-2-1994
ಸಮಯ : ಬೆಳಿಗ್ಗೆ 10 ಗಂಟೆ
ಸ್ಥಳ : **ಕೂಡಲ ಸಂಗಮದ ಮಹಾಮನೆ.**

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ.

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಮಹಾ ಶಿವರಾತ್ರಿಯಂದು
ಗಣ ಮೇಳ
(ಬಸವ ಧರ್ಮೀಯರ ಗಣ ಸಮಾವೇಶ)

ಶರಣ ಬಂಧುಗಳಲ್ಲಿ,
ಬಸವ ಸ್ಮರಣಪೂರ್ವಕ ಶುಭಹಾರೈಕೆಗಳು.

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ, ಧರ್ಮಗುರು ಬಸವಣ್ಣನವರ ತತ್ತ್ವಗಳಲ್ಲಿ ಶ್ರದ್ಧೆ-ವಿಶ್ವಾಸವಿರುವ ಬಸವ ಧರ್ಮೀಯರು, ಬಸವ ತತ್ತ್ವಾಭಿಮಾನಿಗಳು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗಬೇಕೆಂದು ನಿರ್ಧರಿಸಿ ಬಸವ ಕ್ರಾಂತಿ ದಿನ (ಮಕರ ಸಂಕ್ರಾಂತಿ) ದಂದು ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ಶರಣ ಮೇಳದ ಮೂಲಕ ಸಮಾಗಮವಾಗುತ್ತಿರುವರಷ್ಟೆ. ಕರ್ನಾಟಕ ರಾಜ್ಯದಾದ್ಯಂತದಿಂದ ಮಾತ್ರವಲ್ಲದೆ, ಹೊರಗಿನ ರಾಜ್ಯಗಳಿಂದೆಲ್ಲ ಜನರು ಸಮಾವೇಶವಾಗುತ್ತ, ಶರಣ ಮೇಳವು ಬಸವ ಧರ್ಮೀಯರ ಜಾಗತಿಕ ಉತ್ಸವವಾಗುವತ್ತ ನಡೆದಿದೆ.

ವಾರಕ್ಕೊಮ್ಮೆ, ಆಯಾ ಊರುಗಳಲ್ಲಿ ಅನುಕೂಲವಾಗುವಂತೆ ಒಂದು ದಿನ ವನ್ನು ಗೊತ್ತುಪಡಿಸಿಕೊಂಡು ಶರಣ ಬಂಧುಗಳು 'ಬಸವ ಮಂಟಪ', ಬಸವಣ್ಣನ ಗುಡಿ-ಇನ್ನಿತರ ಸಮುದಾಯ ಭವನಗಳಲ್ಲಿ ಸೇರಿ ಸಾಮೂಹಿಕ ಪ್ರಾರ್ಥನೆ ಮಾಡುತ್ತ-

Digitalized by e-Sahithya Documentation Forum
Sponsored by Sarayu Foundation Trust

ತಿರುವುದು ತುಂಬಾ ಸಂತೋಷದ ಸಂಗತಿ. ಈ ಪ್ರಾರ್ಥನಾ ಸಭೆಗಳ ಸಂಖ್ಯೆ ಸಹ ಬೆಳೆಯುತ್ತಿರುವುದು ಶುಭ ಸೂಚಕವಾಗಿದೆ. ವಾರ್ಷಿಕ ಜಾಗತಿಕ ಸಮಾವೇಶ 'ಶರಣ ಮೇಳ' ಮತ್ತು ವಾರದ ಸಾಮೂಹಿಕ ಪ್ರಾರ್ಥನಾ ಸಮಾವೇಶಗಳ ಜೊತೆಗೆ ಆಗ-ಬೇಕಾದ ಮತ್ತೊಂದು ಕಾರ್ಯ 'ಗಣ ಮೇಳ', ಸ್ಥಳೀಯ ಧಾರ್ಮಿಕ ಸಮಾವೇಶ. 'ಊರಿನಲ್ಲಿರುವ ಶರಣ ಬಂಧುಗಳೆಲ್ಲರೂ ಒಂದು ವಿಶಾಲವಾದ ಮೈದಾನ, ಉದ್ಯಾನದಲ್ಲಿ ಸೇರಿ ಸಮುದಾಯ ಪ್ರಾರ್ಥನೆ ಮಾಡುವ ಸತ್‌ಪರಂಪರೆಯನ್ನು ಆರಂಭಿಸಬೇಕು.' ಎಂದು ಶರಣ ಮೇಳದ ಸಮಾರೋಪ ಸಮಾರಂಭದಲ್ಲಿ ದಿ. 15-1-1994 ರಂದು ನಿರ್ಣಯ ತೆಗೆದುಕೊಳ್ಳಲಾಗಿದೆ. ಸಮಾನತೆ-ಸಹೋದರತ್ವ-ಸಾಮರಸ್ಯ ಎಂಬ ತ್ರಿತತ್ವಗಳ ತಳಹದಿಯ ಮೇಲೆ ನಿಂತ ಬಸವ ಪ್ರಣೀತ ಲಿಂಗವಂತ ಧರ್ಮದ ಅನುಯಾಯಿಗಳಲ್ಲಿ ಪರಸ್ಪರ ಮಧುರ ಬಾಂಧವ್ಯ ಬರಬೇಕಾದರೆ ಇದು ಅತ್ಯಗತ್ಯ.

ಮಹಾಶಿವರಾತ್ರಿಯಂದು.

ಸ್ಥಳೀಯ ವಾರ್ಷಿಕ **'ಗಣ ಮೇಳ'** ಕ್ಕೆ ಅತ್ಯಂತ ಸೂಕ್ತವಾದ ದಿನವೆಂದರೆ ಮಹಾಶಿವರಾತ್ರಿ. ಅದನ್ನು ಸರ್ವ ಶರಣರ ಸಂಸ್ಮರಣಾ ದಿನವೆಂದು ಬಸವಾದಿ ಪ್ರಮಥರ ಪರಂಪರೆಯ ಶರಣರನ್ನು ಸ್ಮರಿಸಲಾಗುತ್ತಿದೆ. ಇಂಥ ಮಹಾಶಿವರಾತ್ರಿಯಂದು ಬೆಳಿಗ್ಗೆ 10 ರಿಂದ 11-30 ರ ವರೆಗೆ ಪ್ರತಿ ಊರಿನಲ್ಲಿಯೂ 'ಗಣ ಮೇಳ' ವನ್ನು ನಡೆಸುವ ಪರಿಪಾಠವನ್ನು ಆರಂಭಿಸಬೇಕಾಗಿದೆ. ಸುಪ್ರಭಾತದಲ್ಲಿ ಸ್ನಾನವನ್ನು, ಇಷ್ಟಲಿಂಗಾರ್ಚನೆಯನ್ನು ಪೂರೈಸಿಕೊಂಡು ಹೆಣ್ಣು ಮಕ್ಕಳು-ಸಣ್ಣ ಮಕ್ಕಳು ಸಹಿತರಾಗಿ ಶರಣ ಬಂಧುಗಳು ತಮ್ಮ ಕುಟುಂಬ ಪರಿವಾರದೊಡನೆ ಗಣ ಮೇಳದ ಮೈದಾನಕ್ಕೆ ಆಗಮಿಸಬೇಕು.

1. 'ಗಣ ಮೇಳ' ಎಂಬ ಶರಣ ಗಣ ಸಮಾವೇಶ ಮಾಡುವ ಬಯಲನ್ನು ಮೊದಲೇ ಕಾಯ್ದಿರಿಸಿಕೊಳ್ಳಬೇಕು ; ಸ್ವಚ್ಛ ಮಾಡಿರಿಸಿಕೊಳ್ಳಬೇಕು.

2. ಕಾರ್ಯಕ್ರಮ ನಿರ್ವಹಣೆಯನ್ನು ಮಾಡುವ ಪವಿತ್ರ ಕರ್ತವ್ಯವನ್ನು ರಾಷ್ಟ್ರೀಯ ಬಸವ ದಳಗಳು ವಹಿಸಿಕೊಳ್ಳಬೇಕು. ಯಾವ ಊರಿನಲ್ಲಿ ರಾಷ್ಟ್ರೀಯ ಬಸವ ದಳ ಇಲ್ಲವೋ ಅವರು ರಾಷ್ಟ್ರೀಯ ಬಸವ ದಳವನ್ನು ಪ್ರಾರಂಭಿಸಬೇಕು.

3. ಬೆಳಗಿನ 10 ರಿಂದ 11-30 ಎಂಬ ಸಮಯಪಾಲನೆ ಮಾಡಬೇಕು. ಪೆಂಡಾಲ್, ಶಾಮಿಯಾನಾ ಮುಂತಾದ ವ್ಯವಸ್ಥೆ ಮಾಡಹೋದರೆ ಖರ್ಚಿನ ಬಾಬತ್ತು ಜಾಸ್ತಿಯಾಗುವ ಕಾರಣ, ಜನರು ಕಾಲಾನಂತರದಲ್ಲಿ ಕಾರ್ಯಕ್ರಮವನ್ನೇ ಕೈಬಿಡುವ ಸಾಧ್ಯತೆ ಇರುತ್ತದೆ. ಬಹಳವೆಂದರೆ ವೇದಿಕೆಗೆ ಮಾತ್ರ ಏನಾದರೂ ಚಾಟು (ಆಶ್ರಯ) ಮಾಡಬಹುದು. ನೆಲಕ್ಕೆ ಹಾಸು ಹಾಸಬಹುದು ; ಇಲ್ಲವೇ ಜನರೇ ತಮ್ಮ ಜೊತೆಗೆ ಚಿಕ್ಕ ವಸ್ತ್ರ ತಂದು ಹಾಸಿಕೊಂಡು ಕುಳಿತುಕೊಳ್ಳಬೇಕು.

   ಶಿವರಾತ್ರಿ ಸಮಯದಲ್ಲಿ ಬಿಸಿಲು ತೀಕ್ಷ್ಣವಾಗಿರುವುದಿಲ್ಲವಾದ್ದರಿಂದ ಶರಣರು ತಲೆಯ ಮೇಲೆ ಷಟ್ಕೋನ ಮುದ್ರೆಯ ಟೋಪಿ ಹಾಕಿಕೊಂಡು,

ಶರಣೆಯರು ಕರವಸ್ತ್ರ ಅಥವಾ ಸೆರಗು ಹೊದ್ದು ಕುಳಿತುಕೊಳ್ಳಬಹುದು.

4. ಆರಂಭದಲ್ಲಿ ಷಟ್ಕೋನ ಬಸವ ಧ್ವಜ ಆರೋಹಣವನ್ನು ವಿಧಿವತ್ತಾಗಿ ಮಾಡಬೇಕು. ಧ್ವಜಾರೋಹಣದ ನಂತರ ಶಿಸ್ತಾಗಿ ಸಾಲಿನಲ್ಲಿ ಕುಳಿತುಕೊಳ್ಳಬೇಕು. ಸಭೆಯ ಆರಂಭದಲ್ಲಿ 'ಮುಕ್ತಿದಾಯಕ' ಹಾಡಿ, ಆದಿ ಪ್ರಮಥ ಬಸವ ಗುರುವಿನ ಭಾವಚಿತ್ರ ಪೂಜಿಸಬೇಕು. ಪೂಜಾ ನಂತರ ಪ್ರಾರ್ಥನೆ ಆರಂಭಿಸಬೇಕು. ಪ್ರಾರ್ಥನೆ-ಮೌನಧ್ಯಾನ-ವಚನ ಗೀತಾ ಗಾಯನದ ನಂತರ 108 ಬಸವ ಗುರುಸ್ತುತಿ ಹಾಡಬೇಕು. ವಚನ ವಾಙ್ಮಯ ಪಠಣವನ್ನು ಮಾಡಬೇಕು. ಷಟ್‌ಸೂತ್ರ ಘೋಷಣೆ ಮಾಡಬೇಕು. 12 ಪ್ರತಿಜ್ಞೆಗಳ ವಿಧಿಯನ್ನು ಪೂರೈಸಬೇಕು. ಮಂಗಲಗೀತೆಯನ್ನು ಹಾಡಬೇಕು.

5. ಮಂಗಲ ಗೀತೆ, ಜಯಕಾರದ ನಂತರ ಎಲ್ಲ ಶರಣ ಬಂಧುಗಳು ಶರಣು-ಶರಣಾರ್ಥಿ ಹೇಳಿ ಪರಸ್ಪರ ಶುಭಾಶಯ ಕೋರಬೇಕು.

6. ಶ್ರೀ ಗುರು ಬಸವಣ್ಣನವರಿಗೆ ನೈವೇದ್ಯ ಮಾಡಿರುವ ಕಲ್ಲುಸಕ್ಕರೆಯನ್ನು ಜನರು ತಂದಿರುವ ಕಲ್ಲುಸಕ್ಕರೆಯ ಜೊತೆಗೆ ಬೆರೆಸಿ ಎಲ್ಲರಿಗೂ ತಪ್ಪದೆ ಪ್ರಸಾದವನ್ನು ವಿತರಿಸಬೇಕು.

ವಿ. ಸೂ : ಈ ಗಣಮೇಳವು ನಿರಂತರವಾಗಿ ಸಾಗಬೇಕಾಗಿರುವ ಕಾರ್ಯ-ಕ್ರಮವಾದ್ದರಿಂದ ಸರಳವಾಗಿ, ಸುಲಭ ಖರ್ಚಿನಲ್ಲಿ ಆಗುವಂಥದ್ದಾಗಿರಬೇಕು : ಆದ್ದರಿಂದ ಕಲ್ಲುಸಕ್ಕರೆ ಪ್ರಸಾದವೇ ಸುಲಭ ಸಾಧ್ಯವಾದುದು ಮತ್ತು ಜನರಿಗೆ ಕಲ್ಲುಸಕ್ಕರೆ ತರಲು ಹೇಳಿ ದ್ವಾರದ ಬಳಿಯಲ್ಲಿ ದೊಡ್ಡ ಕೊಳಗ, ಬುಟ್ಟಿ-ಗಳನ್ನಿಟ್ಟು ಕಲ್ಲುಸಕ್ಕರೆ ಹಾಕಿಸಿಕೊಂಡು, ಅವನ್ನು ಚಿಕ್ಕ ಚಿಕ್ಕ ತುಂಡು-ಗಳನ್ನಾಗಿ ಮಾಡಿ ಹಂಚಲು ಬಕೆಟ್ಟಿಗೆ ಹಾಕಿ ಇಟ್ಟುಕೊಳ್ಳಬೇಕು.

ಪರವೂರಿನ ಗಣಮೇಳಕ್ಕೆ ಹೋಗುವ ಶರಣರು ತಮ್ಮ ಬುತ್ತಿಯನ್ನು ತಾವೇ ಕಟ್ಟಿಕೊಂಡು ಹೋಗಬೇಕು. ಗಣಮೇಳದ ಸ್ಥಳದಲ್ಲಿ ಶುದ್ಧವಾದ ಕುಡಿಯುವ ನೀರು ಲಭ್ಯವಾಗುವಂತೆ ಮಾಡಬೇಕು.

★ ಶರಣರ ಬರವೆಮಗೆ ಪ್ರಾಣಜೀವಾಳ ★

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸುವ ವಿಳಾಸಗಳು :

ಬೆಂಗಳೂರು ವಿಳಾಸ :
ಬಸವ ಮಂಟಪ, 2035,
2 ನೇ ಬ್ಲಾಕ್, ಕಾರ್ಡ್‌ರಸ್ತೆ,
ರಾಜಾಜಿನಗರ, ಬೆಂಗಳೂರು-560010
ದೂರವಾಣಿ : 3325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ,
ಕೂಡಲ ಸಂಗಮ-587115
ತಾ॥ ಹುನಗುಂದ, ಜಿಲ್ಲೆ॥ ಬಿಜಾಪುರ.
ದೂರವಾಣಿ :838

Digitalized by e-Sanithya Documentation Forum
Sponsored by Sarayu Foundation Trust

ಬೆಳಗಾಂ ನಗರದಲ್ಲಿ
ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ಕರ್ನಾಟಕದ ಗಂಡುಮೆಟ್ಟಿನ ನಾಡು, ವೀರರಾಣಿ ಚೆನ್ನಮ್ಮಾಜಿಯ ಕ್ರಾಂತಿಭೂಮಿ ಬೆಳಗಾಂವ ನಗರದಲ್ಲಿ ಗುರುವಾರ ದಿ. 27-1-1994 ರಂದು ಪೂಜ್ಯ ಸ್ವಾಮೀಜಿಯವರ ವಿಶ್ವಧರ್ಮ ಪ್ರವಚನವು ಪ್ರಾರಂಭವಾಯಿತು. ಅಪೂರ್ವ ವಾಗ್ಮಿಗಳೂ, ಕ್ರಾಂತಿಕಾರಿ ಧರ್ಮ ಪ್ರಚಾರಕರು, ಧರ್ಮಕ್ರಾಂತಿಯ ಧೀರ ಯೋಗಿಗಳೂ ಆದ **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು** ಸರ್ದಾರ್ ಹೈಸ್ಕೂಲ್ ಆವರಣದಲ್ಲಿ ಪ್ರತಿನಿತ್ಯ ಸಂಜೆ 6-30 ರಿಂದ 8-30 ರ ವರೆಗೆ ವಿಶ್ವಧರ್ಮ ಪ್ರವಚನವನ್ನು ಮಾಡುತ್ತಲಿದ್ದಾರೆ. ಆರಂಭದ ದಿನದಂದೇ ಸಹಸ್ರಾರು ಜನರು ನೆರೆದು ಪ್ರವಚನದಿಂದ ಪ್ರಭಾವಿತರಾದರು. ಲೋಕಸಭಾ ಸದಸ್ಯರಾದ ಎಸ್. ಬಿ. ಸಿದ್ನಾಳ್ ಅವರು ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕನ್ನಡಮ್ಮ ದಿನಪತ್ರಿಕೆಯ ಸಂಪಾದಕಿ ಶ್ರೀಮಂತಿ ಉಮಾದೇವಿ ಟೋಪಣ್ಣನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಸರ್ದಾರ್ ಹೈಸ್ಕೂಲ್ ಪ್ರಾಂಶುಪಾಲರಾದ ಶ್ರೀ ಕದಮ್ ಅವರು ಅಧ್ಯಕ್ಷತೆ ವಹಿಸಿದ್ದರು.

ಪ್ರವಚನವು ದಿನದಿನಕ್ಕೂ ಅಧಿಕಧಿಕ ಸಂಖ್ಯೆಯಲ್ಲಿ ಶ್ರೋತೃಗಳನ್ನು ಆಕರ್ಷಿಸುತ್ತ ಮುನ್ನಡೆದಿದೆ,

ಬೆಂಗಳೂರಿನಲ್ಲಿ ಗಣಮೇಳ

ಮಹಾಶಿವರಾತ್ರಿ, ಗುರುವಾರ ದಿ. 10-3-1994 ರಂದು ಬೆಳಿಗ್ಗೆ 10 ರಿಂದ 11-30 ರ ವರೆಗೆ ಬೆಂಗಳೂರು ನಗರದ ಕಾರ್ಡ್‌ರೋಡ್ ಪಶ್ಚಿಮದಲ್ಲಿರುವ **ಬಸವೇಶ್ವರ ನಗರದ** ಎರಡನೆಯ ಹಂತದ **ಶ್ರೀ ವಿವೇಕಾನಂದ ಉದ್ಯಾನವನದಲ್ಲಿ** (ಡಾ|| ಎಂ. ಸಿ. ಮೋದಿ ಆಸ್ಪತ್ರೆ ರಸ್ತೆ) **ಗಣಮೇಳವು** ನಡೆಯಲಿದೆ. ಬೆಂಗಳೂರಿನ ಮೆಜೆಸ್ಟಿಕ್‌ದಿಂದ ಪ್ರಾರ್ಥನಾ ಸ್ಥಳಕ್ಕೆ 96 ಮತ್ತು 96 ಡಿ ಸಿಟಿ ಬಸ್‌ಗಳು ಬರುತ್ತವೆ. ಎಲ್ಲರಿಗೂ ಆದರದ ಸ್ವಾಗತ.

ರಾಷ್ಟ್ರೀಯ ಬಸವ ದಳ (ಬೆಂಗಳೂರು ಶಾಖೆ)

ಬಸವ ಮಂಟಪ, 2035, 2 ನೇ ಬ್ಲಾಕು, 20 ನೇ ಮೆಯಿನ್, ರಾಜಾಜಿನಗರ, ಬೆಂಗಳೂರು-560010, **ದೂರವಾಣಿಗಳು :** 3325335, 6633615, 3356086, 3355623, 3355285.

ಪ್ರತಿ ರವಿವಾರ "**ಬಸವ ಮಂಟಪದಲ್ಲಿ**" ಬೆಳಿಗ್ಗೆ 11 ರಿಂದ 1 ರವರೆಗೆ ಸಾಮೂಹಿಕ ಪ್ರಾರ್ಥನೆ ಇರುತ್ತದೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ
೪೯ ನೆಯ ವರ್ಧಂತಿ

ಅಪೂರ್ವ ವಾಗ್ಮಿಗಳು, ಪ್ರಪ್ರಥಮ ಮಹಿಳಾ ಜಗದ್ಗುರುಗಳೂ, ಶರಣ ಮೇಳದ ಸಚೇತಕ ಶಕ್ತಿಯೂ, ಕ್ರಾಂತಿಕಾರಿ ಧರ್ಮ ಪ್ರಚಾರಕರೂ ಆದ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

(ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ, ಧಾರವಾಡ)

ಅವರು 48 ವರ್ಷಗಳನ್ನು ಸಾರ್ಥಕವಾಗಿ ಪೂರೈಸಿ, 49 ನೆಯ ವರ್ಷಕ್ಕೆ ಪಾದಾರ್ಪಣ ಮಾಡುತ್ತಿರುವ ಸನ್ನಿವೇಶದಲ್ಲಿ **ಪೂಜ್ಯರ ವರ್ಧಂತಿಯನ್ನು** ಆಚರಿಸಲಾಗುತ್ತಿದೆ.

ಭಾನುವಾರ ದಿ. 13-3-1994 ರಂದು, ಬೆಳಿಗ್ಗೆ 10 ಗಂಟೆಗೆ

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ಪಾದಪೂಜೆ ಮತ್ತು ನುಡಿ ಕಾಣಿಕೆ ಸಮರ್ಪಣೆ.

ಸಂಜೆ 6-30 ಕ್ಕೆ

ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿ ವರ್ಧಂತಿ ಆಚರಣೆ.

ಸ್ಥಳ : **ಲಯನ್ಸ್ ಸಂಸ್ಥೆಯ ಹೆಣ್ಣು ಮಕ್ಕಳ ಶಾಲೆಯ ಆವರಣ.**

— ಸರ್ವರಿಗೂ ಆದರದ ಸುಸ್ವಾಗತ —

ಸೋದರಿ ನಾಗರತ್ನಮ್ಮ
ಸಂಚಾಲಕಿ.

ಕಲಘಟಗಿಯಲ್ಲಿ
ವಿಶ್ವಧರ್ಮ ಪ್ರವಚನ ಕಾರ್ಯಕ್ರಮ

ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರ ವಿಶ್ವಧರ್ಮ ಪ್ರವಚನ ಕಾರ್ಯಕ್ರಮವು, ಗುರುವಾರ ದಿ. 27-1-1994 ರಂದು ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿ ಆರಂಭವಾಗಿದ್ದು ದಿನದಿನಕ್ಕೆ ಅಧಿಕಧಿಕ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುತ್ತಿದೆ. ಕಲಘಟಗಿಯ ಸುತ್ತಲಿನ ಗ್ರಾಮಗಳಿಂದ ಜನರು ತಂಡೋಪತಂಡವಾಗಿ ಪ್ರತಿ ದಿನವೂ ಆಗಮಿಸುತ್ತಲಿದ್ದು ಹಬ್ಬದ ವಾತಾವರಣ ಮೂಡಿದೆ. **ಪೂಜ್ಯ ಶ್ರೀ ಗಂಗಾ ಮಾತಾಜಿಯವರ** ವಾಗ್ಮಿತ್ವ ಜನರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿದ್ದು ಅಪೂರ್ವ ಪ್ರಭಾವ ಬೀರುತ್ತಿದೆ.

Digitalized by e-Sahithya Documentation Forum
Sponsored by Sarayu Foundation Trust

ಬಸವ ಧರ್ಮ ಪೀಠದ ವತಿಯಿಂದ ಗಣಮೇಳ — ಧಾರವಾಡದಲ್ಲಿ

ಬಸವ ಧರ್ಮದ ಮಹಾಜಗದ್ಗುರು ಪೀಠದ ವತಿಯಿಂದ ಗಣಮೇಳವು (ಶರಣ ಗಣ ಸಮಾವೇಶವು) **ಧಾರವಾಡ ನಗರದ ಆರ್. ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ,** ಗುರುವಾರ ದಿ. 10–3–1994 ರಂದು ನಡೆಯಲಿದೆ. ಪೀಠಾಧೀಶರಾದ **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರ** ದಿವ್ಯ ಸನ್ನಿಧಿಯಲ್ಲಿ ನಡೆಯಲಿರುವ ಈ ಚಾರಿತ್ರಿಕ ಗಣಮೇಳವು ಜಗನ್ಮಾತಾ ಅಕ್ಕಮಹಾದೇವಿ ಪೀಠದ ಪ್ರಥಮ ಮಹಿಳಾ ಜಗದ್ಗುರು **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ** ಮಾರ್ಗದರ್ಶನದಲ್ಲಿ ನಡೆಯಲಿದೆ. **ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರೂ** ಭಾಗವಹಿಸಲಿದ್ದಾರೆ. ವೀಡಿಯೋ ಚಿತ್ರೀಕರಣ ನಡೆಯಲಿದೆ. **ಮಹಾಶಿವರಾತ್ರಿಯಂದು** ಬೆಳಿಗ್ಗೆ 10 ರಿಂದ 11–30 ರ ವರೆಗೆ ನಡೆಯಲಿರುವ **ಗಣಮೇಳಕ್ಕೆ** ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಗಣಮೇಳವನ್ನು ಹೇಗೆ ನಡೆಸಬೇಕು ಎಂದು ಪ್ರಾಯೋಗಿಕ ತರಬೇತಿ ಹೊಂದಲು ಯಾರಾದರೊಬ್ಬ ಪ್ರತಿನಿಧಿಯನ್ನು ಧಾರವಾಡಕ್ಕೆ ಕಳಿಸಿಕೊಟ್ಟು, ಇನ್ನುಳಿದ ಸದಸ್ಯರು ತಮ್ಮ ತಮ್ಮ ಊರುಗಳಲ್ಲಿ ಸಮುದಾಯ ಪ್ರಾರ್ಥನೆ ನಡೆಸಬೇಕು.

ಸಂಪರ್ಕಿಸುವ ವಿಳಾಸ : **ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ (ರಿ)**
ಉಳವಿ ರಸ್ತೆ, ರೇಲ್ವೆಗೇಟ್ ಬಳಿ,
ಧಾರವಾಡ–580003. ದೂರವಾಣಿ : 41005.

★ ಶರಣರ ಬರವೆಮಗೆ ಪ್ರಾಣಜೀವಾಳ ★

ಶರಣ ಬಂಧುಗಳು, ರಾಷ್ಟ್ರೀಯ ಬಸವ ದಳ,
ಧಾರವಾಡ ಮತ್ತು ಹುಬ್ಬಳ್ಳಿ.

ಕುಮಾರಿ ಶೃತಿ ಭಟ್ ರಂಗಪ್ರವೇಶ

ಈಗಾಗಲೇ ಶರಣ ಮೇಳದ ಮೂಲಕ ಅಸಂಖ್ಯಾತ ಶರಣ ಬಂಧುಗಳಿಗೆ ತನ್ನ ನೃತ್ಯ ಮತ್ತು ಪ್ರವಚನಗಳಿಂದ ಚಿರಪರಿಚಿತಳಾಗಿರುವ ಕುಮಾರಿ ಶೃತಿ ಭಟ್‌ಳ **'ರಂಗ ಪ್ರವೇಶ'** ಕಾರ್ಯಕ್ರಮವು ಧಾರವಾಡ ನಗರದ ಶ್ರೀ ಮಲ್ಲಿಕಾರ್ಜುನ ಮನಸೂರ ಕಲಾಭವನದಲ್ಲಿ ಮಾರ್ಚ್ 12 ರಂದು ನಡೆಯಲಿದ್ದು, ಆಸಕ್ತ ಶರಣರು ಭಾಗವಹಿಸಬೇಕು. ಸಂಜೆ 5 ರಿಂದ 8–30 ರ ವರೆಗೆ ನಡೆಯಲಿರುವ ಈ ರಂಗಪ್ರವೇಶ (ನೃತ್ಯಾರಂಭ) ಕಾರ್ಯಕ್ರಮವು **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ** ದಿವ್ಯ ಸನ್ನಿಧಿಯಲ್ಲಿ, ರಾಷ್ಟ್ರೀಯ ಬಸವ ದಳದ ಶರಣ ಬಂಧುಗಳ ಸಹಕಾರದಿಂದ ಏರ್ಪಾಡಾಗಿದೆ. ಶೃತಿಯು ವಿಶೇಷ ನರ್ತನವನ್ನು ಪ್ರದರ್ಶಿಸಲಿದ್ದಾಳೆ.

[ಪ್ರಾಯೋಜಕರು : ರಾಷ್ಟ್ರೀಯ ಬಸವ ದಳ.]

● ಸರ್ವರಿಗೂ ಆದರದ ಸುಸ್ವಾಗತ ●

7 ನೇ ಶರಣ ಮೇಳ :

ಬಸವಣ್ಣನವರ ಪರಿಪೂರ್ಣತೆ ಯಾವ ಪ್ರವಾದಿಗಳಿಂದಲೂ ಅಸಾಧ್ಯ

—ಶ್ರೇಷ್ಠ ಸಾಹಿತಿ ದೇ. ಜವರೇಗೌಡರು

ಬಸವ ಧರ್ಮಪೀಠವು ಮುಂದಿನ ಜನಾಂಗಕ್ಕೆ ಬಸವಣ್ಣನವರ ತತ್ತ್ವವನ್ನು ಬಿತ್ತಿ ನಾಡಿನಾದ್ಯಂತ ಉತ್ತಮ ವ್ಯಕ್ತಿತ್ವದ ಜನಾಂಗವನ್ನು ರೂಪಿಸಲು ಶ್ರಮಿಸುತ್ತಿರುವುದು ನಿಜಕ್ಕೂ ಸ್ತುತ್ಯಾರ್ಹವೆಂದು ಏಳನೇ ಬೃಹತ್ ಶರಣ ಮೇಳವನ್ನು ಉದ್ಘಾಟಿಸಿದ ಸುಪ್ರಸಿದ್ಧ ಸಾಹಿತಿ ದೇ. ಜವರೇಗೌಡರು ಹೇಳಿದರು. ಏಸುಕ್ರಿಸ್ತ ತನ್ನ ಜೀವಿತಾವಧಿಯಲ್ಲಿ ಏನನ್ನು ಹೇಳಿದನೆಂದು ದಾಖಲೆಗಳಿಲ್ಲ. ಆದರೆ ಅನಂತರದ ಶಿಷ್ಯರು ಬೈಬಲ್ಲನ್ನು ಬರೆದರು. ಶಾಂತಿ, ಪ್ರೇಮ ಸಂದೇಶವನ್ನು ಜಗತ್ತಿಗೇ ಹರಡಿದರು. ಬುದ್ಧನು ಸಹ ತನ್ನ ಜೀವಿತಾವಧಿಯಲ್ಲಿ ಏನನ್ನು ಹೇಳಿದನೆಂದು ಗೊತ್ತಿಲ್ಲ; ಅನಂತರ ಅವನ ಶಿಷ್ಯಂದಿರು ತ್ರಿಪೀಟಿಕೆಗಳನ್ನು ಬರೆದರು. ಆದರೆ ಬಸವಣ್ಣನವರಿಂದಲೇ ಬಂದ ವಚನಗಳಿಂದ ಸತ್ಯ ಯಾವುದು ಮಿಥ್ಯ ಯಾವುದು ಎಂಬುದನ್ನು ಅರಿತೆವು; ಆದರೆ ಎಷ್ಟೇ ಬಸವಾಮೃತವನ್ನು ಪಡೆದರೂ ಅವರಷ್ಟು ಪರಿಪೂರ್ಣವಾಗಿ ಅವರ ಮಟ್ಟವನ್ನು ಏರಲು ಜಗತ್ತಿನಲ್ಲೇ ಬಹುಶಃ ಯಾರಿಂದಲೂ ಸಾಧ್ಯವಾಗದು ಎನಿಸುತ್ತದೆ. ನಾವು ಎಷ್ಟೆಷ್ಟು ಎತ್ತರಕ್ಕೆ ಬೆಳೆಯುವೆವೋ ಬಸವಣ್ಣನವರು ಇನ್ನೂ ಎತ್ತರದಲ್ಲಿರುತ್ತಾರೆ. ಅವರೊಂದು ದೊಡ್ಡ ಸಾಗರವಿದ್ದಂತೆ. ನಮ್ಮ ನಮ್ಮ ವ್ಯಕ್ತಿತ್ವಕ್ಕನುಸಾರವಾಗಿ, ನಮ್ಮ ಸಾಮರ್ಥ್ಯಕ್ಕನುಸಾರವಾಗಿ ಪಡೆಯಬಹುದಷ್ಟೆ ! ಎಂದು ಹೇಳಿದರು.

ಶಂಕರಾಚಾರ್ಯರು ಹೆಣ್ಣು, ಹೊನ್ನು, ಜಗತ್ತು ಎಲ್ಲವೂ ಮಾಯೆ ಎಂದರು. ಆದರೆ ಬಸವಣ್ಣನವರು ಎಲ್ಲದರಲ್ಲೂ ದೈವತ್ವವನ್ನು ಕಂಡರು. "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ, ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರೆಂದರು." ಸ್ವರ್ಗ ನರಕಕ್ಕೆ ಹೋಗಿ ಇವತ್ತಿನವರೆಗೆ ಯಾರು ವಿವರಣೆ ಕೊಟ್ಟಿದ್ದಾರೆ ? ಎಂದು ಕೇಳಿದ ಅವರು ಈ ಲೋಕವನ್ನೆ ಭೇದ ಭಾವವಿಲ್ಲದ ಶಿವಲೋಕವನ್ನಾಗಿ ಪರಿವರ್ತಿಸುವ ಶ್ರೇಷ್ಟ ನೀತಿ ಶಾಸ್ತ್ರವನ್ನು ನಮಗೆ ಅವರು ಒದಗಿಸಿದ್ದಾರೆ ಎಂದು ಹೇಳಿದರು.

ಇಂಥ ಒಂದು ಕುಗ್ರಾಮದಲ್ಲಿ ಮಠವನ್ನು ಕಟ್ಟಿಕೊಂಡು ಲಕ್ಷ ಲಕ್ಷ ಜನರು ಇಲ್ಲಿ ನೆರೆಯುವಂತೆ ಪೂಜ್ಯದ್ವಯರು ಮಾಡಿರುವುದು ಸಾಮಾನ್ಯವಲ್ಲ, ಇಲ್ಲಿ ಬಸವಣ್ಣನವರು ಇರುವುದರಿಂದಲೇ, ಅವರ ಆಶೀರ್ವಾದದ ಅಭಯ ಹಸ್ತ ಬೆಂಗಾವಲಿಗಿರುವುದರಿಂದಲೇ ದುಷ್ಟಶಕ್ತಿಗಳ ಕಿರುಕುಳವನ್ನು ಮೆಟ್ಟಿ ಜನತೆ ಧರ್ಮದ ತಾಯಿ ಬೇರಿನ ಕಡೆ ಹರಿದು ಬರುತ್ತಿದೆ. ಇಂಥ ಪುನೀತ ಕ್ಷೇತ್ರಕ್ಕೆ ಬರಬೇಕಾದರೆ ನಿಜಕ್ಕೂ ಪುಣ್ಯಬೇಕು.

Digitalized by e-Sahithya Documentation Forum
Sponsored by Sarayu Foundation Trust

ಬಸವಣ್ಣ, ವಿವೇಕಾನಂದ, ಕುವೆಂಪು – ಈ ಮೂರೂ ಶಕ್ತಿಗಳು ನನ್ನಲ್ಲಿ ಬರದಿದ್ದರೆ ಈ ಅರ್ಹತೆಯೂ ನನ್ನಲ್ಲಿ ಇರುತ್ತಿರಲಿಲ್ಲವೇನೋ ಎನಿಸುತ್ತದೆ ಎಂದು ಹೇಳಿದರು.

ಬೆಂಗಳೂರು–ಮೈಸೂರುಗಳಂಥ ದೊಡ್ಡ ಊರುಗಳಲ್ಲಿ ಒಂದು ಸಭೆ ಕರೆದರೆ 500–1000 ಜನ ಸೇರುವುದಿಲ್ಲ. ಆದರೂ ಅಷ್ಟೇ ಜನಕ್ಕೆ ಗದ್ದಲವೆಷ್ಟು ? ಆದರೆ ಇಲ್ಲಿ ಲಕ್ಷಗಟ್ಟಲೇ ಜನ ಸೇರಿದ್ದರೂ ಎಷ್ಟು ಶಾಂತ ರೀತಿಯಿಂದ, ಶಿಸ್ತಿನಿಂದ ಆಲಿಸುತ್ತಿದ್ದೀರಿ. ಈ ದಿವ್ಯ ಸನ್ನಿಧಿಗೆ ಬಂದಿದ್ದೇವೆ, ಏನಾದರೂ ಉನ್ನತ ಮೌಲ್ಯಗಳನ್ನು ಪಡೆದುಕೊಂಡೇ ಹೋಗಬೇಕು ಎಂಬ ನಿರ್ಧಾರದಿಂದ ಕುಳಿತಂತಿದೆ ಎಂದು ಜನ ಸಮೂಹವನ್ನು ಅಭಿನಂದಿಸಿದರು. ಈ ದೇಶದಲ್ಲಿ ಎಷ್ಟೊಂದು ಮಠ ಪೀಠಗಳಿವೆ. ಆದರೆ ಇಂಥ ದಿವ್ಯಕ್ಷೇತ್ರ ಮಾತ್ರ ಮತ್ತೊಂದಿಲ್ಲ. ಪ್ರಪಂಚದಲ್ಲಿ ಅತ್ಯಂತ ದಿವ್ಯ, ಶ್ರೇಷ್ಠ ಶಕ್ತಿಯಾದ ಬಸವಣ್ಣನವರು ಇನ್ನೂ ಜೀವಂತವಿದ್ದಾರೆ. ವಿವೇಕಾನಂದರು "ನಾನು ಸತ್ತರೂ ನನ್ನ ಶಕ್ತಿ ಇಲ್ಲಿರಬೇಕು" ಎಂದು ಹೇಳಿದಂತೆ ಅವರು ದೇಹ ಬಿಟ್ಟರೂ ಜನ ಮನದಲ್ಲುಳಿದರು. ಅಂತೆಯೇ ಬಸವಣ್ಣನವರು ತಮ್ಮ ಜ್ಞಾನದ ಚಿದ್ ಬೆಳಕನ್ನು ನಾಡಿನಾದ್ಯಂತ ಹರಡಿ ಜಗತ್ತಿಗೆ ಚಿಜ್ಯೋತಿಯಾಗಿ ಬೆಳಗುತ್ತಲಿದ್ದಾರೆ ಎಂದು ದೇ. ಜವರೇಗೌಡರು ಹೃದಯ ತುಂಬಿ ಹೇಳಿದರು.

ಸರ್ಕಾರವು ಎಂಥದ್ದಕ್ಕೆಲ್ಲ ಹಣ ವಿನಿಯೋಗ ಮಾಡುತ್ತದೆ. 800 ವರ್ಷಗಳ ಹಿಂದೆ ಬಸವಣ್ಣನವರು ಹುಟ್ಟಿ ಯಾವ ಪ್ರವಾದಿಗಳಿಗೂ ಕಡಿಮೆ ಇಲ್ಲದಂತೆ ಕಾರ್ಯ ಸಾಧನೆ ಮಾಡಿದರು. ಇಂಥಹ ಮಹಾನ್ ವ್ಯಕ್ತಿಗಳನ್ನು ಕಡೆಗಣಿಸಿದರೆ ದೇಶಕ್ಕೆ, ಜನತೆಗೆ ಒಳ್ಳೆಯದಾಗುತ್ತದೆಯೆ? ಎಂದು ಪ್ರಶ್ನಿಸಿದ, ಅವರು, ಬಸವಣ್ಣನವರು ಹಿಂದೆ, ಬೆತ್ಲಹೆಮ್‌ನಲ್ಲಿ ಕ್ರಿಸ್ತನಾಗಿ ಹುಟ್ಟಿರಬೇಕು. ಕಪಿಲ ವಸ್ತುವಿನಲ್ಲಿ ಬುದ್ಧನಾಗಿ ಜನ್ಮಿಸಿರಬೇಕು, ಮೆಕ್ಕಾದಲ್ಲಿ ಪೈಗಂಬರ್‌ನಾಗಿ ಜನ್ಮಿಸಿರಬೇಕು. ನಂತರ 12 ಶತಮಾನದಲ್ಲಿ ಎಲ್ಲ ಜನ್ಮಗಳ ಸಾರವನ್ನು ಸಾರಲು ಪೂರ್ಣಾವತಾರಿಯಾಗಿ ಬಸವಣ್ಣನಾಗಿ ಜನ್ಮಿಸಿದರು. ಇಂಥಹ ಮಹಾನ್ ವ್ಯಕ್ತಿಗೆ ನಾವು ಶರಣಾಗಬೇಕು, ನಮ್ಮ ಸಂಪೂರ್ಣ ಭಕ್ತಿ ಗೌರವವನ್ನು ಸಲ್ಲಿಸಬೇಕು. ಅದು ಬಿಟ್ಟು ಬಸವಣ್ಣನವರನ್ನು ನಿಂದೆ ಮಾಡುವವರ ಬಾಯಲ್ಲಿ ಹುಳುಗಳು ಬೀಳುವವು ಎಂದೂ ಹೇಳಿದರು.

ಬಸವಣ್ಣನವರು ಇನ್ನೂ 10 ವರ್ಷ ಬದುಕಿದ್ದಲ್ಲಿ ಈ ಜಾತಿ ಎಂಬುದು ಇರುತ್ತಿರಲಿಲ್ಲ. ಹಾಗಾದರೆ ಬಸವಣ್ಣನವರು ಸೋತರೇ ? ಬುದ್ಧ ಸೋತನೇ ? ಇಲ್ಲ. ಅವರ ಭಾವನೆಗಳು ಆಚರಣೆಗಳು ಜಗತ್ತಿನಲ್ಲಿ ಇನ್ನೂ ಉಳಿದಿವೆ, ಅವರ ಭಾವನೆಗಳಿಗೆ ಆಲೋಚನೆಗಳಿಗೆ ಎಂದಿಗೂ ಸಾವಿಲ್ಲ, ಎಂದು ಹೇಳಿದ ಅವರು ಈ ಶರಣ ಮೇಳ ಎಂದೆಂದೂ ಹೀಗೆ ಮುನ್ನಡೆಯುವಲ್ಲಿ ಸಂಶಯವಿಲ್ಲ, ಇಲ್ಲಿ ಒಂದು ಸಂಶೋಧನೆ ನಡೆಯುವ ಕೇಂದ್ರವಾಗಬೇಕೆಂಬುದು ನನ್ನ ಅಪೇಕ್ಷೆ. ಅದನ್ನು ಸಹ ಈ ಬಸವ ಧರ್ಮ ಪೀಠ ಮಾಡುವಲ್ಲಿ ಅನುಮಾನವಿಲ್ಲ ಎಂದೂ ಹೇಳಿದರು.

ಇಂದು ನಮ್ಮ ರಾಜಕೀಯ ಜನ ಹೇಳುತ್ತಾರೆ, ನಿಮ್ಮನ್ನು 21ನೇ ಶತಮಾನಕ್ಕೆ ಕರೆದೊಯ್ಯುತ್ತಿದ್ದೇವೆ ಎಂದು. ಆದರೆ ಅದು ಎಷ್ಟರ ಮಟ್ಟಿಗೆ ನಿಜ ಎಂಬುದು

ನಿಮಗೇ ತಿಳಿದಿದೆ. ನಿಜಕ್ಕೂ ಧಾರ್ಮಿಕ ಮನೋಭಾವನೆ ಬೆಳೆಸಿ ರಾಷ್ಟ್ರ ಪ್ರೇಮವನ್ನು ಬೆಳೆಸುವ ಕತೃತ್ವ ಶಕ್ತಿ–ಕ್ರಿಯಾಶಕ್ತಿ ಈ ಗುರುದ್ವಯರಿಗೆ ಇದೆ. ಭಕ್ತಿಯು ಮುಖಾಂತರವಾಗಿ ಮನುಷ್ಯನ ಹೃದಯದಲ್ಲಿ ಕಲ್ಯಾಣ ಮೊದಲು ಸ್ಥಾಪನೆಯಾಗಬೇಕು. ಅದು ಇಂಥಹ ಮಹಾನ್ ವ್ಯಕ್ತಿಗಳಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಇಂದು ನಾವು ಜಗತ್ತಿನ ಪ್ರವಾದಿಗಳು ಮಾಡಿರುವ ಕಾರ್ಯಗಳನ್ನು ತುಲನಾತ್ಮಕವಾಗಿ ನೋಡಿದಾಗ ಯಾವ ಪ್ರವಾದಿಯೂ ಬಸವಣ್ಣನವರಷ್ಟು ಕಾರ್ಯಗಳನ್ನು ಮಾಡಿಲ್ಲ. ಒಬ್ಬೊಬ್ಬ ಪ್ರವಾದಿಗಳು ಒಂದೊಂದು ಕ್ರಾಂತಿಯನ್ನು ಮಾಡಿದರೆ ಬಸವಣ್ಣನವರು ಸಮಗ್ರ ಕ್ರಾಂತಿಯ ರುವಾರಿಗಳು. ಬಸವಣ್ಣನವರ ಪರಿಪೂರ್ಣತೆ, ಅವರ ವ್ಯಕ್ತಿತ್ವವನ್ನು ಜಗತ್ತಿನ ಯಾವ ಪ್ರವಾದಿಗಳಲ್ಲೂ ಕಾಣಲು ಸಾಧ್ಯವಿಲ್ಲ, ಅವರು ಪೂರ್ಣಾವತಾರಿಗಳು. ಸಾಮಾಜಿಕ, ಆಧ್ಯಾತ್ಮಿಕ, ಧಾರ್ಮಿಕ, ರಾಜಕೀಯ— ಹೀಗೆ ಎಲ್ಲ ರಂಗಗಳಲ್ಲಿ ಅವರ ಸುಧಾರಣೆಯನ್ನು ನಾವಿಂದು ತಂದರೆ ಜನತೆ ಸಂತೃಪ್ತಿ ಸುಯಿದಾನವನ್ನು ಕಾಣುವುದರಲ್ಲಿ ಸಂಶಯವಿಲ್ಲ. ಅಂಥ ಒಂದು ಪ್ರಯತ್ನ ಪೂಜ್ಯರಿಂದ ನಡೆದಿದೆ ಎಂದು ಹೇಳಲು ನನಗೆ ಹೃದಯ ತುಂಬಿ ಬರುತ್ತಿದೆ ಎಂದು ಹೇಳಿದರು.

ಈ ಸಮಾರಂಭ ನೋಡಿದಾಗ ವಿಶ್ವವನ್ನೇ ಸಂಪರ್ಕಿಸುವಂಥ ದೇವನ ಕಾರುಣ್ಯ ಉಳ್ಳವರು ಬಂದಿದ್ದಾರೇನೋ ಎನಿಸುತ್ತಿದೆ. ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು ಹಾಗೂ ಪೂಜ್ಯ ಮಾತಾಜಿಯವರಲ್ಲಿ ಅಪಾರವಾದ ಬಸವಣ್ಣನವರ ಕರುಣೆ ಹರಿದು ಬಂದಿದ್ದು, ಇಲ್ಲಿ ನೆರೆದಿರುವ ಲಕ್ಷಾಂತರ ಜನರನ್ನು ಸಂಘಟಿಸಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಬಸವಣ್ಣನವರು ತಮ್ಮ ಕಾರ್ಯಗಳನ್ನೆಲ್ಲ ಇವರ ಮೂಲಕವೇ ಮಾಡಿಸಿಕೊಳ್ಳುತ್ತಿದ್ದಾರೆಂದು ಅನಿಸುತ್ತಿದೆ ಎಂದು ದೇ. ಜವರೇಗೌಡರು ಮನತುಂಬಿ ಮಾತನಾಡಿದರು.

(ಬಸವ ಕಿರಣದ ವರದಿ) —ವರದಿ, ಶರಣೆ. ಜಯಮ್ಮ ಚಂದ್ರಪ್ಪ

ಬಸವ ಸಂದೇಶ

- ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೇ.
- ಮರ್ತ್ಯಲೋಕವೆಂಬುದಿದು ಕರ್ತಾರನ ಕಮ್ಮಟ.
- ಇಲ್ಲಿ ಸಲ್ಲುವವರು ಅಲ್ಲಿ ಸಲ್ಲುವರು.
- ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು.
- ಕುಲತನ ಇರುವುದು ಜಾತಿಯಲ್ಲಲ್ಲ ; ಗುಣ ನಡತೆಗಳಲ್ಲಿ.
- ಗುರುತ್ವ ದೊರೆಯುವುದು ಜಾತಿಯಿಂದಲ್ಲ ; ಅರ್ಹತೆಯಿಂದ.

Digitalized by e-Sahithya Documentation Forum
Sponsored by Sarayu Foundation Trust

ಬಸವ ತತ್ತ್ವದ ಸಿರಿಮೇಳ

ಹೊತ್ತಿತೋ ಹೊತ್ತಿತು ಶರಣ ಮೇಳದ ದೀಪ
ಕಳೆಯಿತೋ ಕಳೆಯಿತು ಶತಮಾನಗಳ ಶಾಪ ॥ಪ॥

ಜ್ಞಾನ, ಭಕ್ತಿ, ವಿರಕ್ತಿಯ ತುಂಬಿ ತಂದ ಮೇಳವು
ಸಮಾನತೆ ಬಸವ ತತ್ತ್ವ ಬಿಂಬಿಸುವಾ ಸೂತ್ರವು
ಜಾತಿ, ವರ್ಣ, ವರ್ಗ, ಭೇದ ಮೆಟ್ಟಿನಿಂತ ತಂತ್ರವು
ಅಜ್ಞಾನ, ಮೂಢಾಚಾರ ಅಳಿಸುವಾ ಮಂತ್ರವು ॥೧॥

ಉದ್ದಡ್ಡ ಪಲ್ಲಕ್ಕಿಯ ವೈಭವವಿಲ್ಲಿಲ್ಲ
ಆಡಂಬರ ಡಂಭಾಚಾರದ ಮೆರೆತವಿಲ್ಲಿಲ್ಲ
ಮಾರಿ, ಶನಿ, ಮಸಣಿಯರ ಕಾಟವಿಲ್ಲಿಲ್ಲ
ನವಗ್ರಹ ನಾಗಗಳೆಲ್ಲ ಪಾತಾಳಕಿಳಿದುವಲ್ಲಾ ॥೨॥

ಮರುಕಳಿಸಿದೆ ಈಗ ಹನ್ನೆರಡನೇ ಶತಮಾನ
ಕೂಡಲ ಸಂಗಮವಾಯ್ತು ಭಕ್ತಿಯ ಉದ್ಯಾನ
ಎಲ್ಲೆಡೆಯೂ ತತ್ತ್ವವ ಸಾರುವ ಆಂದೋಲನ
ಬಸವ ಜ್ಯೋತಿ ಬೆಳಗುತಿದೆ ದೇದೀಪ್ಯಮಾನ ॥೩॥

—ಶರಣೆ. ಜಯಮ್ಮ ಚಂದ್ರಪ್ಪ, ಶಿವಮೊಗ್ಗ.

ಬಸವ ಪೀಠವು ಎದ್ದು । ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು । ಧರೆಯುವಗೆ
ವಶವಾಗದಿಹುದೆ ಸರ್ವಜ್ಞ ॥

ಗಣ ಮೇಳ ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಲು ಕರೆ

ಶರಣ ಬಂಧುಗಳೇ,

ಮಹಾಶಿವರಾತ್ರಿಯಂದು ಗಣ ಸಮಾವೇಶ ನಡೆಸುವುದು ಮತ್ತು ಗಣಮೇಳದ ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗುವುದು ಎಲ್ಲರ ಕರ್ತವ್ಯವೆಂದು ಭಾವಿಸಿರಿ. ಧರ್ಮಪಿತ ಬಸವಣ್ಣನವರು ಹೇಳುತ್ತಾರೆ.

ಭವ ಪಾಶವು ಭವ ಬಂಧನವಾದ ಕಾರಣವೇನಯ್ಯ
ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ
ಹಿಂದಣ ಸಿರಿಯಲ್ಲಿ ಜಂಗಮವ ಜರಿದೆನಾಗಿ

ಎಂದು. ಅವರು ವ್ಯಕ್ತಿಯ ಭವ ಬಂಧನಕ್ಕೆ ಕಾರಣ ಲಿಂಗವನ್ನು (ಅರ್ಥಾತ್ ದೇವರನ್ನು) ಮರೆದುದು, ಶ್ರೀಮಂತಿಕೆಯ ಮದದಲ್ಲಿ ಜಂಗಮವನ್ನು (ಅರ್ಥಾತ್ ಮಹಾತ್ಮರನ್ನು) ಜರಿದುದು ಎಂಬುದಾಗಿ ಹೇಳುತ್ತಾರೆ. ಇದರ ಬೆಂಬಳಿವಿಡಿದು ನನಗೆ ಹೀಗೆ ಹೇಳಬೇಕು ಎನ್ನಿಸುತ್ತಿದೆ.

ಇಂದಿನ ಲಿಂಗವಂತ ಸಮಾಜದ ದುಃಸ್ಥಿಗೆ,

1. ಗುರು ಬಸವಣ್ಣನವರನ್ನು ಮರೆತುದು
2. ಇಷ್ಟ ಲಿಂಗಧಾರಣೆ ಬಿಟ್ಟುದು
3. ಸಮಾಜ ಪ್ರಜ್ಞೆ ಕಳೆದುಕೊಂಡು ಸ್ವಾರ್ಥಿಗಳು, ಸ್ವ ಹಿತಾಸಕ್ತರೂ ಆದುದು

ಕಾರಣ ಎನ್ನಿಸುತ್ತಿದೆ. ಕಾರಣಗಳಿವು ಎಂದು ತಿಳಿದು, ಬಳಿಕ ಈಗ ಪರಿಹಾರ ಕಂಡುಕೊಳ್ಳಲು ತಡವಾಗದು.

ಪ್ರತಿ ವಾರಕ್ಕೊಮ್ಮೆ ಧರ್ಮಬಂಧುಗಳು ಒಂದೆಡೆ ಕೂಡಿ ಪ್ರಾರ್ಥನೆ–ಅನುಭವ ಗೋಷ್ಠಿ ಮಾಡಬೇಕು. ಹಾಗೆಯೇ ವರ್ಷಕ್ಕೊಮ್ಮೆ ಮಹಾಶಿವರಾತ್ರಿಯಂದು ಒಂದೆಡೆ, ಅವರವರ ಊರುಗಳಲ್ಲಿ ಕೂಡುವ ಪರಿಪಾಠ ಬೆಳೆಸಲು "ಗಣ ಮೇಳ" ನಡೆಸುವ ನಿರ್ಣಯ ತೆಗೆದುಕೊಂಡಾಗಿದೆ.

1) ಈ ಗಣ ಸಮಾವೇಶದಲ್ಲಿ ಭಾಗಿಯಾಗಲೇಬೇಕೆಂಬ ಪವಿತ್ರ ನಿರ್ಧಾರ ಕೈಗೊಳ್ಳಿರಿ.
2) ನಿಮ್ಮ ಊರಿನಲ್ಲಿ ಏರ್ಪಡಿಸಲು ಪ್ರಯತ್ನ ಮಾಡಿರಿ; ಎಷ್ಟೇ ಜನ ಸೇರಿದರೂ ಪರವಾಗಿಲ್ಲ.
3) ಅನಿವಾರ್ಯವಾಗಿ ನಿಮ್ಮ ಊರಿನಲ್ಲಿ ಗಣ ಮೇಳ ಏರ್ಪಡಿಸಲು ಆಗದಿದ್ದರೆ ಅದು ನಡೆಯಲು ಏರ್ಪಾಡಾಗಿರುವಲ್ಲಿಗೆ ಹೋಗಿರಿ.
4) ಎಲ್ಲಿಯೂ ನಿಮಗೆ ಲಭ್ಯವಾಗದಿದ್ದರೆ ಶಿವರಾತ್ರಿಯಂದು ಬೆಳಿಗ್ಗೆ 10 ರಿಂದ 11–30 ರ ವರೆಗೆ ನಿಮ್ಮ ಮನೆಯ ಎಲ್ಲರನ್ನೂ, ಅಕ್ಕಪಕ್ಕದವರನ್ನು ಕೂರಿಸಿಕೊಂಡು ಪ್ರಾರ್ಥನೆ ಮಾಡಿರಿ.

Digitalized by e-Sahithya Documentation Forum
Sponsored by Sarayu Foundation Trust

5) ಯಾರೂ ಇರದಿದ್ದರೆ ನೀವು ಒಬ್ಬರೇ ಆದರೂ ಮಾಡಿರಿ. ನಿಮ್ಮ ಈ ನಿಷ್ಠೆ ಹೇಗೆ ಫಲಕೊಡುವುದೆಂಬುದನ್ನು ನೋಡುವಿರಂತೆ.

ಸುಪ್ರಭಾತದಲ್ಲಿ ಎದ್ದು ಸ್ನಾನ–ಪೂಜೆ ಮಾಡಿಕೊಂಡು ಸಮುದಾಯ ಪ್ರಾರ್ಥನೆಗೆ ಅಣಿಯಾಗಿರಿ. ಉಪವಾಸ ಕಡ್ಡಾಯವಲ್ಲ. ಅವರವರ ನಂಬಿಕೆ, ಆರೋಗ್ಯ ಪರಿಸ್ಥಿತಿ ಗಮನಿಸಿ ಉಪಾಹಾರ ಮಾಡಿಕೊಂಡೂ ಸಹ ಪ್ರಾರ್ಥನೆಗೆ ಹೋಗಬಹುದು. ಬೆಳಿಗ್ಗಿಯ ಸ್ನಾನ–ಪೂಜೆ ಕಡ್ಡಾಯ ಅಂಶಗಳು. 10 ಗಂಟೆಗೆ ಸರಿಯಾಗಿ ಕಹಳೆ ಅಥವಾ ಗಂಟೆ ಮೊಳಗಿಸಿ ಧ್ವಜಾರೋಹಣ ಕಾರ್ಯಕ್ರಮ ಆರಂಭಿಸಿರಿ. ಮೊದಲು "ಕರ್ತನ ಸೃಷ್ಟಿಯೊಳು" ಹಾಡಬೇಕು. ನಂತರ ಧ್ವಜಾರೋಹಣ ಮಾಡಿ "ಹೇ ಶರಣ ಬಂಧುಗಳೇ" ಹಾಡಬೇಕು. ನಂತರ "ಬಸವ ಭಕ್ತರು ನಾವು" ಎಂಬ ಹಾಡು–ಪ್ರತಿಜ್ಞಾ ಪೂರ್ವಕವಾಗಿ ಹಾಡಬೇಕು.

ಎಲ್ಲರೂ ವೇದಿಕೆ ಬಳಿಗೆ ಸಾಗಿ ಸಾಲಾಗಿ ನಿಂತುಕೊಳ್ಳಬೇಕು. ಆಗ ನಿರ್ವಾಹಕರು ಆದಿ ಪ್ರಮಥ ಬಸವಣ್ಣನವರನ್ನು "ಮುಕ್ತಿದಾಯಕ ಶರಣ ರಕ್ಷಕ" ಹಾಡಿ ಪೂಜಿಸುವರು. ಪೂಜಾ ನಂತರ ಎಲ್ಲರೂ ಸಾಲಾಗಿ, ಬಿಡಿಯಾಗಿ ಕುಳಿತುಕೊಳ್ಳಬೇಕು.

ತರಬೇತಿ ಹೊಂದಿದ ನಿರ್ವಾಹಕ ಶರಣರು ಪ್ರಾರ್ಥನೆ ಮಾಡಿಸುವರು.

[ಸಾಮೂಹಿಕ ಪ್ರಾರ್ಥನೆ ಪುಸ್ತಕ ನೋಡಿರಿ]

1. ಓಂ ಶ್ರೀ ಗುರು ಬಸವಲಿಂಗಾಯ ನಮಃ
2. ಬಸವಂ ಪ್ರಣವಾಕಾರಂ.
3. ಸಾಂಬ ಸದಾಶಿವ, ಶ್ರೀ ಗುರು ಬಸವ ಲಿಂಗಾಯ ನಮಃ
4. ಓಂ ಗುರುದೇವ, ಓಂ ಬಸವಾ.
5. ಕರುಣಾಳು ಹೃತ್ಕಮಲವಾಸ
6. ಪ್ರಭೋ ನೀನು ಸರ್ವವ್ಯಾಪಿಯಾಗಿರುವೆ.
7. ಮೌನ ಧ್ಯಾನ.
8. ವಚನಗಳು ಚಕೋರಂಗೆ, ವಚನದಲ್ಲಿ, ಮಂಡಿಕೆಯ ಮಾಡುವರೆ.
9. ಶ್ರೀ ಮಹಾಕಾರಣಿಕ ಪ್ರಣವ,
10. ಷಟ್‌ಸೂತ್ರ ಘೋಷಣೆ
11. ಸಂದೇಶ ವಾಚನ.
12. ದ್ವಾದಶ ಪ್ರತಿಜ್ಞಾ ವಿಧಿ.
13. ಕಲ್ಲು ಸಕ್ಕರೆ ಪ್ರಸಾದ ವಿತರಣೆ, ಗುರುಕಾಣಿಕೆಗಾಗಿ ಬಿಂದಿಗೆ ಹಿಡಿಯುವುದು.
14. ಮಂಗಲ. 15. ಶರಣು ವಿನಿಮಯ.

ಪ್ರಾರ್ಥನಾ ಸಭೆಯಲ್ಲಿ ಶಾಂತಿ–ಶಿಸ್ತು ಕಾಯ್ದುಕೊಳ್ಳಬೇಕು. ಚಿಕ್ಕ ಮಕ್ಕಳಿದ್ದವರು ಹಿಂದಿನ ಸಾಲುಗಳಲ್ಲಿ ಕುಳಿತುಕೊಳ್ಳಬೇಕು.

ಧರ್ಮದಲ್ಲಿ ಜೀವಂತಿಕೆ ಬರಬೇಕಾದರೆ ಭಕ್ತಿ–ಶ್ರದ್ಧೆ ಬಹುಮುಖ್ಯ. ಆದ್ದರಿಂದ ಬಸವ ತತ್ತ್ವಾನುಯಾಯಿಗಳು ಪ್ರತಿಯೊಬ್ಬರೂ ತಪ್ಪದೆ ಪ್ರಾರ್ಥನೆಯಲ್ಲಿ ಭಾಗಿಗಳಾಗಬೇಕು,

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ,

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

1. ಧರ್ಮಗುರು
   –ವಿಶ್ವಗುರು ಬಸವಣ್ಣನವರು.
2. ಧರ್ಮ ಸಂಹಿತೆ
   –ಸಮಾನತೆ ಸಾರುವ ವಚನ ಸಾಹಿತ್ಯ.
3. ಧರ್ಮ ಲಾಂಛನ
   –ವಿಶ್ವಾತ್ಮನ ಕುರುಹಾದ ಇಷ್ಟಲಿಂಗ.
4. ಧರ್ಮ ಕ್ಷೇತ್ರ
   –ಬಸವಣ್ಣನವರ ಐಕ್ಯಕ್ಷೇತ್ರ ಕೂಡಲಸಂಗಮ.
5. ಧರ್ಮ ಧ್ವಜ
   –ಷಟ್ಕೋನ ಸಹಿತ ಬಸವ ಧ್ವಜ.
6. ಧರ್ಮದ ಧ್ಯೇಯ
   –ಜಾತಿ ವರ್ಣವರ್ಗರಹಿತ, ಧರ್ಮ ಸಹಿತ ಕಲ್ಯಾಣರಾಜ್ಯ ನಿರ್ಮಾಣ.

ಶರಣ ಮೇಳಕ್ಕಾಗಿ ಮುಡಿಪು

ಪ್ರತಿವರ್ಷವೂ ಬಸವ ಕ್ರಾಂತಿ ದಿನದಂದು (ಜನವರಿ 14, ಮಕರ ಸಂಕ್ರಾಂತಿ) ನಡೆಯುವ ಶರಣ ಮೇಳದಲ್ಲಿ ಭಾಗಿಗಳಾಗುವುದು ಎಲ್ಲರ ಆದ್ಯ ಕರ್ತವ್ಯ ಎಂದು ಭಾವಿಸಬೇಕು. ಮುಸ್ಲೀಮರಿಗೆ ಮೆಕ್ಕಾ, ಕ್ರೈಸ್ತರಿಗೆ ಜೆರೂಸಲೆಮ್, ಬೌದ್ಧರಿಗೆ ಗಯೆ, ಸಿಖ್ಖರಿಗೆ ಅಮೃತಸರ ಪವಿತ್ರ ಧರ್ಮಕ್ಷೇತ್ರವಾದಂತೆ ಬಸವ ತತ್ತ್ವಾನುಯಾಯಿಗಳಿಗೆ ಕೂಡಲಸಂಗಮವೇ ಧರ್ಮಕ್ಷೇತ್ರ. ಗುರು ಬಸವಣ್ಣನವರ ವಿದ್ಯಾಭೂಮಿ, ತಪೋಭೂಮಿ, ಐಕ್ಯಸ್ಥಾನ ಕೂಡಲ ಸಂಗಮದಲ್ಲಿ ವರ್ಷಕ್ಕೊಮ್ಮೆ ಬಸವ ತತ್ತ್ವಾನುಯಾಯಿಗಳು ಸೇರಲೆಂದೇ ರೂಪುಗೊಂಡಿದೆ ಚಾರಿತ್ರಿಕ ಶರಣ ಮೇಳ. ಪ್ರತಿಯೊಬ್ಬರೂ ಬರಲು ಆರ್ಥಿಕ ಅನುಕೂಲತೆಯಾಗಲೆಂದು "ಶರಣ ಮೇಳ" ಕ್ಕಾಗಿ ಮುಡಿಪು ತೆಗೆದಿಡಿ. ನೀವು ಬಂದು ಭಾಗಿಗಳಾಗಲು ಈ ನಿಧಿ ಸಹಕಾರಿಯಾಗುತ್ತದೆ. ಅಕಸ್ಮಾತ್ ನಿಮಗೆ ಬರಲು ಅನುಕೂಲವಾಗದಿದ್ದರೆ ನಿಮ್ಮ ಮುಡುಪಿನ ಹಣವನ್ನು ಡಿ; ಡಿ/ಎಂ. ಓ. ಮೂಲಕ ಕಳಿಸಿಕೊಟ್ಟು, ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಲು ಅನುಕೂಲವಾಗುವುದು.

Digitalized by e-Sahithya Documentation Forum
Sponsored by Sarayu Foundation Trust

ಶರಣು ಬಸವ ಶರಣು

ಬಸವ ಶರಣೆನೆ ಪಾಪವಳಿವುಗುಂ
ಬಸವ ಶರಣೆನೆ ತಾಪವಾರುಗುಂ
ಬಸವ ಶರಣೆನೆ ಪರಮಪಾವನ ಭಾತಿ ಸಂಧಿಸುಗುಂ ।
ಬಸವ ಶರಣೆನೆ ಭಕ್ತಿ ದೊರಕುಗುಂ
ಬಸವ ಶರಣೆನೆ ಸಾರ್ಗು ಸುಸ್ಥಿತಿ
ಬಸವ ಶರಣೆನೆ ವಚನರಚನಾಸಿದ್ಧಿ ವರ್ಧಿಸುಗುಂ ॥೧॥

ಬಸವ ಶರಣೆನೆ ಭವವುಡುಗುವುದುಂ
ಬಸವ ಶರಣೆನೆ ಕೀರ್ತಿಯೆಸೆವುದು
ಬಸವ ಶರಣೆನೆ ದುಃಸ್ಥಿತಿಗಳತತ್ತಲೋಡುವುದು ।
ಬಸವ ಶರಣೆನೆ ಸೌಖ್ಯಮೊಂದುಗುಂ
ಬಸವ ಶರಣೆನೆ ಭಾಗ್ಯವಪ್ಪುಗುಂ
ಬಸವ ಶರಣೆನೆ ಕಾಮಿತೋನ್ನತಸಿದ್ಧಿ ಸಿದ್ಧಿಸುಗುಂ ॥೨॥

ಬಸವ ಶರಣೆನೆ ಶೀಲವೊಪ್ಪುಗುಂ
ಬಸವ ಶರಣೆನೆ ವಿಮಲಮತಿ ರಂ
ಜಿಸುವುದುಸುರವುದೇಂ ಬಸವನೆಂಬಕ್ಷರತ್ರಯುವ ।
ಒಸೆದು ಚಿತ್ತದೊಳೊಮ್ಮೆಯುಂ ಪರಿ
ಯಿಸುವನಾವನವನೆ ವದನಸಾ
ರಸದ ನೆಲೆಯಾಗಿಪ್ಪನೀಶ್ವರನೆಂದೊಡಂತಾಗಿ ॥೩॥

—ಭೀಮಕವಿ

KALYANA KIRANA - monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.
Phone : 8437234

ಕುಮಾರಿ ಶೃತಿ ಕೆ. ಎಂ. ಭಟ್ಟ

ಅವರ ರಂಗಪ್ರವೇಶ

ಶರಣ ಬಂಧುಗಳೇ,

ಬಾಲ ಪ್ರತಿಭೆ ಕುಮಾರಿ ಶೃತಿ "ಶರಣ ಮೇಳದ" ಮೂಲಕ ನಮಗೆಲ್ಲ ಚಿರ-ಪರಿಚಿತಳು. ವಚನಾಭಿನಯಕ್ಕೆ ಒತ್ತುಕೊಟ್ಟು ನೃತ್ಯಾಭ್ಯಾಸ ಮತ್ತು ಪ್ರದರ್ಶನ ನೀಡುವ ಕುಮಾರಿ ಶೃತಿಯು ರಂಗ ಪ್ರವೇಶವನ್ನು ರಾಷ್ಟ್ರೀಯ ಬಸವ ದಳದ ಆಶ್ರಯದಲ್ಲಿ ದಿ. 12–3–1994 ರಂದು ಸಂಜೆ 5 ಗಂಟೆಗೆ **ಧಾರವಾಡ ನಗರದ ಶ್ರೀ ಮಲ್ಲಿಕಾರ್ಜುನ ಮನ್ಸೂರ್ ಕಲಾಭವನದಲ್ಲಿ** ಏರ್ಪಡಿಸಿದ್ದೇವೆ. **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ** ದಿವ್ಯ ಸನ್ನಿಧಿಯಲ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಈ ಆಹ್ವಾನ ಮತ್ತು ಎಲ್ಲ ರಾಷ್ಟ್ರೀಯ ಬಸವ ದಳಗಳವರು ಮತ್ತು ಶರಣ ಬಂಧುಗಳು ಈ ಕಾರ್ಯಕ್ರಮದ ನಿರ್ವಹಣೆಗೆ ಉದಾರವಾದ ಧನ ಸಹಾಯವನ್ನು ಮಾಡಬೇಕೆಂದು ಕೋರಿಕೆ.

ಶರಣುಗಳೊಂದಿಗೆ,
ತಮ್ಮ ವಿಶ್ವಾಸಿ,
ಸುಬ್ಬಣ್ಣ ನಂಜಪ್ಪ ನ್ಯೆಸೂರು

ಹಣವನ್ನು ಕಳಿಸುವ ವಿಳಾಸ :
ರಾಷ್ಟ್ರೀಯ ಬಸವ ದಳ,
ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ,
ಉಳವಿ ರಸ್ತೆ, ರೇಲ್ವೆಗೇಟ್.
ಧಾರವಾಡ-580003. ದೂರವಾಣಿ : 41005

ಶರಣ ಬಂಧುಗಳಲ್ಲಿ ಕ್ಷಮೆ ಕೋರಿ

ಶರಣ ಮೇಳಕ್ಕೆ ಧನ ಸಹಾಯ ಮಾಡಿರುವವರ ಯಾದಿ ದೊಡ್ಡದಿದೆ ಮತ್ತು ಬಸವ ಧರ್ಮ ಪೀಠಕ್ಕೆ ನವೆಂಬರ್ ಡಿಸೆಂಬರ್ ತಿಂಗಳಲ್ಲಿ ಕಟ್ಟಡ ನಿಧಿ, ದಾಸೋಹ ನಿಧಿಗೆ ಧನ ಸಹಾಯ ಮಾಡಿದವರ ಪಟ್ಟಿಯೂ ದೊಡ್ಡದಿದೆ. ಶರಣ ಮೇಳಕ್ಕೆ ಬಂದಾಗಲೂ ಕಟ್ಟಡ ನಿಧಿ, ದಾಸೋಹ ನಿಧಿಗೆ ಸಹಾಯ ಮಾಡಿದವರ ಹೆಸರುಗಳಿವೆ. ಕಾರಣಾಂತರದಿಂದ ಈ ಸಂಚಿಕೆಯಲ್ಲಿ ಮುದ್ರಿಸಲು ಆಗದ್ದಕ್ಕೆ ಕ್ಷಮೆ ಕೋರುತ್ತೇವೆ. ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದಾಗಿ ಭರವಸೆ ನೀಡುತ್ತೇವೆ ಈ ವಿಳಂಬಕ್ಕೆ ಕ್ಷಮೆ ಇರಲಿ.

ಸೋದರಿ ಕಸ್ತೂರಿ, ವ್ಯವಸ್ಥಾಪಕಿ.

Digitalized by e-Sahithya Documentation Forum
Sponsored by Sarayu Foundation Trust

KRNB 312/BGW-93 February 1994



Digitalized by e-Sahithya Documentation Forum
Sponsored by Sarayu Foundation Trust